

ಪ್ರಬೋಧನೆ


ಲಂಕೇಶ್

ಪರಪ್ಪನ ಅಗ್ರಹಾರದ ಮಹಿಳಾ ಲೋಕ

ನವೆಂಬರ್ 30, 2011 ಪುಟ 20 ರೂ. 14/-







ಪ್ರಾಮಾಣಿಕ ಹೆಗ್ಡೆ ವಿರುದ್ಧ

ಭ್ರಷ್ಟರ ಯುದ್ಧ!





ಸೋಮಣ್ಣ-ಯಡ್ಡಿ ಮಸಲತ್ತು

ಟಾರ್ಗೆಟ್ ಅಶೋಕ್

ಅಮ್ಮನಿಗೆ ಗಂಭೀರ ಕಾಯಿಲೆ

ಮಧುಕರ್ ಶೆಟ್ಟಿಯವರಿಗೊಂದು ಬಹಿರಂಗ ಪತ್ರ
"ಏನೋ ಮಾಡಲು ಹೋಗಿ..."


ಮಧುಕರ್ ಶೆಟ್ಟಿ

ಪ್ರಿಯ ಮಧುಕರ್ ಶೆಟ್ಟಿಯವರೇ,

ಮೊನ್ನೆ ಭಾನುವಾರ ವಿಶ್ವೇಶ್ವರ ಭಟ್ಟರ ಕನ್ನಡ ಪ್ರಭದಲ್ಲಿ ನಿಮ್ಮ ಸಂದರ್ಶನ ಓದಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಭ್ರಷ್ಟಾಚಾರಿಗಳಿದ್ದಾರೆಂಬ, ಲೋಕಾಯುಕ್ತ ಪ್ರಚಾರಪ್ರಿಯರೆಂಬ ಮತ್ತು ಪ್ರಾಮಾಣಿಕತೆಯನ್ನು ಒಂದು ಸಂಸ್ಥೆಗೆ ಗುತ್ತಿಗೆ ವಹಿಸಲಾಗದೆಂಬ ನಿಮ್ಮ ಹೇಳಿಕೆಗಳು ಆಶ್ಚರ್ಯವನ್ನೂ ಹುಟ್ಟಿಸಲಿಲ್ಲ, ತಪ್ಪೂ ಎನಿಸಲಿಲ್ಲ. ಆದರೆ ನಿಮ್ಮ ಸಂದರ್ಶನದ ಸಂದರ್ಭ, ಅದು ಪ್ರಕಟವಾದ ಪತ್ರಿಕೆ ಮತ್ತು ಅದು ಬಳಕೆಯಾಗುತ್ತಿರುವ ಬಗೆ ಮಾತ್ರ ನನ್ನಲ್ಲಿ ಆಶ್ಚರ್ಯವನ್ನೂ, ವಿಷಾದವನ್ನೂ, ಪ್ರಶ್ನೆಗಳನ್ನೂ ಹುಟ್ಟುಹಾಕಿದೆ.


ನಿಮ್ಮ ಬಗ್ಗೆ, ನಿಮ್ಮ ಪ್ರಾಮಾಣಿಕತೆ, ನಿಷ್ಠೂರತೆ, ನೈತಿಕತೆಗಳ ಬಗ್ಗೆ ನಿಮ್ಮ ಕಾಲೇಜು ದಿನಗಳ ಸ್ನೇಹಿತರಿಂದ ಕೇಳಿ ತಿಳಿದಿದ್ದೆ. ನಿಮ್ಮಂಥಾ ಸೂಕ್ಷ್ಮ ಮನಸ್ಸಿನವರು ಎಲ್ಲಾ ಬಿಟ್ಟು ಪೊಲೀಸ್ ಇಲಾಖೆಯನ್ನು ಏಕೆ ಸೇರಿದರು ಎಂತಲೂ ಅವರನ್ನು ಪ್ರಶ್ನಿಸಿದ್ದೆ. ಅಂಥವರು ಒಂದೋ ಪೊಲೀಸ್ ಇಲಾಖೆಯಲ್ಲಿ ಬಹಳ ದಿನ ಉಳಿಯಲಾರರು ಅಥವಾ ತಮ್ಮತನವನ್ನು ಉಳಿಸಿಕೊಂಡು ಉಳಿಯಲಾರರು ಎಂದೂ ಹೇಳಿದ್ದರು. ಇಲ್ಲವಾದರೆ ತೀವ್ರ ನೈತಿಕ ಗೊಂದಲದಲ್ಲಿ ವ್ಯಕ್ತಿಗತ ಪರಿಶುದ್ಧತೆಯ ನೆಲೆಯಲ್ಲಿ ಉಳಿದುಕೊಂಡರೂ (?) ಸಾಮಾಜಿಕವಾಗಿ ಸಿನಿಕರಾಗಿಬಿಡಬಹುದೆಂದೂ ಅವರಿಗೆ ಅನಿಸಿತ್ತು.

ನೀವು ವೀರಪ್ಪನ್ "ಬೇಟೆ"ಯ ಸರ್ಕಾರಿ ಶಿಕಾರಿಯಲ್ಲಿ ಸೇರಿಕೊಂಡ ಗುರಿಕಾರರಲ್ಲಿ ಒಬ್ಬರು ಎಂದು ಗೊತ್ತಾದಾಗ ಅಂದಿನ ರ್‍ಯಾಡಿಕಲ್ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಮತ್ತು ಸಮಾಜಶಾಸ್ತ್ರವನ್ನು ಕಲಿತ ನಿಮ್ಮಂತವರೂ ಸಹ ವೀರಪ್ಪನ್ ಸಮಸ್ಯೆಯನ್ನು ಪ್ರಭುತ್ವದ ರೀತಿ ಸರಳವಾಗಿ ಮತ್ತು ಅಪಾಥಭೂತಿತನದಿಂದ ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ ಎಂಬ ಪ್ರಶ್ನೆ ಹುಟ್ಟಿತ್ತು. ಅಲ್ಲಿದ್ದ ಶಂಕರ್ ಬಿದರಿಯಂಥ ಬಹಳಷ್ಟು "ವೀರಾಧಿವೀರರು" ವೀರಪ್ಪನ್‌ಗಿಂತ ಜಾಸ್ತಿ ಕಾಡಿನ ಮಹಿಳೆಯರ ಮೇಲೆ ಮತ್ತು ಬಡಪಾಯಿ ಆದಿವಾಸಿಗಳ ಮೇಲೆ ತಮ್ಮ ಶೌರ್ಯವನ್ನು ಪ್ರದರ್ಶಿಸುತ್ತಿದ್ದಾಗ ಇಂಥವಕ್ಕೆ ಮಧುಕರ್ ಶೆಟ್ಟಿಯವರು ಹೇಗೆ ಸ್ಪಂದಿಸುತ್ತಿರಬಹುದು ಎಂದು ವಿಷಾದಭರಿತ ಕುತೂಹಲ ಹುಟ್ಟುತ್ತಿತ್ತು. ವೀರಪ್ಪನ್ "ಬೇಟೆ"ಯ ಹೆಸರಲ್ಲಿ ನಡೆದ ಪರಮ ಭ್ರಷ್ಟಾಚಾರವನ್ನು ನೀವು ಹೇಗೆ ಸಹಿಸಿಕೊಳ್ಳುತ್ತಿರಬಹುದು? ಹಲವಾರು ಅಧಿಕಾರಿಗಳು ಈ "ಬೇಟೆ"ಗಾರ ಪಡೆಯನ್ನು ಬಿಟ್ಟು ಬರುತ್ತಿದ್ದಾಗ ಮಧುಕರ್ ಶೆಟ್ಟಿಯವರಂಥವರು ಹೇಗೆ ಅಲ್ಲೇ ಇರಲು ಸಾಧ್ಯವಾಗುತ್ತಿದೆ? ಯಾವ ತಾತ್ವಿಕ ಮತ್ತು ನೈತಿಕ ಪಾತಳಿಯಲ್ಲಿ ನಿಂತು ಅವರು ತಮ್ಮ ಪಾಲುದಾರಿಕೆಯನ್ನು ಸಮರ್ಥಿಸಿಕೊಳ್ಳುತ್ತಿರಬಹುದು ಅಂತಲೂ ಪ್ರಶ್ನೆಗಳು ಹುಟ್ಟುತ್ತಿದ್ದವು. ಅಂತಿಮವಾಗಿ ವೀರಪ್ಪನ್ ಹತ್ಯೆ ಆದ ಮೇಲೆ ಇಡೀ ಪ್ರಕರಣವನ್ನು ನೀವು ಒಬ್ಬ ಪೊಲೀಸ್ ಆಗಿ ಅಲ್ಲದೆ ಒಬ್ಬ ಸೂಕ್ಷ್ಮ ಮನಸ್ಸಿನವನಾಗಿ ರಾಜಕೀಯ-ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಅದನ್ನು ಹೇಗೆ ಅರ್ಥೈಸಿಕೊಳ್ಳುತ್ತಿರಬಹುದು ಎಂಬ ಕುತೂಹಲವಿತ್ತು.

ನಂತರ ನಿಮ್ಮ ಬಗ್ಗೆ ಅತಿ ಹೆಚ್ಚು ಕೇಳಿಬಂದದ್ದು ತಾವು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಯಾಗಿದ್ದಾಗ. ಈಗಲೂ ತಮ್ಮ ಬಗ್ಗೆ ಚಿಕ್ಕಮಗಳೂರಿನ ಆದಿವಾಸಿಗಳ ಹಾಡಿಗಳಲ್ಲಿ ದಂತಕಥೆಗಳಿವೆ. ಕೆಲವರ ಬಳಿ 'ಅಪರಾತ್ರಿಯಲ್ಲೂ ನನ್ನನ್ನು ಸಂಪರ್ಕಿಸಿ' ಎಂದು ನೀವು ಕೊಟ್ಟ ಮೊಬೈಲ್ ನಂಬರ್ ಈಗಲೂ ಇದೆ. ಅಲ್ಲಿನ ಶ್ರೀಮಂತ ಕಾಫಿ ಪ್ಲಾಂಟರುಗಳು ಈಗಲೂ ನಿಮ್ಮನ್ನು ಸಿಟ್ಟಿನಿಂದ ನೆನಪು ಮಾಡಿಕೊಳ್ಳುತ್ತಾರೆ. ನಕ್ಸಲರ ಬಗ್ಗೆ ನಿಮ್ಮ ನಿಲುವು ಏನೇ ಇದ್ದರೂ ನೀವು ನಿಮಗಿದ್ದ ಅಧಿಕಾರವನ್ನು ನೀವಿಲ್ಲಿದ್ದ ಸಮಯದಲ್ಲಿ ಆದಿವಾಸಿಗಳ ಹಿತವನ್ನು ಕಾಯುವುದಕ್ಕೆ ಬಳಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೀರೆಂದು ಅಲ್ಲಿ ನಿಮಗೆ ಹೆಸರು ಇದೆ.

ನಕ್ಸಲ್ ಹೋರಾಟದ ಬಗ್ಗೆ ನಿಮಗೆ ಸಿಟ್ಟಿತ್ತು. ಸಾಮಾನ್ಯ ಆದಿವಾಸಿಗಳನ್ನು ತಪ್ಪು ದಾರಿ ಹಿಡಿಸುತ್ತಾರೆಂದು, ಏನೇ ಬದಲಾವಣೆಯಾದರೂ ಪ್ರಜಾಸತ್ತೆಯಿಂದಲೇ ಆಗಬೇಕು ಮತ್ತು ಬದಲಾವಣೆಗಾಗಿ ಕಾಯಬೇಕು ಎಂಬುದೂ ತಮ್ಮ ವಾದವಾಗಿತ್ತು. ಆದರೂ ನೀವು ಚಿಕ್ಕಮಗಳೂರಿನಲ್ಲಿ ಸುಳ್ಳು ಎನ್‌ಕೌಂಟರ್‌ಗಳು ನಡೆಯಲು ಬಿಡಲಿಲ್ಲ. ಪ್ರಾಯಶಃ ಕೇವಲ ಕಾನೂನು ನಿಷ್ಠತೆ ಜನರಿಗೆ ಒಳ್ಳೆಯದನ್ನು ಮಾಡುವುದಿಲ್ಲ ಎಂದು ನಿಮಗೆ ಅರ್ಥವಾಗಿತ್ತೇ? ಪ್ರಜಾತಂತ್ರದ ಸೌಂದರ್ಯ (beauty of democracy)ದ ಅನುಭವಕ್ಕಿಂತಲೂ ಅದರ ಕ್ರೌರ್ಯದ ಅನುಭವವೇ ಸಾಮಾನ್ಯ ಜನರಿಗೆ ಹೆಚ್ಚು ಎಂಬುದು ನಿಮ್ಮ ಗಮನಕ್ಕೆ ಬಂದಿತ್ತೇ?

ಪ್ರಾಯಶಃ ಆದ್ದರಿಂದಲೇ ನಿಮ್ಮ ಭಾವಸೂಕ್ಷ್ಮತೆಗೆ ಬಹುಮಾನವೆಂಬಂತೆ ನೀವು ಇಂಟೆಲಿಜೆನ್ಸ್ ಇಲಾಖೆಗೂ ಅಲ್ಲಿಂದ ರಾಜ್ಯಪಾಲರ ಬೆಂಗಾವಲಿಗೂ ವರ್ಗಾವಣೆಯಾದಿರಿ. ನೀವು ಇಂಟೆಲಿಜೆನ್ಸ್ ಮುಖ್ಯಸ್ಥರಾಗಿದ್ದಾಗಲೇ ಕರ್ನಾಟಕದ ನಕ್ಸಲ್ ಹೋರಾಟದ ನಾಯಕ, ಅಸಾಧಾರಣ ಮೇಧಾವಿ ಸಾಕೇತ್ ರಾಜನ್ ಅವರನ್ನು ಪೊಲೀಸರು ಕಗ್ಗೊಲೆ ಮಾಡಿದರು. ಅದೊಂದು ಸುಳ್ಳು ಎನ್‌ಕೌಂಟರ್ ಎಂದು ಸತ್ಯವಂತರಾದ ನಿಮಗೆ ಗೊತ್ತೇ ಇದೆ. ಸಾಕೇತ್ ರಾಜನ್‌ರ ಬದ್ಧತೆ ಮತ್ತು ಬೌದ್ಧಿಕತೆಯ ಬಗ್ಗೆ ನಿಮ್ಮಂತ ಹಲವು ಅಧಿಕಾರಿಗಳಿಗೆ ಮೆಚ್ಚುಗೆ ಇತ್ತು. ಆದರೂ "ಜನಪರವಾಗಿ ಚಿಂತಿಸುವ ಗ್ರಾಮ್ಸಿಯ ಮೆದುಳು ಚಿಂತಿಸುವುದನ್ನು ನಿಲ್ಲಿಸಬೇಕು" ಎಂದು ಷಡ್ಯಂತ್ರ ಮಾಡಿದ ಫ್ಯಾಸಿಸ್ಟ್ ಮುಸಲೋನಿ ಸರ್ಕಾರಕ್ಕಿಂತ ಕ್ರೂರವಾಗಿ ಕರ್ನಾಟಕ ಸರ್ಕಾರ ಒಂದು ಜನಪರ ಮೇಧಾವಿಯ ಮೆದುಳನ್ನು ಅಕ್ಷರಶಃ ನುಚ್ಚುನೂರು ಮಾಡಿತು. ಗ್ರಾಮ್ಸಿಯ ಬಗ್ಗೆ ಅಪಾರ ಗೌರವ ಮತ್ತು ಆದರವನ್ನು ಇಟ್ಟುಕೊಂಡಿರುವ "ಸೂಕ್ಷ್ಮ ಮತ್ತು ಚಿಂತನಶೀಲ" ವ್ಯಕ್ತಿತ್ವದ ತಾವು ಈ ಕೊಲೆಗೆ ಕೇವಲ ಅಸಹಾಯಕ ವಿಷಾದವನ್ನಷ್ಟೇ ವ್ಯಕ್ತಪಡಿಸಿದ್ದು ಸಹಜವೇ ಆಗಿತ್ತಾದರೂ ಅದು ನಿಮ್ಮತನದ ಉಳಿವಿನ ಬಗ್ಗೆ ತೀವ್ರ ಜಿಜ್ಞಾಸೆಯನ್ನೇಕೆ ಹುಟ್ಟುಹಾಕಲಿಲ್ಲ ಎಂಬ ಪ್ರಶ್ನೆ ಕನ್ನಡಪ್ರಭದ ನಿಮ್ಮ ಸಂದರ್ಶನ ಓದಿದ ನಂತರ ನನ್ನಲ್ಲಿ ಹುಟ್ಟಿದೆ. ಇರಲಿ, ಅನಂತರ ನೀವು ಲೋಕಾಯುಕ್ತಕ್ಕೆ ಬರುವ ತನಕ ನಿಮ್ಮದು ಅಜ್ಞಾತವಾಸವೇ.



ಶಿವಸುಂದರ್
ಚಾರ್ವಾಕ

ಹಲ್ಲಿಲ್ಲದ ಹಾವಾಗಿ, ಪ್ರಚಾರ ಲೋಲುಪವಾಗಿದ್ದ ಲೋಕಾಯುಕ್ತ ಅಲ್ಪಸ್ವಲ್ಪ ಜನರಿಗೆ ಉಪಯುಕ್ತವಾದ ಕೆಲಸ ಮಾಡಿದ್ದು ಗಣಿ ಹಗರಣವನ್ನು ಬಯಲಿಗೆ ತಂದ ಮೇಲೆಯೇ. ಅಧಿಕಾರಸ್ಥ ರಾಜಕಾರಣಿಗಳನ್ನು ಅದರಲ್ಲೂ ಮುಖ್ಯಮಂತ್ರಿಯನ್ನೂ ಸಹ ಕಟಕಟೆಯ ಹಿಂದೆ ನಿಲ್ಲಿಸಲು ಸಾಧ್ಯ ಎಂದು ನೀವು ಮತ್ತು ನಿಮ್ಮಂಥ ಕೆಲವು ನಿಸ್ಪೃಹ ಅಧಿಕಾರಿಗಳು ಮಾಡಿ ತೋರಿಸಿದ್ದರಿಂದ ನೀವುಗಳು "ಹೀರೋಗಳಿಗಾಗಿ ಕಾಯುತ್ತಿದ್ದ ನತದೃಷ್ಟ ಸಮಾಜದ" ಹೀರೋಗಳಾಗಿ ಬಿಟ್ಟಿರಿ. ಅದೇನೇ ಇರಲಿ ನಮ್ಮ ಸಂದರ್ಭವೇ ಹಾಗಿತ್ತು.

ಒಂದೆಡೆ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬಟಾಬಯಲಲ್ಲಿ ನಡೆಸುತ್ತಾ ಅದನ್ನು ಗತ್ತಿನಿಂದಲೇ ದಕ್ಕಿಸಿಕೊಳ್ಳುತ್ತಿರುವ, "ಪ್ರಜಾತಂತ್ರ" ಕೊಟ್ಟ ಅವಕಾಶಗಳನ್ನೇ ತಮ್ಮ ಸತತ ಸುಲಿಗೆಗೆ ರಹದಾರಿಯನ್ನಾಗಿ ಮಾಡಿಕೊಂಡಿರುವ ಬಿಜೆಪಿ ಸರ್ಕಾರ, ಭ್ರಷ್ಟಾಚಾರದ ಮಟ್ಟಿಗೆ ಅದರ ಪ್ರತಿರೂಪವೇ ಆಗಿರುವ ವಿರೋಧ ಪಕ್ಷಗಳು. ಇನ್ನೊಂದೆಡೆ ಪರ್ಯಾಯದ ಕನಸನ್ನು ಬಿತ್ತಲಾಗದಷ್ಟು ದುರ್ಬಲವಾಗಿರುವ ಮತ್ತು ಪರೋಕ್ಷವಾಗಿ ಈ ತಾತ್ವಿಕ ಮತ್ತು ಭೌತಿಕ ಭ್ರಷ್ಟಾಚಾರದ ಫಲಾನುಭವಿಗಳೂ ಆಗಿಬಿಟ್ಟಿರುವ ಚಳವಳಿಗಳು. ಹೀಗಾಗಿ ಸತತ ವಿಶ್ವಾಸ ದ್ರೋಹಗಳು ಜನಮಾನಸದಲ್ಲಿ ಹತಾಶೆಯನ್ನೂ ಮತ್ತು ಆತ್ಮಘಾತುಕ ರಾಜಕೀಯ ಸಿನಿಕತನವನ್ನೂ ಬಿತ್ತುತ್ತಿವೆ.

ಕರ್ನಾಟಕದ ಜನತೆ ಇಂಥಾ ಸೂಕ್ಷ್ಮ ಮತ್ತು ಅಪಾಯಕಾರಿ ಸಾಮಾಜಿಕ ಮಾನಸಿಕತೆಯಲ್ಲಿರುವಾಗಲೇ ಯಡಿಯೂರಪ್ಪನವರೂ ಸಹ ಜೈಲಿಗೆ ಹೋಗುವಂತಾಗಿದ್ದು, ಕುಮಾರಸ್ವಾಮಿಯ ಮೇಲೂ ಕೇಸು ಫೈಲಾಗಿದ್ದು, ಕೇಂದ್ರದಲ್ಲಿ "ದೊಡ್ಡದೊಡ್ಡವರೂ" ಜೈಲು ಪಾಲಾದದ್ದು ಒಂದು ಬ[...] ಭರವಸೆಯ ಚೇತರಿಕೆಯನ್ನು ಹುಟ್ಟುಹಾಕಿತು. ಕರ್ನಾ[...] ಜನತೆ ಸ್ವಲ್ಪ ಮಟ್ಟಿಗಾದರೂ ನಿರಾಳ ಅನುಭವಿಸಲು ನೀ[...] ಕಾರಣರೆ.

ದುರದೃಷ್ಟವೆಂದರೆ ಒಂದು ನಿಷ್ಕ್ರಿಯ ಪ್ರಜಾಸತ್ತೆ[...] ನಡೆಯುವ ಇಂಥಾ ಪವಾಡಗಳು ಜನರಲ್ಲಿ ಆತ್ಮವಿ[...] ಹುಟ್ಟಿಸುವ ಬದಲು ಹೊಸ ದೇವರುಗಳನ್ನು ಸೃಷ್ಟಿಸಿ[...] ಪರಂಪರೆಯನ್ನು ಮುಂದುವರೆಸುತ್ತದೆ. ಇಲ್ಲೂ [...] ಆಯಿತು. ಸಂತೋಷ್ ಹೆಗ್ಡೆ ಇಲ್ಲಿ ಅಣ್ಣಾ ಹಜಾರೆ ಅಲ್ಲಿ [...] ದೇವರುಗಳಾದರು.

ಈಗ ಕರ್ನಾಟಕ ಎದುರಿಸುತ್ತಿರುವ ಸ್ಥಿತಿ ನೆ[...] ಒಂದೆಡೆ ಅಣ್ಣಾ ಹಜಾರೆ, ಸಂತೋಷ್ ಹೆಗ್ಡೆಗಳು [...] ಹಾಕಿರುವ ಸಡಿಲ ಬುನಾದಿಯ ಭರವಸೆ[...] ಮತ್ತೊಂದೆಡೆ ಜನರ ಸಿನಿಕತನವನ್ನು ತಮ್ಮ ರಾಜ[...] ಮರುಹುಟ್ಟಿಗೆ ಮತ್ತು ತಮ್ಮ ಭ್ರಷ್ಟಾಚ[...] ಸಮರ್ಥನೆಗೆ ಬಳಸಿಕೊಳ್ಳಲು ಬಯಸುತ್ತಿ[...] ಯಡಿಯೂರಪ್ಪನವರಂಥಾ ರಾಜಕಾರಣಿ ಗಳು.

ಇಂಥಾ ಸಂದರ್ಭದಲ್ಲಿ ಭ್ರಷ್ಟಾಚಾರದ ಫಲಾನು[...] ವಿಶ್ವೇಶ್ವರ ಭಟ್ಟರ ಕನ್ನಡಪ್ರಭದಲ್ಲಿ ತಮ್ಮ ಸಂದ[...] ಪ್ರಕಟವಾಗಿದ್ದು ನನಗಂತೂ ಆಶ್ಚರ್ಯವನ್ನೇ ತಂದಿತು[...] ತಮ್ಮ ಕನ್ನಡಪ್ರಭ ಸಂದರ್ಶನವನ್ನು ಪರಮ ಭ್ರಷ್ಟಾ[...] ಯಡಿಯೂರಪ್ಪ ತಮ್ಮ ಗುರಾಣಿಯನ್ನಾಗಿ ಬಳಸಿಕೊ[...]ತ್ತಿದ್ದಾರೆ. ತಾವು "ಲೋಕಾಯುಕ್ತ ಸಂಸ್ಥೆಯಲ್ಲೂ ಭ್ರಷ್ಟಾ[...]ಗಳಿದ್ದಾರೆ" ಎಂದು ಹೇಳಿದ್ದನ್ನು ಯಡಿಯೂರಪ್ಪನವರು [...] ಮೇಲೆ ಹೊರಿಸಿರುವ ಆರೋಪಗಳೆಲ್ಲಾ ಸುಳ್ಳು ಎಂಬ ತ[...] ಸಮರ್ಥನೆಯಾಗಿ ಬಳಸಿಕೊಳ್ಳುತ್ತಿದ್ದಾರೆ. "ಬೇರೆಯ[...] ತಪ್ಪಿನಲ್ಲಿ ನಾವು ಪ್ರಚಾರ ಪಡೆದುಕೊಳ್ಳುವುದು ಎಷ್ಟು[...] ಎಂಬ ತಮ್ಮ ನೈತಿಕ ಗೊಂದಲದ ಸ್ವಗತವನ್ನು ಅ[...] ಸಂತೋಷ್ ಹೆಗ್ಡೆ ಕೇಂದ್ರದಲ್ಲಿ ಅಧಿಕಾರ ಸ್ಥಾನದ [...]

1[...]

ನೋ ಕಾಮೆಂಟ್ಸ್

"ವೈಯಕ್ತಿಕ ಕಾರಣಗಳಿಗಾಗಿ ಬಳ್ಳಾರಿ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ವೇಳೆ ನಾವು ಅಲ್ಲಿಗೆ ಹೋಗಿರಲಿಲ್ಲ. ಪ್ರಚಾರಕ್ಕೂ ಹೋಗುತ್ತಿಲ್ಲ."

- ಯಡಿಯೂರಪ್ಪ

"ವಿದ್ಯಾರ್ಥಿಗಳು ಶಾಲೆಗೆ ಬರುತ್ತಿಲ್ಲ ಎಂಬ ಕಾರಣ ನೀಡಿ ಕನ್ನಡ ಶಾಲೆ ಮುಚ್ಚಲಾಗುತ್ತಿದೆ. ಶಾಲೆ ಮುಚ್ಚುವ ಬದಲು ವಿದ್ಯಾರ್ಥಿಗಳು ಶಾಲೆಗೆ ಏಕೆ ಬರುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕು. ಪಠ್ಯಕ್ರಮದಲ್ಲಿರುವ ತಪ್ಪು ಅಂಶಗಳು, ಏಕರೂಪದ ಭಾಷಾನೀತಿ ಇಲ್ಲದಿರುವುದು, ಶಾಲೆಗಳಿಗೆ ಮೂಲ ಸೌಕರ್ಯದ ಕೊರತೆ ಈ ಸಮಸ್ಯೆಗೆ ಕಾರಣ"

- ಡಾ. ಎಂ.ಎಂ. ಕಲಬುರ್ಗಿ

"ಭ್ರಷ್ಟಾಚಾರದ ಆರೋಪ ಹೊತ್ತವರನ್ನು ನ್ಯಾಯಾಲಯ ವಿಚಾರಣಾಧೀನ ಕೈದಿಯಾಗಿ ಜೈಲಿಗೆ ಕಳುಹಿಸಿದರೆ ಅವರನ್ನು ಭೇಟಿ ಮಾಡಲು ಸ್ವಾಮೀಜಿಗಳು ಗುಂಪುಗುಂಪಾಗಿ ಜೈಲಿಗೆ ಹೋಗುತ್ತಾರೆ. ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದವರಿಗೆ ಅವರ ಅಭಿಮಾನಿಗಳು ವೀರೋಚಿತವಾದ ಸ್ವಾಗತವನ್ನು ನೀಡುತ್ತಾರೆ. ಆ ಪರಿಸ್ಥಿತಿಯಲ್ಲಿ ನ್ಯಾಯ ನಿಷ್ಠೂರತೆಯಿಂದ ಕಾರ್ಯನಿರ್ವಹಿಸಿದ ಲೋಕಾಯುಕ್ತದ ಒಬ್ಬ ಅಧಿಕಾರಿ ಇಲ್ಲವೇ ನ್ಯಾಯಮೂರ್ತಿಗಳ ಪರಿಸ್ಥಿತಿ ಏನಾಗಬೇಕು? ತಾಂತ್ರಿಕವಾಗಿ ಇದು ನ್ಯಾಯಾಂಗ ನಿಂದನೆ ಅಲ್ಲದೆ ಇರಬಹುದು. ಆದರೆ ನೈತಿಕವಾಗಿ? ಪ್ರಾಮಾಣಿಕರನ್ನು ನೈತಿಕವಾಗಿ ಕುಂದಿಸಲು ಇಂತಹ ಸಮಾಜ ವಿರೋಧಿ ವಿದ್ಯಮಾನಗಳು ಸಾಕಲ್ಲವೇ?"

- ದಿನೇಶ್ ಅಮೀನ್ ಮಟ್ಟು


"ಮಾಜಿ ಪ್ರಧಾನಿ ದೇವೇ ಗೌಡರು ಗ್ಯಾಂಗ್ ರೌಡಿಯಂತೆ ಬೀದಿ ಗೂಂಡಾನಂತೆ ವರ್ತಿಸಿ ಲೋಕಾಯುಕ್ತ ವ್ಯವಸ್ಥೆ ವಿರುದ್ಧ ಮಾತಾಡಿದ್ದಾರೆ. ಇದು ಜನತಂತ್ರದ ವ್ಯವಸ್ಥೆಯನ್ನು ಅಪಾಯಕ್ಕೆ ತಳ್ಳುವಂತಿದೆ. ಮಧುಕರ್ ಶೆಟ್ಟಿಯವರು ಲೋಕಾಯುಕ್ತ ವ್ಯವಸ್ಥೆಯಲ್ಲಿರುವ ಕೆಲವು ನ್ಯೂನತೆಗಳ ಬಗ್ಗೆ ತಿಳಿಸಿದ್ದಾರೆಯೇ ವಿನಃ ಅದನ್ನು ಮುಚ್ಚಬೇಕೆಂದು ಹೇಳಿಲ್ಲ."

- ವಿಶ್ವನಾಥ್, ಸಂಸದ

"ತುಂಡುಗುತ್ತಿಗೆ ಕಾಮಗಾರಿ ನೀಡುವುದು ಎರಡು ಕೋಟಿಗೆ ಮಾತ್ರ ಸೀಮಿತವಾಗಿತ್ತು, ಆದರೆ ಐದು ಕೋಟಿಗೂ ಹೆಚ್ಚಿನ ಕಾಮಗಾರಿಗೆ ಗುತ್ತಿಗೆ ಕೊಡಲಾಯಿತು. ಸುಮಾರು 500 ರೂ. ವೆಚ್ಚದ ಸೈನ್ ಬೋರ್ಡಿಗೆ 12,000 ರೂ. ವೆಚ್ಚ ಮಾಡಲಾಗಿದೆ. ದಾಖಲಾತಿ ನಕಲು ತಯಾರಿಸಲು ಒಂದು ಪ್ರತಿಗೆ ಆಗ 40 ಪೈಸೆ ಇರುತ್ತಿತ್ತು, ಅಧಿಕಾರಿಗಳು ರೂ.49 ಖರ್ಚು ಮಾಡಿದ್ದಾರೆ."

- ವೈಜನಾಥ ಪಾಟೀಲ್

ನಂಬಿದ್ರೆನಂಬಿ ಬಿಟ್ರೆಬಿಡಿ



"ಲೋಕಾಯುಕ್ತ ಎಡಿಜಿಪಿ ವರ್ಗಾವಣೆ ರಾಜಕೀಯ ಕಾರಣಕ್ಕೆ ನಡೆದಿಲ್ಲ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅಥವಾ ನಮ್ಮ ಪಕ್ಷದ ಇತರೆ ಯಾವುದೇ ವ್ಯಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಈ ಅಧಿಕಾರಿಯನ್ನು ವರ್ಗಾವಣೆ ಮಾಡಿಲ್ಲ. ಭ್ರಷ್ಟಾಚಾರದಲ್ಲಿ ಭಾಗಿಯಾದ ಯಾವ ವ್ಯಕ್ತಿಯ ರಕ್ಷಣೆಗೂ ನಮ್ಮ ಸರ್ಕಾರ ಪ್ರಯತ್ನಿಸುವುದಿಲ್ಲ."

- ಸದಾನಂದ ಗೌಡ

"ಕೇಂದ್ರದಲ್ಲಿ ಮಹತ್ವದ ಸ್ಥಾನ ಸಿಗುತ್ತದೆ ಎಂಬ ಅಧಿಕಾರ ದಾಹದಿ[...] ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ನನ್ನನ್ನು ಪರಪ್ಪನ ಅಗ್ರಹಾ[...] ಅಟ್ಟಿದರು."

- ಯಡಿಯೂ[...]

"ಬಿಜೆಪಿ ಇದುವರೆಗೆ ನಡೆದ ಯಾವುದೇ ಉಪಚುನಾವಣೆಯಲ್ಲಿ ಪ್ರಚಾ[...] ರಾಷ್ಟ್ರ ನಾಯಕರನ್ನು ಕರೆಸಿಲ್ಲ. ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರ[...] ಉಪಚುನಾವಣೆಗೂ ಯಾರನ್ನೂ ಕರೆಸುವುದಿಲ್ಲ"

- ಈಶ್ವ[...]

ಈಶ್ವರಪ್ಪ ತೀರ್ಥರು ಬರೆದ ಇತಿಹಾಸ?

"ಸಮಾಜವನ್ನು ಒಡೆಯುವ ಪಾಪಿ ಜನರು ಎಲ್ಲಾ ಕಾಲದಲ್ಲಿಯೂ [...] ಇರುತ್ತಾರೆ. ಈಗಲೂ ಕೃಷ್ಣ ಕನಕನ ವಿಷಯದಲ್ಲಿ ವಿವಾದ ಹುಟ್ಟುಹಾಕಿ ಸ್ವ[...] ಲಾಭ ಮಾಡಿಕೊಳ್ಳುವ ಸಂಕುಚಿತ ಮಂದಿ ಬಹಳಷ್ಟು ಜನ ಇದ್ದಾರೆ. ಸಾವಿರಾ[...] ವರ್ಷಗಳ ಹಿಂದೆ ಕನಕದಾಸರು ಉಡುಪಿ ಶ್ರೀಕೃಷ್ಣ ಮಠಕ್ಕೆ ಬಂದಾಗ ಇಂ[...] ಸಂಕುಚಿತ ಮನೋಭಾವದ ಜನರೇ ಅವರಿಗೆ ಕೃಷ್ಣ ದರ್ಶನ ನಿರಾಕರಿಸಿದ್ದರ[...]

- ಈಶ್ವ[...]

ಸಹಕಾರಿ ತತ್ವವೆಂದರೆ ಅವಕಾಶವಾದವಲ್ಲ...

"ವಿಧಾನಸೌಧದ ಹೊರಗೆ ಮತ್ತು ಒಳಗೆ ಸಹಕಾರ ತತ್ವವನ್ನು ಪಾಲಿಸುವ[...] ನಾನು. ಸಹಕಾರಕ್ಕೆ ನನ್ನ ಸಹಮತವಿದೆ. ಆದರೆ ಸಂಘರ್ಷಕ್ಕೆ ಎಂದಿಗೂ ಅವ[...] ಕೊಡುವುದಿಲ್ಲ."

- ಸದಾನಂದ ಗ[...]


ಬಡವರಿಗಿಲ್ಲದ ನೆರವು ಮಲ್ಯನಿಗೇಕೆ?



• ಗೌರಿ ಲಂಕೇಶ್
editorlankesh@gmail.com



ವಿಜಯ್ ಮಲ್ಯರ ಕಿಂಗ್‌ಫಿಷರ್ ಏರ್‌ಲೈನ್ಸ್ ದೊಡ್ಡ ಆರ್ಥಿಕ ತಾಪತ್ರಯದಲ್ಲಿದೆ. ಅದು ಎಷ್ಟು ದೊಡ್ಡ ಪ್ರಮಾಣದ ತಾಪತ್ರಯ ಎಂದರೆ ಕಳೆದ ಒಂದು ವರ್ಷದಲ್ಲಿ ಕಿಂಗ್‌ಫಿಷರ್ 1,027 ಕೋಟಿ ರೂಪಾಯಿಗಳ ನಷ್ಟವನ್ನು ಕಂಡಿದೆಯಲ್ಲದೆ, ಇಲ್ಲಿನ ತನಕದ ಆ ಕಂಪನಿಯ ನಷ್ಟದ ಮೊತ್ತವು ಬರೋಬ್ಬರಿ 7,057 ಕೋಟಿ ರೂಪಾಯಿಗಳಾಗಿವೆ. ಸಾಮಾನ್ಯರಾದ ನಮ್ಮನಿಮ್ಮಂತಹವರಿಗೆ ಏಳು ಸಾವಿರ ಪರಿಚಯವಿರುತ್ತದೆ, ಎಪ್ಪತ್ತು ಸಾವಿರ ರೂಪಾಯಿಗಳನ್ನು ಆಗೀಗ ಕಂಡಿರುತ್ತೇವೆ, ಹೆಚ್ಚೆಂದರೆ ಏಳು ಲಕ್ಷದಷ್ಟು ಹಣವನ್ನು ಕಂತಿನಲ್ಲಿ ತೀರಿಸಬಲ್ಲೆವು ಎಂಬ ವಿಶ್ವಾಸದ ಮೇಲೆ ಅಷ್ಟು ದೊಡ್ಡ ಮೊತ್ತವನ್ನು ಮನೆ ಕಟ್ಟಿಸಲಿಕ್ಕೆಂದೋ, ಮತ್ತಿನ್ಯಾವುದೋ ಮುಖ್ಯ ಕಾರಣಕ್ಕೆ ಸಾಲದ ರೂಪದಲ್ಲಿ ಪಡೆದಿರುತ್ತೇವೆ. ನಮಗೆಲ್ಲ ಏಳು ಸಾವಿರ ಕೋಟಿಗಳಲ್ಲಿ ಎಷ್ಟು



ಸೊನ್ನೆಗಳಿರುತ್ತವೆ ಎಂಬುದೂ ಗೊತ್ತಿರುವುದಿಲ್ಲವಾದ್ದರಿಂದ ಅದು ಬೃಹತ್ ಮೊತ್ತ ಎಂದು ಮಾತ್ರ ಇಟ್ಟುಕೊಂಡು ಮುಂದುವರಿಸುವುದು ಸೂಕ್ತ ಎನಿಸುತ್ತದೆ.

ಈ ವಾರದ ಆರಂಭದಲ್ಲಿ ಕಿಂಗ್‌ಫಿಷರ್ ಏರ್‌ಲೈನ್ಸ್ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಹೊರಬಿದ್ದು ಆ ಕಂಪನಿಯು ತನ್ನ ಹಲವಾರು ವಿಮಾನಯಾನಗಳನ್ನು ರದ್ದುಪಡಿಸಲಾರಂಭಿಸಿತು. ಇದನ್ನು ಕಂಡು ಕೇಂದ್ರ ವಿಮಾನಯಾನ ಸಚಿವ ವಯಲಾರ್ ರವಿ ಅದೆಷ್ಟು ಕಂಗಾಲಾದರೆಂದರೆ "ಪ್ರಧಾನಮಂತ್ರಿಗಳು ವಿದೇಶ ಪ್ರವಾಸದಿಂದ ಹಿಂದಿರುಗಿದ ಕೂಡಲೇ ಕಿಂಗ್‌ಫಿಷರ್ ಎದುರಿಸುತ್ತಿರುವ ಬಿಕ್ಕಟ್ಟುಗಳ ಬಗ್ಗೆ ಅವರೊಂದಿಗೆ ಚರ್ಚಿಸುತ್ತೇನೆ. ಅದಕ್ಕೂ ಮುನ್ನ ಆರ್ಥಿಕ ಸಚಿವರನ್ನು ಕಂಡು ಆ ಕಂಪನಿಗೆ ಬ್ಯಾಂಕುಗಳು ನೆರವು ನೀಡಲು ಸಾಧ್ಯವೇ ಎಂದು ವಿಚಾರಿಸುತ್ತೇನೆ" ಎಂದರು. ಅವರ ಇಂತಹ ಕಾಳಜಿಗೆ ಕಾರಣ ಅವರೇ ಹೇಳಿದಂತೆ "ಕಿಂಗ್‌ಫಿಷರ್ ಕಂಪನಿಯು ಮುಚ್ಚಿದರೆ ಅದರಲ್ಲಿ ಕೆಲಸ ಮಾಡುತ್ತಿರುವವರಿಗೂ ಮತ್ತು ಅದರ ಗ್ರಾಹಕರಿಗೂ ತುಂಬಾ ಸಮಸ್ಯೆ ಆಗುತ್ತದೆ".

ಇದೆಂತಹ ವಿಚಿತ್ರ? ನಮ್ಮ ದೇಶದಲ್ಲಿ ಸುಮಾರು 40 ಕೋಟಿಯಷ್ಟು ಜನರು ಸರ್ಕಾರದ ಯಾವ ನೆರವೂ ಇಲ್ಲದೆ, ತಲೆ ಮೇಲೊಂದು ಸೂರಿಲ್ಲದೆ, ಪ್ರತಿನಿತ್ಯ ಬೆವರು ಸುರಿಸಿ ದಿನಗೂಲಿ ಪಡೆದು ಬದುಕುತ್ತಿರುವಾಗ ಅವರ ಬಗ್ಗೆ ವಯಲಾರ್ ರವಿ ಮತ್ತು ಅವರಂತಹ ಇತರೆ ಜನ ಎಂದೂ ಕಿಂಚಿತ್ತು ಕಾಳಜಿಯನ್ನು ತೋರಿಲ್ಲ. ಅಷ್ಟೇ ಅಲ್ಲ, ಗಾಯಗೊಂಡಂತಿರುವ ಆ ಬಡವರ ಬದುಕಿನ ಮೇಲೆ ನಿಂಬೆಹುಳಿ ಹಿಂಡುವಂತೆ ಇತ್ತೀಚೆಗೆ ರಾಷ್ಟ್ರೀಯ ಆಯೋಗದ ಮುಖ್ಯಸ್ಥ ಮೋಂಟೆಕ್ ಸಿಂಗ್ ಆಹ್ಲುವಾಲಿಯಾ ಸುಪ್ರೀಂಕೋರ್ಟಿನ ಮುಂದೆ ದಿನಕ್ಕೆ 35 ರೂಪಾಯಿ ದುಡಿಯುವವರನ್ನು ಬಡವರೆಂದು ಪರಿಗಣಿಸಲಾಗುವುದಿಲ್ಲ ಎಂದು ಪ್ರಮಾಣ ಮಾಡಿ ಹೇಳಿದರು. ಆಹ್ಲುವಾಲಿಯಾ ಅವರ ಮನೆಯ ಹೂದೋಟದಲ್ಲಿರುವ ಪ್ರತಿ ಸ್ಪ್ರಿಂಕ್ಲರ್ ಬೆಲೆ 35 ರೂಪಾಯಿಗಳಿಗಿಂತಲೂ ಹೆಚ್ಚು! ಅದಕ್ಕಿಂತ ಮುಖ್ಯವಾಗಿ ಪ್ರತಿ ತಿಂಗಳಿಗೆ ಲಕ್ಷಾಂತರ ರೂಪಾಯಿಗಳ ಪಗಾರವನ್ನು ಪಡೆಯುವ ಆಹ್ಲುವಾಲಿಯಾ ಅವರು ತಮ್ಮ ಚಾಕರಿ ಮಾಡುವವರಿಗೆ ಕೊಡುವ ಟಿಪ್ಸ್ ನೂರಾರು ರೂಪಾಯಿಗಳು. ಇಂಥ ಆಹ್ಲುವಾಲಿಯಾ ಎಂದಾದರೂ ಒಂದೇ ಒಂದು ದಿನವನ್ನು ಕೇವಲ 35 ರೂಪಾಯಿಗಳ ಮೇಲೆ ದೂಡಿದ್ದರೆ ಅವರಿಗೆ ನಮ್ಮ ದೇಶದ ಬಡವರ ದುಃಖ ಅರ್ಥವಾಗುತ್ತಿತ್ತು.

ಇನ್ನೊಂದು ವಿಚಿತ್ರವನ್ನು ಗಮನಿಸಿ. ಒಂದು ಅಂಕಿಅಂಶಗಳ ಪ್ರಕಾರ ಕಳೆದ ಒಂದು ತಿಂಗಳಲ್ಲಿ ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ನೂರಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನ್ಯಾಷನಲ್ ಕ್ರೈಂ ಬ್ಯೂರೋ ಪ್ರಕಾರ ಕಳೆದ ವರ್ಷ ಹದಿನೈದು ಸಾವಿರಕ್ಕಿಂತಲೂ ಹೆಚ್ಚು ರೈತಾಪಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇನ್ನು ಕಳೆದ 15 ವರ್ಷಗಳ ಅಂಕಿ-ಅಂಶಗಳನ್ನು ನೋಡಿದರೆ ನಮ್ಮ ದೇಶದಲ್ಲಿ ಎರಡೂವರೆ ಲಕ್ಷ ರೈತರು ವಿಧಿ ಇಲ್ಲದೆ ತಮ್ಮ ಪ್ರಾಣವನ್ನು ತಾವೇ ತೆಗೆದುಕೊಂಡಿರುವುದು ಗೊತ್ತಾಗುತ್ತದೆ.

ಈ ಎಲ್ಲ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಬೇರೆ ಯಾವ ಕಾರಣಕ್ಕೂ ಅಲ್ಲ, ಬದಲಾಗಿ ತಮ್ಮ ಭೂಮಿಯಲ್ಲಿ ಒಂದಿಷ್ಟು ಆಹಾರ ಧಾನ್ಯಗಳನ್ನು ಬೆಳೆಸಲಿಕ್ಕೆ, ಆ ಮೂಲಕ ತಮ್ಮ ಬದುಕಿನಲ್ಲಿ ಒಂದಿಷ್ಟು ಸ್ಥಿರತೆಯನ್ನು ಕಾಣಲಿಕ್ಕೆ ಮಾಡಿಕೊಂಡಿದ್ದ ಸಾಲವನ್ನು ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡವರು. ಅನ್ನದಾತ ರೈತರೇ ಸಾಲ, ನಷ್ಟದ ಸುಳಿಯಲ್ಲಿ ಸಿಲುಕಿಕೊಂಡು, ತಮ್ಮ ನೆರವಿಗೆ ಯಾರೂ ಬರುವುದಿಲ್ಲ ಎಂದು ಕಂಗಾಲಾಗಿ ಇಷ್ಟೊಂದು ಪ್ರಮಾಣದಲ್ಲಿ ಸಾವನ್ನಪ್ಪುತ್ತಿದ್ದಾಗ ಅದರ ಬಗ್ಗೆ ಚಕಾರವೆತ್ತದ ರಾಜಕಾರಣಿಗಳು ವಿಜಯ್ ಮಲ್ಯ ತರಹದ



ಕೋಟ್ಯಾಧಿಪತಿ, ಐಷಾರಾಮಿ ಜೀವಿ, ಲೋಲುಪ ವ್ಯಕ್ತಿಯ ಹಲವಾರು ಲಾಭದಾಯಕ ಕಂಪನಿಗಳಲ್ಲಿ ಒಂದು ಕಂಪನಿ ನಷ್ಟವನ್ನು ಕಾಣುತ್ತಿದೆ ಎಂದಾಗ ಆತನ ನೆರವಿಗೆ ಧಾವಿಸುತ್ತದೆಂದರೆ ನಮ್ಮ ಪ್ರಜಾತಂತ್ರ ವ್ಯವಸ್ಥೆ ಎಷ್ಟು ಅರ್ಥಹೀನವಾಗಿದೆ ಎಂದು ಗೊತ್ತಾಗುತ್ತದೆ.

ಹೋಗಲಿ, ವಿಜಯ್ ಮಲ್ಯನಿಗಲ್ಲದಿದ್ದರೂ ಆತನ ಕಿಂಗ್‌ಫಿಷರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಕಾಳಜಿ ಹೊಂದಿದೆ ಎಂದೇ ಇಟ್ಟುಕೊಂಡರೂ ಅಲ್ಲೂ ನಮಗೆ ಕಾಣಿಸುವುದು ಮತ್ತೊಂದು ವ್ಯಂಗ್ಯ. ಬಡತನದಲ್ಲಿ ಬದುಕುತ್ತಿರುವ ಕೋಟ್ಯಾಂತರ ಜನರಿಗೆ ಮತ್ತು ಆತ್ಮಹತ್ಯೆ ಮಾಡಿಕೊಂಡ ಲಕ್ಷಾಂತರ ರೈತರಿಗೆ ವಿದ್ಯೆ ಇಲ್ಲ, ಕೂಲಿ-ಕೃಷಿ ಹೊರತಾಗಿ ಮತ್ತೊಂದು 'ಕಲೆ' ಗೊತ್ತಿಲ್ಲ. ಆದರೆ ಅಂತಹವರು ಉದ್ಯೋಗ ವಂಚಿತರಾಗುತ್ತಾರೆಂದು ಸರ್ಕಾರ ಎಂದೂ ಯೋಚಿಸಿಲ್ಲ. ಅವರಿಗೆ ಹೋಲಿಸಿದರೆ ಕಿಂಗ್‌ಫಿಷರ್ ನೌಕರರು ಮಧ್ಯಮ ವರ್ಗದವರು, ವಿದ್ಯೆ ಪಡೆದಿರುವವರು, ಹಲವಾರು ಉದ್ಯೋಗ ಅವಕಾಶಗಳಿರುವ ನಗರಗಳ ನಿವಾಸಿಗಳು. ಅವರು ಇವತ್ತಲ್ಲ ನಾಳೆ ಇನ್ನೊಂದು ಕೆಲಸ ಪಡೆದು ತಮ್ಮ ಬದುಕನ್ನು ಮುಂದುವರೆಸುತ್ತಾರೆ. ಅಂಥವರ ಬಗ್ಗೆ ನಮ್ಮ ರಾಜಕೀಯ ನಾಯಕರಿಗೆ ಯಾಕಿಷ್ಟು ಕಾಳಜಿ?

ಇದೇ ನಾಯಕರು ಸಾವಿರಾರು ಜನರಿಗೆ ಪ್ರತ್ಯಕ್ಷವಾಗಿ ಉದ್ಯೋಗ ನೀಡಿದ್ದ, ಪರೋಕ್ಷವಾಗಿ ಲಕ್ಷಾಂತರ ಜನರ ಬದುಕಿಗೆ ನೆರವಾಗಿದ್ದ ಎನ್‌ಜಿಇಎಫ್ ಎಂಬ ಸರ್ಕಾರಿ ಸ್ವಾಮ್ಯದ ಕಂಪನಿ ಬಾಗಿಲು ಮುಚ್ಚಿದಾಗ "ಅದರ ನೌಕರರಿಗೆ ಮತ್ತು ಗ್ರಾಹಕರಿಗೆ ತೊಂದರೆ ಆಗುತ್ತದೆ" ಎನ್ನಲಿಲ್ಲ. ನಷ್ಟದಲ್ಲಿದ್ದ ಎನ್‌ಜಿಇಎಫ್ ಕಂಪನಿಗೆ ಆರ್ಥಿಕ ನೆರವು ನೀಡಿ ಅದನ್ನು ಉಳಿಸಬೇಕೆಂಬ ಪ್ರಜ್ಞೆಯೂ ಇರಲಿಲ್ಲ. ಮೈಸೂರ್ ಲ್ಯಾಂಪ್ಸ್ ಕಂಪನಿಯನ್ನು ಬಂದ್ ಮಾಡಿದಾಗಲೂ ಯಾವ ನಾಯಕನೂ ಅದರ ಸಿಬ್ಬಂದಿ ಬಗ್ಗೆಯಾಗಲಿ, ಗ್ರಾಹಕರ ಬಗ್ಗೆಯಾಗಲಿ ಕಿಂಚಿತ್ತೂ ತಲೆ ಕೆಡಿಸಿಕೊಳ್ಳಲಿಲ್ಲ.

ನಮ್ಮ ಮಹಾನ್ ಪ್ರಜಾಪ್ರಭುತ್ವದಲ್ಲಿರುವ ವ್ಯಂಗ್ಯಗಳು ಇಲ್ಲಿಗೇ ಅಂತ್ಯಗೊಳ್ಳುವುದಿಲ್ಲ. ಕಳೆದ ವಾರ ಈ ಪತ್ರಿಕೆಯಲ್ಲಿ ಹೇಗೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ರಾಜಕಾರಣಿಗಳ ಮಾಲೀಕತ್ವದ ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿವೆ ಎಂಬ ವರದಿ ಪ್ರಕಟಗೊಂಡಿತ್ತು. ಇವತ್ತು ನಿರಾಣಿ ಪಿರಾಣಿಗಳು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿ-ಹಲವೊಮ್ಮೆ ಸ್ಥಾಪಿಸದೆಯೂ ಸ್ಥಾಪಿಸುವ ನೆಪದಲ್ಲಿ ನೂರಾರು ಎಕರೆ ಪ್ರದೇಶವನ್ನು ಪುಕ್ಕಟೆಯೆನ್ನುವಷ್ಟು ದರದಲ್ಲಿ ಪಡೆದು - ಲಾಭ ಮಾಡಿಕೊಂಡಿದ್ದಾರೆ. ಆದರೆ ಇವರೆಲ್ಲ ಕೋಟ್ಯಾಧಿಪತಿಗಳಾಗಿರುವಾಗ ಯಾಕೆ ಸರ್ಕಾರಿ ಸಾಮ್ಯದ ಮೈಶುಗರ್ ನಷ್ಟದಲ್ಲಿದೆ?

ಇದೆಲ್ಲದರ ಬಗ್ಗೆ ಯೋಚಿಸಿದರೆ ರಾಜಕಾರಣಿಗಳು ಲಾಭದಲ್ಲಿ ನಡೆಸುತ್ತಿರುವ ಸಕ್ಕರೆ ಕಾರ್ಖಾನೆಗಳು ಮತ್ತು ರಾಜಕಾರಣಿಗಳೇ ಹಾಳುಗೆಡವುತ್ತಿರುವ ಮೈಶುಗರ್ ಕಂಪನಿಯ ನಷ್ಟದ ನಡುವಿನ ಸಂಬಂಧ ಎಂತಹ ಗಾಂಪನಿಗೂ ಅರ್ಥವಾಗುತ್ತದೆ.


ವಿಜಯ್ ಮಲ್ಯ ತರಹದವರು ವಿಮಾನಯಾನ ಕಂಪನಿಗಳನ್ನು ತೆರೆದದ್ದೇ 90ರ ದಶಕದಲ್ಲಿ ಆರಂಭಗೊಂಡ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಕ್ಕೆ ಹೊಂದುವಂತಹ ಆರ್ಥಿಕ ನೀತಿಯನ್ನು ಜಾರಿಗೆ ತಂದ ಮೇಲೆ. ಅದಕ್ಕೆ ಪ್ರಮುಖ ಕಾರಣ ಭಾರತ ಆರ್ಥಿಕ ಪ್ರಗತಿ ಕಾಣಬೇಕಿದ್ದರೆ ಸರ್ಕಾರ ಸಾಧ್ಯವಾದಷ್ಟು ಕಾರ್ಖಾನೆ, ಉದ್ಯಮ, ಇತ್ಯಾದಿ ಕ್ಷೇತ್ರಗಳಿಂದ ಹೊರಬಂದು ಅವನ್ನೆಲ್ಲ ಖಾಸಗಿಯವರಿಗೆ ನೀಡಿದರೆ, ದಕ್ಷತೆ ಹೆಚ್ಚಾಗುತ್ತದೆ ಮತ್ತು ಜನರಿಗೆ ಬೇಕಾದ್ದು ಮಾರುಕಟ್ಟೆಯಲ್ಲಿ ಸಿಗುತ್ತದೆ ಎಂದು.

ಆದರೆ ಇಂತಹ 'ಮಾರ್ಕೆಟ್ ಎಕಾನಮಿ'ಗೆ ಮಾನವೀಯತೆ ಇಲ್ಲವೇ ಇಲ್ಲ. ಮುಖ್ಯವಾಗಿ ಅದು ಕಟ್ಟರ್ ಪೈಪೋಟಿಗೆ ಒತ್ತು ಕೊಟ್ಟು ಯಾರು ಆ ಪೈಪೋಟಿಯಲ್ಲಿ ಗೆಲ್ಲುವುದಿಲ್ಲವೋ ಅವರು ನಿರ್ದಯವಾಗಿ ಸೋಲುತ್ತಾರೆ. ಅಂತಹ ಆರ್ಥಿಕ ವ್ಯವಸ್ಥೆಯ ನೆರವಿನಿಂದಲೇ ಮಲ್ಯ ಕೋಟ್ಯಾಧಿಪತಿ ಆಗಿದ್ದು, ಜಗತ್ತಿನಾದ್ಯಂತ ತನ್ನ ಲಿಕ್ಕರ್ ಸಾಮ್ರಾಜ್ಯವನ್ನು ವಿಸ್ತರಿಸಿದ್ದು. ಗೋವಾದಲ್ಲಿ ಅರಮನೆಯಂತಹ ಬಂಗಲೆ, ಸ್ಕಾಟ್‌ಲ್ಯಾಂಡಿನಲ್ಲಿ ಕೋಟೆ ಮನೆ, ದಕ್ಷಿಣ ಆಫ್ರಿಕಾದಲ್ಲಿ ಸಾವಿರಾರು ಎಕರೆ, ಫ್ರಾನ್ಸ್ ದೇಶದ ಒಂದು ದ್ವೀಪ ಸೇರಿದಂತೆ ಜಗತ್ತಿನಾದ್ಯಂತ 26 ಕಡೆ ನಿವಾಸಗಳನ್ನು ಖರೀದಿಸಿದ್ದು. ಇದೆಲ್ಲದರ ಜೊತೆಗೆ ರಾಯಲ್ ಚಾಲೆಂಜರ್ಸ್ ಎಂಬ ಐಪಿಎಲ್ ಕ್ರಿಕೆಟ್ ಟೀಮನ್ನು, ಫೋರ್ಸ್ ಇಂಡಿಯಾ ಎಂಬ ಫಾರ್ಮುಲಾ 1 ರೇಸಿಂಗ್ ತಂಡವನ್ನು, ಎನ್‌ಡಿಟಿವಿ ಗುಡ್ ಟೈಮ್ಸ್ ಎಂಬ ಟಿವಿ ಚಾನೆಲ್‌ಅನ್ನು, ರೇಸ್ ಕುದುರೆಗಳನ್ನು, ಖಾಸಗಿ ವಿಮಾನಗಳನ್ನು, ವಿಹಾರ ದೋಣಿಗಳನ್ನು, ನೂರಾರು ವಿಂಟೇಜ್ ಕಾರ್‌ಗಳನ್ನು ಕೊಂಡದ್ದು.

ಈಗ ಅಂತಹ ಮಲ್ಯನ ಕಂಪನಿಯೊಂದು ನಷ್ಟದಲ್ಲಿದೆ. ಆದರೆ ಆ ಕಂಪನಿಗೆ ಯಾವುದೇ ಕಾರಣಕ್ಕೂ ಸರ್ಕಾರವು ಬ್ಯಾಂಕುಗಳಿಂದ ಹೆಚ್ಚಿನ ಸಾಲ ಕೊಡಿಸುವ ಮೂಲಕ ಅದನ್ನು ಜೀವಂತವಾಗಿಡಲು ಯತ್ನಿಸಬಾರದು. ಬದಲಾಗಿ ಮಲ್ಯ ತಾನು ಗಳಿಸಿರುವ ಅಪಾರ ಅಂತಸ್ತಿನಲ್ಲಿ ಹಲವನ್ನು ಮಾರಿ, ಕಿಂಗ್‌ಫಿಷರ್ ಏರ್‌ಲೈನ್ಸ್‌ಗೆಂದು ಆತ ಈಗಾಗಲೇ ಬ್ಯಾಂಕುಗಳಿಂದ ಪಡೆದಿದ್ದ ಸಾಲವನ್ನು ತೀರಿಸಿ, ಕಿಂಗ್‌ಫಿಷರ್ ಏರ್‌ಲೈನ್ಸ್ ಬಾಗಿಲನ್ನು ಬಂದ್ ಮಾಡಲಿ.

ಯಾಕೆಂದರೆ ಯಾವ ಮಾರ್ಕೆಟ್ ಎಕಾನಮಿ ಮಲ್ಯ ತರಹದವರಲ್ಲೇ ಎಲ್ಲಾ ಐಶ್ವರ್ಯ ಕೇಂದ್ರೀಕೃತವಾಗುವಂತೆ ಮಾಡುತ್ತೋ ಆ ಎಕಾನಮಿಯ ಇನ್ನೊಂದು ಮುಖ್ಯ ಲಕ್ಷಣ 'ಗೆಲ್ಲಲಾಗದವರಿಗೆ ಉಳಿಗಾಲವಿಲ್ಲ' ಎಂಬುದು! ❖

ಅಪರಾಧಿಗಳ ಮನಃಪರಿವರ್ತಿಸಿ, ಅವರನ್ನು ಮುಖ್ಯವಾಹಿನಿಗೆ ತರುವುದು ಬಂದೀಖಾನೆಗಳ ಉದ್ದೇಶವೇ ಹೊರತು, ಅಪರಾಧಿಗಳನ್ನು ಹಿಂಸಿಸಿ ದಂಡಿಸುವುದಲ್ಲ ಎಂದು ಹೇಳಲಾಗುತ್ತದೆ. ಕನಿಷ್ಠ 'ಪ್ರಜಾಪ್ರಭುತ್ವವಾದಿ', 'ನಾಗರಿಕ' ಪ್ರಭುತ್ವವೊಂದು ಅದೇ ಧೋರಣೆಯನ್ನು ಹೊಂದಿರಬೇಕು. ಆದರೆ ಈ ಜೈಲುಗಳು ನಮ್ಮ ಸಮಾಜದಷ್ಟೇ ಅಮಾನವೀಯವೂ, ಅಸಮಾನವೂ, ಶ್ರೇಣೀಕೃತವೂ ಆಗಿವೆ



ಅದೊಂದು ಲೋಕ. ಸದಾ ನಿಸ್ತೇಜವಾಗಿ, ನಿರ್ಜೀವವೆಂಬಂತೆ ಇರುವ ಲೋಕ. ಅದು ಜೀವಂತವಾಗುವುದು ಅಲ್ಲಿನ ವಾಸಿಗಳಲ್ಲೇ ಕೆಲವರು ಇದ್ದಕ್ಕಿದ್ದಂತೆ ಯಾವುದೋ ಸಣ್ಣ ವಿಚಾರಕ್ಕೆ ಜಗಳವಾಡಿಕೊಂಡು, ಹೊಡೆದಾಡಿಕೊಳ್ಳುವಾಗ ಮಾತ್ರ. ಅಲ್ಲಿ ಯಾಕಿದ್ದೇವೆಂದೇ ತಿಳಿಯದ ಕೆಲವರು, ಮುಂದೆ ಎಲ್ಲಿರುತ್ತೇವೆ, ಹೇಗಿರುತ್ತೇವೆಂದೇ ತಿಳಿಯದ ಹಲವರು...

ಹಲವು ಕುಟುಂಬಗಳ ಮಟ್ಟಿಗೆ ಅವರು ಸತ್ತಂತೆ. ವರದಕ್ಷಿಣೆ ಕಿರುಕುಳದ ಆರೋಪ ಅಥವಾ ಇತರೆ ಕೆಲವು ಪ್ರಕರಣಗಳಲ್ಲಿ ಇಡೀ ಕುಟುಂಬವೇ ಬಂಧಿತರಾಗಿರುವುದನ್ನು ಹೊರತುಪಡಿಸಿ, ಉಳಿದವರನ್ನು ನೋಡಲು ಬರುವವರು, ಕಾಳಜಿ ವಹಿಸುವವರು ಬಹಳಷ್ಟು ಸಂದರ್ಭಗಳಲ್ಲಿ ಯಾರೂ ಇಲ್ಲ.

ಒಂದು ದಿನದಲ್ಲಿ ಜಾಮೀನು ಪಡೆದು ಹೊರಹೋಗಬೇಕಾದಂತಹ ಸಣ್ಣಪುಟ್ಟ ಪ್ರಕರಣಗಳಲ್ಲೂ ಈ

ಸದ್ಯಕ್ಕೆ ಜಾರಿಯಲ್ಲಿರುವ ಕಾನೂನಿನ ಪ್ರಕಾರ ವೇಶ್ಯಾವಾಟಿಕೆ ಮಾಡುವ ಮಹಿಳೆಯರನ್ನು ಬಂಧಿಸುವಂತಿಲ್ಲ. ಅವರನ್ನು ವೇಶ್ಯಾವಾಟಿಕೆಗೆ ತಳ್ಳುವವರನ್ನಷ್ಟೇ ಬಂಧಿಸಬೇಕು (ಪಿಂಪ್-ತಲೆಹಿಡುಕರನ್ನು). ಕೇವಲ 'ವೇಶ್ಯಾವಾಟಿಕೆಗೆ ಪ್ರಚೋದನೆ (Soliciting)' ಎಂಬ ಆರೋಪದಲ್ಲಿ ಮಾತ್ರ ಈ ಯುವತಿಯನ್ನು ಬಂಧಿಸಬಹುದೆಂಬ ನಿಯಮವಿದೆ.

ಬಂದಾಗಿನಿಂದ ಮಹಿಳೆ/ಪುರುಷ ಯಾವ ಜೀವಾವ[ಧಿ] ಕೈದಿಗಳಿಗೂ ಕ್ಷಮಾದಾನ ದೊರಕಿಲ್ಲ, ಅದಕ್ಕಾ[ಗಿ] ಇವರೆಲ್ಲಾ ಚಾತಕ ಪಕ್ಷಿಗಳಂತೆ ಕಾದಿದ್ದಾರೆ.

ಇಂತಹ ಎಲ್ಲಾ ಹತಾಶೆಗಳನ್ನು ಹೆಣ್ಣು ಮಕ್ಕ[ಳು] ತಮ್ಮತಮ್ಮೊಳಗೆ ಜಗಳವಾಡಿ, ಹೊಡೆದಾಡಿಕೊಳ್ಳು[ವ] ಮೂಲಕ ಹೊರಹಾಕುತ್ತಾರೆ. ಜಗಳವಾಡುವುದ[ು] ಎಂದರೆ ಅಲ್ಲಿ ಯಾರಾದರೊಬ್ಬ ಶತ್ರುವನ್ನು ಗುರುತಿ[ಸಿ]ಕೊಂಡಿರುತ್ತಾರೆ. ಅಂತಹವರು ಸಣ್ಣದೋ, ಪುಟ್ಟದೋ ತಪ್ಪು ಮಾಡಿದ ಯಾವುದಾದರೂ ಸಂದರ್ಭ ಬಂದ[ರೆ] ಎಲ್ಲರೂ ಸೇರಿ ಆಕೆಯ ಜುಟ್ಟನ್ನು ಹಿಡಿದು, ದರದರ ಎಳೆದು, ಪೊರಕೆಯಲ್ಲಿ ಬಾರಿಸಿ ತಮ್ಮ ಸಿಟ್ಟ[ನ್ನು] ಹೊರಹಾಕುತ್ತಾರೆ. ಕೆಲವೊಮ್ಮೆ ತಮ್ಮ ತಮ್ಮಲ್ಲೇ ಜಗಳಗಳ[ನ್ನು] ಮಾಡಿಕೊಳ್ಳುವುದೂ ಇರುತ್ತದೆ. ನಿಜಕ್ಕೂ ಹೊಡೆಸಿಕೊಳ್ಳು[]ತ್ತಿರುವವರು, ಹೊಡೆಯುತ್ತಿರುವವರು ಇಬ್ಬರೂ ವ್ಯವಸ್ಥೆಯ ಬಲಿಪಶುಗಳೇ ಆಗಿರುತ್ತಾರೆ. ನಾವು ಹೋ[ದ] ದಿನವೇ 'ಸೈನೈಡ್ ಮಲ್ಲಿಕಾ' ಎಂದು ಕರೆಯಲ್ಪಡು[ವ] ಜೀವಾವಧಿ ಕೈದಿಗೆ ಯಾವುದೋ ಸಣ್ಣ ಕಾರಣಕ್ಕೆ ಉಳಿ[]

ಅಮಾನವೀಯ ವ್ಯವಸ್ಥೆಯೊಳಗೂ ಮಿಡಿಯುವ ಮನಸುಗಳು

ಪರಪ್ಪನ ಅಗ್ರಹಾರದ ಮಹಿಳಾಲೋಕ



ವಿಶ್ವಾದ ಅತಿದೊಡ್ಡ ಬಂದೀಖಾನೆಯೆಂಬ 'ಹೆಗ್ಗಳಿಕೆ'ಗೆ ಪಾತ್ರವಾಗಿರುವ ಪರಪ್ಪನ ಅಗ್ರಹಾರ ಬಂದೀಖಾನೆಯ ಮಹಿಳಾ ವಿಭಾಗದಲ್ಲಿ ಕಂಡ ದೃಶ್ಯವಿದು. ಕರ್ನಾಟಕದಲ್ಲಿ 3000 ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ಕ್ರಮವನ್ನು ಖಂಡಿಸಿ, ಕರ್ನಾಟಕ ಜನಶಕ್ತಿ ಮತ್ತು ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ನವೆಂಬರ್ 1ರ ಸರ್ಕಾರಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರತಿಭಟನೆ ನಡೆಸಿದ್ದಕ್ಕಾಗಿ ನಮ್ಮನ್ನು ಬಂಧಿಸಲಾಗಿತ್ತು. ಹಿಂದೆಯೂ ಒಂದು ಹೋರಾಟದಲ್ಲಿ ನಾವು ಬಂಧಿತರಾಗಿದ್ದರೂ ಬೇರೆ ಇತರೆ ಬಂಧಿಗಳೊಂದಿಗೆ ಬೆರೆಯದಂತೆ ಪ್ರತಿಭಟನಾಕಾರರನ್ನು ಪ್ರತ್ಯೇಕವಾಗಿಡಲಾಗುತ್ತಿತ್ತು. ಆದರೆ ಈ ಬಾರಿ ನಾವು ಐದೇ ಮಂದಿ ಹೆಣ್ಣುಮಕ್ಕಳಿದ್ದರಿಂದ ಅವರೊಂದಿಗೆ ಬೆರೆಯುವ ಅವಕಾಶ ಸಿಕ್ಕಿತು.

ಅಪರಾಧಿಗಳ ಮನಃಪರಿವರ್ತಿಸಿ, ಅವರನ್ನು ಮುಖ್ಯವಾಹಿನಿಗೆ ತರುವುದು ಬಂದೀಖಾನೆಗಳ ಉದ್ದೇಶವೇ ಹೊರತು, ಅಪರಾಧಿಗಳನ್ನು ಹಿಂಸಿಸಿ ದಂಡಿಸುವುದಲ್ಲ ಎಂದು ಹೇಳಲಾಗುತ್ತದೆ. ಕನಿಷ್ಠ 'ಪ್ರಜಾಪ್ರಭುತ್ವವಾದಿ', 'ನಾಗರಿಕ' ಪ್ರಭುತ್ವವೊಂದು ಅದೇ ಧೋರಣೆಯನ್ನು ಹೊಂದಿರಬೇಕು. ಆದರೆ ಈ ಜೈಲುಗಳು ನಮ್ಮ ಸಮಾಜದಷ್ಟೇ ಅಮಾನವೀಯವೂ, ಅಸಮಾನವೂ, ಶ್ರೇಣೀಕೃತವೂ ಆಗಿವೆಯೆಂಬುದು ನಮ್ಮೆಲ್ಲರ ನೇರವಾದ ಅನುಭವಕ್ಕೆ ಬಂತು.

ಒಟ್ಟಾರೆ ಸಮಾಜದಲ್ಲಿ ತೀವ್ರವಾಗಿರುವ ಪುರುಷಾಧಿಪತ್ಯ ಮತ್ತು ಲಿಂಗತಾರತಮ್ಯದ ಅಂಶಗಳು ಇಲ್ಲಿ ಮುಖಕ್ಕೆ ರಾಚುತ್ತವೆ. ಸ್ವಲ್ಪ ದೊಡ್ಡ ಸರ್ಕಾರಿ ಹಾಸ್ಟೆಲ್‌ನಂತಹ ಒಂದು ಕಟ್ಟಡದ ಒಳಭಾಗದ ಸಣ್ಣ ಆವರಣಕ್ಕಷ್ಟೇ ಈ ಮಹಿಳಾ ಕೈದಿಗಳ ಚಲನವಲನ ಸೀಮಿತಗೊಂಡಿರುತ್ತದೆ. ಪುರುಷ ಕೈದಿಗಳು ಹತ್ತಾರು ಎಕರೆಗಳ ದೊಡ್ಡ ಆವರಣದಲ್ಲಿ ಇಡೀ ದಿನ ತಿರುಗಾಡಬಹುದಾದಷ್ಟು ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಈ ಬಗ್ಗೆ ಸಿಬ್ಬಂದಿಗಳಲ್ಲಿ ಕೇಳಿದಾಗ, ತೋಟಗಾರಿಕೆ ಅಥವಾ ವ್ಯಾಯಾಮ ಅಥವಾ ಬೇರೆ ಯಾವುದೇ ಚಟುವಟಿಕೆಗೆಂದು ಮಹಿಳೆಯರನ್ನು ಹೊರಬಿಡುವುದು ಮಹಿಳೆಯರ ಸುರಕ್ಷತೆಗೇ ಅಪಾಯಕಾರಿಯೆಂಬ ಉತ್ತರ ಬಂದಿತು. ಪುರುಷರಿಂದ ಮಹಿಳೆಯರಿಗೆ ತೊಂದರೆಯಾಗುವುದಾದರೆ ಪುರುಷರ ಚಲನವಲನವನ್ನು ನಿರ್ಬಂಧಿಸಬೇಕೇ ಹೊರತು ಮಹಿಳೆಯರದ್ದಲ್ಲವಲ್ಲಾ ಎಂಬ ಪ್ರಶ್ನೆಗೆ ಯಾರಲ್ಲಿಯೂ ಉತ್ತರವಿರಲಿಲ್ಲ.


ಹೀಗೆ ಅಕ್ಷರಶಃ ಕಠೋರವಾಗಿ ಬಂಧಿಸಲ್ಪಟ್ಟಿರುವ ಈ ಮಹಿಳಾ ಕೈದಿಗಳ ಲೋಕ ಹತಾಶೆ-ನಿರಾಶೆಗಳ ರೂಪದಂತೆ ಕಾಣುತ್ತದೆ. ಮಹಿಳೆಯರು ಜೈಲಿಗೆ ಹೋಗುವುದೆಂಬುದು

ಮಹಿಳೆಯರು ತಿಂಗಳುಗಟ್ಟಲೆ ಕೊಳೆಯಬೇಕಾಗಿ ಬಂದಿದೆ. ಈ ಮಹಿಳೆಯರನ್ನು ಪ್ರಕರಣಗಳ ಹಿಯರಿಂಗ್‌ಗಾಗಿ ಕೋರ್ಟಿಗೆ ಕರೆದೊಯ್ಯಬೇಕಾದ 'ಎಸ್ಕಾರ್ಟ್'ಗಳದ್ದೊಂದು ದೊಡ್ಡ ಸಮಸ್ಯೆ. ಜೈಲಿನಲ್ಲಿರುವ ಸಿಬ್ಬಂದಿಗಳ ಸಂಖ್ಯೆಗೂ, ಬಂಧಿಗಳ ಸಂಖ್ಯೆಗೂ ಹೋಲಿಕೆಯೇ ಇಲ್ಲ. ಹೀಗಾಗಿ ಹಲವು ಬಾರಿ ವಿಚಾರಣೆಯ ದಿನಾಂಕಗಳಂದು ಎಸ್ಕಾರ್ಟ್‌ಗಳಿಲ್ಲದೆ, ಹಾಜರಾಗಲು ಸಾಧ್ಯವಾಗದೆ ಪ್ರಕರಣಗಳು ವರ್ಷಗಟ್ಟಲೆ ಎಳೆದಾಡುತ್ತಿವೆ. ಹೀಗಿರುವಾಗ ಬೆಂಬಲ ನೀಡುವ ಕುಟುಂಬವೂ ಇಲ್ಲದವರು ತಮ್ಮ ಕೇಸಿನ ಖರ್ಚಿಗೆ ಹಣ ಹೊಂದಿಸುವುದಕ್ಕೆ, ಜೈಲಿನ ಬಚ್ಚಲು, ಮೋರಿ ತೊಳೆದು (ಸರದಿ ಪ್ರಕಾರ ಈ ಕೆಲಸ ಎಲ್ಲರೂ ಮಾಡಬೇಕಾದರೂ ಹಣವಿರುವ ಕೈದಿಗಳು ನಿರ್ಗತಿಕ ಕೈದಿಗಳ ಕೈಯ್ಯಲ್ಲಿ ಮಾಡಿಸುತ್ತಾರೆ. ಇದಕ್ಕೆ ಅವರಿಗೆ ಕೊಡುವ ಹಣ ಕೇವಲ 20 ರೂ.) ಪುಡಿಗಾಸು ಕೂಡಿಡುತ್ತಾರೆ. ಇಲ್ಲವೇ ಜೈಲಿನ ಬೇಕರಿ, ಅಗರಬತ್ತಿ ತಯಾರಿಕಾ ಘಟಕಗಳಲ್ಲಿ ಬಿಡುವಿಲ್ಲದೇ ದುಡಿಯುತ್ತಾರೆ. ಈ ಕೆಲಸದಲ್ಲಿ ಅವರಿಗೆ ಸಿಗುವ ಹಣ ದಿನಕ್ಕೆ ಕೇವಲ 10 ರೂ.!

ಖಾಸಗಿ ವಕೀಲರನ್ನಿಡಲು ಶಕ್ತಿಯಿಲ್ಲದವರ ಪ್ರಕರಣಗಳನ್ನು ಸರ್ಕಾರದಿಂದ ಉಚಿತವಾಗಿ ನಿರ್ವಹಿಸುವ ವ್ಯವಸ್ಥೆ ಇದ್ದರೂ – ನಮ್ಮ ಇಡೀ ಯಂತ್ರಾಂಗವೇ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವಾಗ – ಇಲ್ಲಿ ಮಾತ್ರ ಮಾನವೀಯ ಕಳಕಳಿಯನ್ನು ನಿರೀಕ್ಷಿಸಲು ಸಾಧ್ಯವೇ? ಅತ್ಯಂತ ಸಂಕಷ್ಟದಲ್ಲಿರುವ ಮಹಿಳಾ ಕೈದಿಗಳಿಂದಲೂ ಇದ್ದ ಬದ್ದ ಹಣ ಕೀಳುವಂತಹ ಒಂದು ದೊಡ್ಡ ಸರಣಿಯೇ ಜೈಲಿನಲ್ಲಿದೆ. ಅದು ಜೈಲಿನ ಸಿಬ್ಬಂದಿ, ಅಧಿಕಾರಿಗಳಿಂದ ಹಿಡಿದು, ಪೊಲೀಸರು, ವಕೀಲರು, ಅಷ್ಟೇ ಏಕೆ ನ್ಯಾಯಾಧೀಶರವರೆಗೂ ಹರಡಿದೆ.

ವೇಶ್ಯಾವಾಟಿಕೆಯ ಪ್ರಕರಣಗಳಲ್ಲಿ ಬಂಧಿಸಲ್ಪಡುವ ಯುವತಿಯರು ಮತ್ತು 'ಆಂಟಿ'ಗಳದ್ದು ಬೇರೊಂದು ಕಥೆ. ಭಾರತದ ಮೂಲೆ ಮೂಲೆಯ ಯಾವುಯಾವುದೋ ರಾಜ್ಯಗಳ ಹಳ್ಳಿಗಳಿಂದ, ಕೆಲವೊಮ್ಮೆ ನೇಪಾಳ, ಟಿಬೆಟ್‌ಗಳಿಂದಲೂ ಯುವತಿಯರು ಇಲ್ಲಿಗೆ ಬರುತ್ತಾರೆ.

ಇದನ್ನೇ ನೆಪವಾಗಿಟ್ಟುಕೊಂಡು ಪೊಲೀಸರು ಇವರನ್ನು ಬಂಧಿಸುತ್ತಾರೆ. ಅವರ ಪಾಲಿಗೆ ಈ ಯುವತಿಯರು 'ಚಿನ್ನದ ಮೊಟ್ಟೆ' ಇಡುವ ಕೋಳಿಗಳಂತೆ. ಇವರನ್ನು ದಂಡ ಕಟ್ಟಿ ಬಿಡಿಸಿಕೊಳ್ಳುವ ಮತ್ತೊಂದು ಜಾಲವೇ ಇದೆ. ಅವರಿಗೆ ಈ ಯುವತಿಯರು ಮುಂದೆ ಜೀವನಪರ್ಯಂತ ಜೀತದಾಳುಗಳಂತೆ ದುಡಿಯಬೇಕು. ಜೈಲಿನ ಎಲ್ಲರಿಗೂ ಹೀಗೆ ಬರುವವರು ಒಂದೇ ದಿನದಲ್ಲಿ ಬಿಡುಗಡೆಯಾಗಿ ಹೋಗುತ್ತಾರೆಂಬುದು ಗೊತ್ತಿರುತ್ತದೆ. ಆದರೆ ನಿಜವಾಗಿಯೂ ಆ ನತದೃಷ್ಟ ಯುವತಿಯರ ಪಾಲಿಗೆ ಅದು ಬಿಡುಗಡೆಯಲ್ಲ; ಮತ್ತೊಂದು ಬಿಡುಗಡೆಯಿಲ್ಲದ ಬಂಧನ!!



ಈಗಾಗಲೇ ಶಿಕ್ಷೆಗೊಳಪಟ್ಟಿರುವ ಜೀವಾವಧಿ ಕೈದಿಗಳ ದುರಂತ ಕಥೆ ಮತ್ತೊಂದು ರೀತಿಯದ್ದು. ಇವರಲ್ಲಿ ಶೇ.99 ಮಹಿಳೆಯರು ಯಾವುದೇ ಕ್ರಿಮಿನಲ್ ಹಿನ್ನೆಲೆ ಹೊಂದಿದವರಲ್ಲ, ಆಕಸ್ಮಿಕವಾಗಿ ಆ ಕ್ಷಣದ ಒತ್ತಡದಲ್ಲಿ ಅಪರಾಧವೆಸಗಿದವರು. ಆದಕ್ಕಾಗಿ ಅವರಿಗೆ ಸಲ್ಲಬೇಕಾದ್ದಕ್ಕಿಂತ ಎಷ್ಟೋ ಹೆಚ್ಚು ಶಿಕ್ಷೆ ಮತ್ತು ಮಾನಸಿಕ ಯಾತನೆಯನ್ನು ಈಗಾಗಲೇ ಅನುಭವಿಸಿದ್ದಾರೆ. ಕೆಲವರಿಗಂತೂ ಬಿಡುಗಡೆಯಾದರೆ ಬಾ ಎಂದು ಮನೆಯೊಳಕ್ಕೆ ಸೇರಿಸಿಕೊಳ್ಳುವವರೂ ಇಲ್ಲ. ಇಂತಹ ಪಾಪದ ಮಹಿಳೆಯರಿಗೂ, ಪ್ರತೀ ವರ್ಷ ಎಲ್ಲಾ ರಾಜ್ಯಗಳಲ್ಲೂ ಮಾಡುವಂತೆ 'ಉತ್ತಮ ನಡತೆ' ಆಧಾರದಲ್ಲಿ ಅಕಾಲಿಕ ಬಿಡುಗಡೆಯಾಗುತ್ತಿಲ್ಲ. ಬಿಜೆಪಿ ಸರ್ಕಾರ

ಹೆಣ್ಣು ಮಕ್ಕಳು ಪೊರಕೆ ತೆಗೆದುಕೊಂಡು ಹೊಡೆ[ದು] ಎಳೆದಾಡಿದರು. ಆಕೆಯೂ ಕೆಲವರ ಜುಟ್ಟು ಕಿತ್ತಳು. ಇದ[ನ್ನು] ನೋಡುವುದಕ್ಕೆ ಮಹಿಳಾ ಕೈದಿಗಳೆಲ್ಲಾ ನೂಕುನುಗ್ಗಲಲ್ಲಿ ಸೇ[ರಿ] ಕೂಗಾಡಿ ಸಂತೋಷಪಟ್ಟರು. ನಮಗೆ ದಿಗ್ಭ್ರಮೆಯಾಯಿತ[ು]. ಇಂತಹ ಘಟನೆಗಳ ಮೂಲಕವಷ್ಟೇ ತಾವು ಮನುಷ್ಯರೆಂ[ದು] ನೆನಪಿಸಿಕೊಳ್ಳುತ್ತಿರುವ ಇವರನ್ನು ಈ ಸ್ಥಿತಿಗೆ ತಂದಿರು[ವ] ವ್ಯವಸ್ಥೆಯನ್ನು ಏನೆನ್ನುವುದು?

ಜೈಲಿನಲ್ಲಿ ತಂದಿಟ್ಟಿರುವ ಟಿವಿಗಳಲ್ಲಿ ಅವೇ ಕೆ[] ಸೀರಿಯಲ್‌ಗಳು ಮತ್ತು ಅಧ್ವಾನದ ಸಿನಿಮಾಗಳನ್ನು ಮಾತ್ರ[] ನೋಡುವ ಇವರಿಗೆ ಅಲ್ಲಿ ಬೇರೆ ಯಾವುದೇ ರೀತಿ[ಯ] ತಿಳುವಳಿಕೆ ದೊರೆಯುವ ವಾತಾವರಣವಿ[ಲ್ಲ] (ಪುರುಷರ ವಿಭಾಗದಲ್ಲಿ ಒಂದು ಮಟ್ಟಿಗಾದರ[ೂ] ಈ ಪರಿಸ್ಥಿತಿ ಭಿನ್ನ ಎಂಬುದನ್ನು ಕೇಳಿ ತಿಳಿದೆ[ವು]). ನಾವು ಜೈಲಿನಲ್ಲಿ ಸಮಯ ಸಿಕ್ಕಾಗಲೆ[ಲ್ಲಾ] ಎಲ್ಲರೊಂದಿಗೂ ನಮ್ಮ ಹೋರಾಟದ ವಿಚಾ[ರ,] ಸಂಘಟನೆಯ ವಿಚಾರ, ಒಟ್ಟಾರೆ ಸಮಾಜ[ದ] ಕುರಿತು ಮಾತನಾಡಿದೆವು. ಅವರ ಕರುಣಾಜ[ನಕ] ಕತೆಗಳನ್ನು ಕೇಳಿದೆವು. ಜನರ-ಹೆಣ್ಣುಮಕ್ಕ[ಳ] ಬದುಕಿನ ಕುರಿತಾದ ಹಾಡುಗಳನ್ನು ಹಾಡಿದೆ[ವು]. ಹಾಡುಗಳಿಗೆ ಆ ಹೆಣ್ಣುಮಕ್ಕಳು ಕಣ್ಣೀರಾದ[ರು]. ಆ ದಿನವೇ ನಮ್ಮನ್ನು ಕಂಡಿದ್ದರೂ ನಾವು ಅವ[ರಿಗೆ] ದೊಡ್ಡ ಸಹಾಯ ಮಾಡಬಲ್ಲೆವೆಂಬ ಭರ[ವಸೆ] ಯಿಟ್ಟರು. ನಮ್ಮ ತಂಡದಲ್ಲಿದ್ದ ಕಿರಿಯ ಸ[] ಯರಾದ ಕಾಲೇಜು ವಿದ್ಯಾರ್ಥಿನಿಯರ[ನ್ನು] ಬಂಧಿಸಿದ್ದಕ್ಕೆ ಸರ್ಕಾರಕ್ಕೆ ಶಾಪ ಹಾಕಿದ[ರು,] ಮರುಗಿದರು. ಕೂಡಲೇ ನಮ್ಮ ಬಿಡುಗಡೆಯಾಗಲೆಂ[ದು] ಮನದುಂಬಿ ಹಾರೈಸಿದರು. ಅವರಲ್ಲಿ ಹಲವರಿಗೆ ತ[ಮ್ಮ] ನಾಳಿನ ಗತಿಯೇನೆಂದೇ ತಿಳಿದಿಲ್ಲ; ಆ ಕುರಿತು ಆಲೋಚಿ[ಸು]ವುದೇ ಅವರ ಪಾಲಿಗೆ ಶಾಪ. ಅಂತಹವರು, ಎರಡನೇ [] ರಾತ್ರಿ 8 ಗಂಟೆಗೆ ನಮ್ಮ ಬಿಡುಗಡೆಯ ಕರೆ ಬಂದಾಗ ಕೆ[] ಹಾಕಿ, ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ಕೈಕುಲುಕಿ ನಮ್ಮ[ನ್ನು] ಬೀಳ್ಕೊಟ್ಟರು.

ಅತ್ಯಂತ ಅಮಾನವೀಯವಾದ ಈ ವ್ಯವಸ್ಥೆಯೊ[ಳಗೂ] ಮಾನವೀಯವಾಗಿ ಮಿಡಿದ ಆ ಮನಸ್ಸುಗಳನ್ನು ಅಲ್ಲೇ ಬಿ[ಟ್ಟು] ಹೊರಬರುವಾಗ ಹೃದಯ ಭಾರವಾಗಿತ್ತು!

• ಮಲ್ಲಿಗೆ, ಸಮಾನತಾ ಮಹಿಳಾ ವೇ[ದಿಕೆ]


ಐಷಾರಾಮಿ ಕಾರುಗಳು...



ಚಿನ್ನದ ಒಳಾಂಗಣ....


ಚಿನ್ನಾಭರಣಗಳ ರಾಶಿ...

ಗಾಲಿ ರೆಡ್ಡಿ ವೈಭವದ ಬದುಕು ಪಂಕ್ಚರ್

ಹತ್ತಾರು ಹೆಲಿಕಾಪ್ಟರ್‌ಗಳು, ನೂರಾರು ಇಂಪೋರ್ಟೆಡ್ ಕಾರುಗಳು, ಸಾವಿರಾರು ಗಣಿ ಲಾರಿಗಳಿಂದ ಸದಾ ಗಿಜಿಗುಡುತ್ತಿದ್ದ ಬಳ್ಳಾರಿ ಈಗ ಮ್ಯಾಪ್‌ನಲ್ಲಿರುವಷ್ಟೆ ಸ್ತಬ್ಧವಾಗಿ ಕುಳಿತಿದೆ. ವಿಧಾನಸೌಧಕ್ಕೂ ಪೈಪೋಟಿ ನೀಡುವಂತೆ ಮೆರೆದಾಡಿದ್ದ ರೆಡ್ಡಿಯ ಭವ್ಯ ಭಂಗಲೆ 'ಕುಟೀರ' ಈಗ ಸಪ್ಪೆಯಾಗಿ, ಸುಸ್ತಾಗಿ ನಿಂತಿದೆ.

• ಗಿರೀಶ್ ತಾಳಿಕಟ್ಟೆ



ಹೆಸರಿಗೆ 'ಕುಟೀರ' ಅಂತ ಇದ್ದರೂ ಚಿನ್ನದ ಅರಮನೆಯಂತಿರುವ ಗಾಲಿ ಜನಾರ್ದನ ರೆಡ್ಡಿಯ ಮನೆಯಲ್ಲೂ ದುಡ್ಡಿನ ಸಮಸ್ಯೆ!

ಹೌದು.... ನೀವಿದನ್ನು ನಂಬಲೇಬೇಕು. ಈ ಮೊದಲು ತಿಂಗಳಿಗೆ ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದ ರೆಡ್ಡಿ ಫ್ಯಾಮಿಲಿ ಈಗ ಐದು ಲಕ್ಷ ರೂಪಾಯಿ ಖರ್ಚಿನಲ್ಲೇ ಎಲ್ಲಾ ಮೆಂಟೇನ್ ಮಾಡುತ್ತಿದ್ದಾರೆ.

ಇದರರ್ಥ ಅವರ ಹತ್ತಿರ ಹಣ ಇಲ್ಲ ಅಂತಲ್ಲ, ಅವರ ತಿಜೋರಿ ಖಾಲಿಯಾಗಿದೆ ಅಂತಲೂ ಅಲ್ಲ.

ಮನೆಯಲ್ಲಿ ಇದ್ದಬದ್ದ ಕ್ಯಾಷ್‌ಅನ್ನು ಸಿಬಿಐನವರು ಎತ್ತಿಕೊಂಡು ಹೋಗಿದ್ದಾರೆ. ಇನ್ನು ಬ್ಯಾಂಕ್‌ಗಳಲ್ಲಿ, ಲಾಕರ್‌ಗಳಲ್ಲಿ ಕೋಟಿಗಟ್ಟಲೆ ಹಣವಿದೆಯಾದರೂ ಅದನ್ನು ಬಳಸಲು ಅವಕಾಶವಿಲ್ಲ. ಈ ರೆಡ್ಡಿ ವರ್ಜಿನ್ ಐಲ್ಯಾಂಡ್ ಮತ್ತಿತರ ಕಡೆ ನೂರಾರು ಕೋಟಿ ಹಣ ಮುಚ್ಚಿಟ್ಟಿದ್ದಾನಾದರೂ ಈಗ ಅತ್ತ ಕೈ ಚಾಚುವಂತಿಲ್ಲ. ಅದರ ಸುಳಿವು ಸಿಕ್ಕರೆ ಸಿಬಿಐ ಅಧಿಕಾರಿ ಲಕ್ಷ್ಮಿನಾರಾಯಣ ಬಿಡುತ್ತಾನಾ?

ಸದ್ಯಕ್ಕೆ ಆ ದುಡ್ಡು ರೆಡ್ಡಿ ಫ್ಯಾಮಿಲಿ ಪಾಲಿಗೆ ಕನ್ನಡಿ ಗಂಟಿಗೆ ಸಮಾನ ಅಷ್ಟೆ.

ಇದೆಲ್ಲದರ ಪರಿಣಾಮವೆಂಬಂತೆ ರೆಡ್ಡಿ ಮನೆಯಲ್ಲೀಗ ತಾತ್ಕಾಲಿಕ ಬಡತನ.

ಹತ್ತಾರು ಹೆಲಿಕಾಪ್ಟರ್‌ಗಳು, ನೂರಾರು ಇಂಪೋರ್ಟೆಡ್ ಕಾರುಗಳು, ಸಾವಿರಾರು ಗಣಿ ಲಾರಿಗಳಿಂದ ಸದಾ ಗಿಜಿಗುಡುತ್ತಿದ್ದ ಬಳ್ಳಾರಿ ಈಗ ಮ್ಯಾಪ್‌ನಲ್ಲಿರುವಷ್ಟೇ ಸ್ತಬ್ಧವಾಗಿ ಕುಳಿತಿದೆ. ವಿಧಾನಸೌಧಕ್ಕೂ ಪೈಪೋಟಿ ನೀಡುವಂತೆ ಮೆರೆದಾಡಿದ್ದ ರೆಡ್ಡಿಯ ಭವ್ಯ ಭಂಗಲೆ 'ಕುಟೀರ' ಈಗ ಸಪ್ಪೆಯಾಗಿ, ಸುಸ್ತಾಗಿ ನಿಂತಿದೆ.

ಸ್ತಬ್ಧಗೊಂಡ ಹೆಲಿಕಾಪ್ಟರ್‌ಗಳು

ಅದೊಂದು ಕಾಲವಿತ್ತು. ಆಗ ರೆಡ್ಡಿಗಳು ತಮ್ಮ ಅರ್ಧ ದರ್ಬಾರನ್ನು ಹೆಲಿಕಾಪ್ಟರುಗಳಲ್ಲೇ ಮುಗಿಸಿ ಬಿಡುತ್ತಿದ್ದರು. ಸಿಟಿ ಲಿಮಿಟ್ಟಿನಿಂದ ಆಚೆಗೆ ಅವರ್ಯಾರು ಕಾರುಗಳಲ್ಲಿ ಓಡಾಡಿದವರೇ ಅಲ್ಲ. ರೆಡ್ಡಿಗಳ ನಾಲ್ಕು ಖಾಸಗಿ ಹೆಲಿಕಾಪ್ಟರ್‌ಗಳಲ್ಲದೇ ಅವರನ್ನು ಕಾಣಲು ಬರುತ್ತಿದ್ದ ವಿ.ಐ.ಪಿ ಮಂದಿಯ ಹೆಲಿಕಾಪ್ಟರ್‌ಗಳ ಸದ್ದೂ ಸಾಮಾನ್ಯ ಬಳ್ಳಾರಿಗರ ಕಿವಿಗಳನ್ನು ಕೊರೆದು ಹಾಕುತ್ತಿದ್ದವು. ಆದರೆ ರೆಡ್ಡಿ ಅರೆಸ್ಟಾದದ್ದೇ ತಡ ಉಕ್ಕಿನ ಹಕ್ಕಿಗಳ ಸುಳಿವೇ ಇಲ್ಲದಂತಾಗಿದೆ. ಆಗೆಲ್ಲ ಏನಿಲ್ಲವೆಂದರೂ ದಿನಕ್ಕೆ ಐದಾರು ಹೆಲಿಕಾಪ್ಟರ್‌ಗಳ ಹಾರಾಟಕ್ಕೆ ಸಾಕ್ಷಿಯಾಗುತ್ತಿದ್ದ ಹೆಲಿಪ್ಯಾಡ್ ಈಗ ಒಂದೂ ಗಿರಾಕಿ ಇಲ್ಲದೆ ಬಿಕೋ ಎನ್ನುತ್ತಿದೆ. ಹೆಲಿಪ್ಯಾಡಿನ ತುಂಬೆಲ್ಲಾ ಆಳೆತ್ತರಕ್ಕೆ ಹುಲ್ಲು ಬೆಳೆದು ನಿಂತಿದೆಯಾದರೂ ಅದನ್ನು ಕ್ಲೀನ್ ಮಾಡುವವರ ಗತಿಯೂ ಇಲ್ಲ. ಒಂದಿಬ್ಬರು ಹೆಂಗಸರು ನೆಪಕ್ಕೆಂಬಂತೆ ನೀರು ಹಾಯಿಸುವುದು ಬಿಟ್ಟರೆ ಅಲ್ಲಿ ಈಗ ಮತ್ಯಾವ ಚಟುವಟಿಕೆಯೂ ನಡೆಯುತ್ತಿಲ್ಲ.

ಮನೆ ಬಿಡದ ಸಹೋದರರು

ಜನಾರ್ದನ ರೆಡ್ಡಿ ಜೈಲು ಸೇರಿದ ನಂತರ ಅವನಣ್ಣ ಕರುಣಾಕರ ರೆಡ್ಡಿ ಮನೆಯಿಂದಾಚೆಗೆ ಕಾಣಿಸಿಕೊಂಡಿದ್ದೇ ಕಡಿಮೆ. ಆತ ಬಳ್ಳಾರಿಯಲ್ಲೇ ಇದ್ದಾನೋ ಅಥವಾ ಬೇರೆಲ್ಲಾದರು ಶಿಫ್ಟಾಗಿದ್ದಾನೊ ಎಂಬ ಅನುಮಾನ ಖುದ್ದು ಬಳ್ಳಾರಿ ಬಿಜೆಪಿಗರನ್ನೇ ಕಾಡುತ್ತಿದೆ. ಪರಿಸ್ಥಿತಿ ಹೀಗಿರುವಾಗ ಆತ ಹೆಲಿಕಾಪ್ಟರ್‌ಗಳಿರಲಿ ಐಶಾರಾಮಿ ಕಾರುಗಳಲ್ಲೂ ಸುತ್ತಾಡುವ ಮಾತೇ ಬರುವುದಿಲ್ಲ.

ಇನ್ನು ಜನಾರ್ದನ ರೆಡ್ಡಿಯ ತಮ್ಮ ಸೋಮಶೇಖರ ರೆಡ್ಡಿ ಈಗ ಸಣ್ಣ ಪುಟ್ಟ ಸ್ಥಳೀಯ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾನಾದರೂ ಆತ ಇನ್ನೆಲ್ಲೂ ತನ್ನ ಎಮ್ಮೆ ಮುಖ ತೋರಿಸುವ ಸಾಹಸಕ್ಕೆ ಹೋಗುತ್ತಿಲ್ಲ. ರೆಡ್ಡಿಯ ಚೆಡ್ಡಿ ದೋಸ್ತ್ ಶ್ರೀರಾಮುಲು ರೆಡ್ಡಿಯ ಬಂಧನದಿಂದ ಆದ ಆಘಾತದಿಂದ ಚೇತರಿಸಿಕೊಳ್ಳಲಿಕ್ಕಾಗದೆ ಶಿವಮೊಗ್ಗದ ಮನೋವೈದ್ಯರನ್ನು ಕಾಣುವಂತಾಗಿದೆ. ಅದೇ ವ್ಯಾಧಿಯಲ್ಲಿ ಆತ ಬಾಯಿಗೆ ಬಂದಂತೆ ಬಡಬಡಾಯಿಸಲು ಹೋಗಿ ಉಪಚುನಾವಣೆಯನ್ನು ಮೈಮೇಲೆಳೆದುಕೊಂಡಿರುವುದರಿಂದ ಆತನೂ ಬಳ್ಳಾರಿ ದುನಿಯಾದಿಂದಾಚೆಗೆ ಹೆಜ್ಜೆ ಇಟ್ಟಿದ್ದೇ ಕಡಿಮೆ.

ಎಲ್ಲಾ ನೆಟ್ಟಗಿದ್ದಾಗ ರೆಡ್ಡಿಗಳನ್ನು ಎತ್ತಿ ಮೆರೆಸಿದ ಯಾರೂ ರೆಡ್ಡಿ ಸೆರೆಯಾದ ಮೇಲೆ ಅತ್ತ ತಿರುಗಿಯೂ ನೋಡುತ್ತಿಲ್ಲ. ಆಪರೇಷನ್ ಕಮಲವೆಂಬ ಹೊಲಸು ಯೋಜನೆಯಲ್ಲಿ ರೆಡ್ಡಿಯ ದುಡ್ಡು ತಿಂದ ಖದೀಮರಿಗೆ ಈಗ ಸಿಬಿಐ ತಮ್ಮನ್ನೂ ಅಟಕಾಯಿಸಿಕೊಳ್ಳಬಹುದೆಂಬ ನಡುಕ ಶುರುವಾಗಿದೆ. ಆ ಕಾರಣಕ್ಕೇ ಅವರೆಲ್ಲ ಈಗ ಬಳ್ಳಾರಿಯಿಂದ ದೂರವೇ ಉಳಿದುಬಿಟ್ಟಿದ್ದಾರೆ. ದಿಲ್ಲಿಯಮ್ಮ ಸುಷ್ಮಾಳಂತೂ ರೆಡ್ಡಿಯ ಜೈಲಿನಾಟ ಶುರುವಾಗುವ ಮುನ್ನವೇ ತನಗೂ ಗಣಿ ಗ್ಯಾಂಗಿಗೂ ಸಂಬಂಧವೇ ಇಲ್ಲ ಎಂದು ಹೇಳಿ ದೂರವಾಗಿಬಿಟ್ಟಳು.

ಇದೆಲ್ಲದರ ಮಧ್ಯೆ ಸುಪ್ರೀಂ ಕೋರ್ಟ್ ಬಳ್ಳಾರಿ ವ್ಯಾಪ್ತಿಯಲ್ಲಿ ಗಣಿಗಾರಿಕೆಯನ್ನೇ ಸ್ಥಗಿತಗೊಳಿಸಬೇಕೆಂದು ಆದೇಶಿಸಿದ್ದರಿಂದ ಇತರೆ ಗಣಿಕೋರರೂ ಅತ್ತ ಸುಳಿಯುತ್ತಿಲ್ಲ. ಇವೆಲ್ಲ ಕಾರಣಗಳಿಂದಾಗಿ ರೆಡ್ಡಿ ಆಳ್ವಿಕೆಯಲ್ಲಿ ಗುಂಯ್‌ಗುಡುತ್ತಿದ್ದ ಹೆಲಿಕಾಪ್ಟರ್‌ಗಳೂ, ಲವಲವಿಕೆಯಿಂದಿದ್ದ ಹೆಲಿಪ್ಯಾಡೂ ಮೌನವಾಗಿವೆ.

ಕುಟೀರದ ಕುಚೇಲತನ

ಸಿಬಿಐನವರು ರೇಡು ಮಾಡಲು ಜನಾರ್ದನ ರೆಡ್ಡಿಯ ಕುಟೀರವನ್ನು ಹೊಕ್ಕಾಗ ದಂಗು ಬಡಿದು ಹೋಗಿದ್ದರು. ಅಕ್ರಮ ಗಣಿಗಾರಿಕೆಯಿಂದ ಗಳಿಸಿದ ಹಣವನ್ನು ಆತ ಎಲ್ಲೋ ಮುಚ್ಚಿಟ್ಟಿರಬಹುದು ಎಂದು ಕೊಂಡಿದ್ದ ಸಿಬಿಐನವರಿಗೆ ರೆಡ್ಡಿ ರೇಡ್ ಕೆಲಸವನ್ನು ಸಲೀಸು ಮಾಡಿಟ್ಟಿದ್ದ. ಶೋಕಿ ತೆವಲಿಗೆ ಬಿದ್ದಿದ್ದ ರೆಡ್ಡಿ ಮನೆಯ ಪೀಠೋಪಕರಣ ದಿಂದ ಹಿಡಿದು ಜೀವನ ಶೈಲಿಯವರೆಗೆ ಅದೆಷ್ಟು ದುಬಾರಿಯಾಗಿದ್ದನೆಂದರೆ ಹೆಚ್ಚಿನ ಎನ್‌ಕ್ವೈರಿಯ ಅಗತ್ಯವೇ ಇಲ್ಲದೆ ಆತನನ್ನು ಕಾರಿನೊಳಕ್ಕೆ ಗದುಮಿ ಕೊಂಡಿದ್ದರು. ಹತ್ತಾರು ಸಾವಿರ ಚದರಡಿ ವಿಸ್ತೀರ್ಣದಲ್ಲಿ ನಿರ್ಮಿಸಿದ್ದ ಭವ್ಯ ಬಂಗಲೆ ಐಷಾರಾಮಿತನದ ಎಲ್ಲಾ ಸೌಲಭ್ಯಗಳನ್ನು ಮೆತ್ತಿಕೊಂಡು ನಿಂತಿತ್ತು. ಮನೆಯೊಳಗೇ ಸ್ವಿಮ್ಮಿಂಗ್ ಪೂಲ್, ಮಿನಿ ಸಿನಿಮಾ ಥಿಯೇಟರ್, ವೈಭವೋಪೇತ ಪೂಜಾ ಮಂದಿರ, ಪಾಶ್ಚಾತ್ಯ ಶೈಲಿಯ ಲಿಕ್ಕರ್ ಕ್ಯಾಬಿನ್, ದುಬಾರಿ ಅಮೃತ ಶಿಲೆ ಫ್ಲಾರಿಂಗ್, 15 ಕೆಜಿ ಬಂಗಾರದ ಸಿಂಹಾಸನ, ಬಂಗಾರ-ವಜ್ರ-ಪ್ಲಾಟಿನಮ್‌ನ ರಾಶಿ ರಾಶಿ ಆಭರಣಗಳು, ಸಾಲುಗಟ್ಟಿ ನಿಂತಿದ್ದ ಐವತ್ತಕ್ಕೂ ಹೆಚ್ಚು ವಿದೇಶಿ ಕಾರ್‌ಗಳು.... ಅಬ್ಬಬ್ಬಾ ಕಥೆಯಲ್ಲಿ ಕೇಳಿದ್ದ ಅಲಿಬಾಬಾನ ಗುಹೆಯನ್ನು ತೆರೆದಂತಹ ಅನುಭವ ನಮಗಾಗಿತ್ತು ಎಂದು ಸಿಬಿಐ ಅಧಿಕಾರಿಗಳೇ ಹೇಳಿದ್ದಾರೆ.

ಅವತ್ತು ಸಿಬಿಐನವರು ಬರುವಾಗಲೇ 53 ಐಟಮ್ಮುಗಳನ್ನು ಸೀಜು ಮಾಡಲು ಸುಪ್ರೀಂ ಕೋರ್ಟ್‌ನಿಂದ ಆರ್ಡರ್ ತಂದಿದ್ದರು. ಮನೆಯಲ್ಲಿದ್ದುದನ್ನಲ್ಲದೇ ರೆಡ್ಡಿ ಫ್ಯಾಮಿಲಿ ಆಪರೇಟ್ ಮಾಡುತ್ತಿದ್ದ ಬ್ಯಾಂಕ್‌ಗಳ ಒಟ್ಟು 204 ಲಾಕರ್‌ಗಳಿಂದ 13 ಕೆಜಿ ಚಿನ್ನ ಹಾಗೂ 2.68 ಕೋಟಿ ನಗದನ್ನು ಜಪ್ತಿ ಮಾಡಿದ್ದರು. ಹೀಗೆ ಬಂದು ಹಾಗೆ ಹೋದ ಸಿಬಿಐ ತಂಡ ಜನಾರ್ದನ ರೆಡ್ಡಿಯ ಜೊತೆಗೆ ಕುಟುಂಬದ ಐಷಾರಾಮಿತ್ವವನ್ನೇ ಸೀಜ್ ಮಾಡಿಕೊಂಡು ಹೋಗಿದೆ. ಆ ರೇಡ್ ಆದ ನಂತರ ಕುಟೀರದ ಲೈಫ್ ಸ್ಟೈಲೇ ಸಂಪೂರ್ಣ ಬದಲಾಗಿದೆ. ಹಣದ ಓಡಾಟ ಕಡಿಮೆಯಾಗಿದೆ.

ಈ ಮೊದಲು, ಅಂದರೆ ರೆಡ್ಡಿಯ ರೇಡಿಗೂ ಮುನ್ನ, ಆತನ ಫ್ಯಾಮಿಲಿಯ ಖರ್ಚು ತಿಂಗಳೊಂದಕ್ಕೆ ಐವತ್ತು ಲಕ್ಷ ರೂಪಾಯಿ ಮೀರುತ್ತಿತ್ತು. ಅದೀಗ ಅನಾಮತ್ತು ಐದು ಲಕ್ಷಕ್ಕೆ ಇಳಿದಿದೆ. ಆಗೆಲ್ಲಾ ಕುಟೀರದ ಮುಂದೆ ನೂರಾರು ಕಾರುಗಳು ಪಾಳಿ ಹಚ್ಚಿ ನಿಂತಿರುತ್ತಿದ್ದವು. ಅವುಗಳಲ್ಲಿ ಬಹುಪಾಲು ಖುದ್ದು ರೆಡ್ಡಿಯದೇ ಆಗಿದ್ದರೆ ಉಳಿದವು ಆತನನ್ನು ಕಾಣಲು ಬರುತ್ತಿದ್ದ ವಿಐಪಿ ಮಹಾಶಯರುಗಳದ್ದಾಗಿರುತ್ತಿದ್ದವು. ಆದರೆ ರೆಡ್ಡಿ ಕಾರುಗಳು ಸೀಜಾಗಿ, ಕಾಣಲು ಬರುತ್ತಿದ್ದವರೇ ಕಾಣದಂತಾ ಗಿರುವ ಈ ಹೊತ್ತಿನಲ್ಲಿ ಕುಟೀರದ ಮುಂದೆ ಮೂರು ಇಲ್ಲವೇ ನಾಲ್ಕು ಕಾರುಗಳು ಕಾಣುವುದೂ ದುಸ್ತರವಾಗಿದೆ. ಮನೆಯಲ್ಲೀಗ ರೆಡ್ಡಿಯ ಹೆಂಡತಿ ಅರುಣಾಲಕ್ಷ್ಮಿ, ಮಗ ಕೀರುತಿ ರೆಡ್ಡಿಯನ್ನು ಬಿಟ್ಟರೆ ರೆಡ್ಡಿಯ ಮಾವ ಮಾತ್ರ ಇರುವುದು. ಅದೂ ಗಾಲಿ ಜೈಲು ಸೇರಿದ ನಂತರ ಮಗಳ ಸಹಾಯಕ್ಕೆಂದು ಮಾವ ಮನೆ ಸೇರಿಕೊಂಡಿದ್ದಾರೆ. ರೆಡ್ಡಿಯ ಮಗಳು ಬ್ರಹ್ಮಿಣಿಯನ್ನು ಬೆಂಗಳೂರಿಗೆ ಕಳುಹಿಸಿರುವುದರಿಂದ ಕೆಲ ಕೆಲಸದವರನ್ನು ಬಿಟ್ಟರೆ ಮನೆ ಖಾಲಿ ಖಾಲಿ...

13...


ರೆಡ್ಡಿ ಮೊದಲಿದ್ದ ಕ್ವಾಟ್ರರ್ಸ್


ರೆಡ್ಡಿಯ ಈಗಿನ ಐಷಾರಾಮಿ ಬಂಗ್ಲೆ...

ಚಂದಮಾಮನ ಕಥೆಗಳೇ ಸ್ಫೂರ್ತಿಯಂತೆ

ಕರ್ನಾಟಕದ ಕಿಂಗ್ ಮೇಕರ್‌ನಂತೆ ಹಾರಾಡಿದ ಜನಾರ್ದನ ರೆಡ್ಡಿ ಈಗ ಚಂಚಲಗುಡ ಜೈಲಿನಲ್ಲಿ ಐದು ರೂಪಾಯಿ ಕೊಟ್ಟು ಬಕೆಟ್ ಬಿಸಿ ನೀರು ಕೊಂಡು ಮುರುಮಾಡಿ ಮಜ್ಜನ ಮಾಡಬೇಕಾದ ಸ್ಥಿತಿ ತಲುಪಿದ್ದು ಚಂದಮಾಮನ ಕಥೆಯಂತಿದೆ.

ಅಸಲಿಗೆ ರೆಡ್ಡಿಯ ಈ ಪರಿ ಮಹಾತ್ವಾಕಾಂಕ್ಷೆ ಹಾಗೂ ಐಷಾರಾಮಿ ಬದುಕಿಗೆ ಸ್ಫೂರ್ತಿಯಾಗಿದ್ದೂ, ಹಂಬಲವನ್ನು ಅಂಟಿಸಿದ್ದೂ ಇದೇ ಚಂದಮಾಮನ ಕಥೆಗಳಂತೆ. ಬಳ್ಳಾರಿಯ ಸತ್ಯನಾರಾಯಣ ಪೇಟೆಯಲ್ಲಿರುವ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಒಬ್ಬ ಪೇದೆಯ ಮಗನಾಗಿ ಹುಟ್ಟಿದ ರೆಡ್ಡಿಗೆ ಚಂದಮಾಮ ಕಥೆಗಳಂತೆ ಐಷಾರಾಮಿ ಅರಮನೆಯಲ್ಲಿ ರಾಜನಂತೆ, ದಿಢೀರ್ ಸಾಹುಕಾರನಂತೆ ಬದುಕಬೇಕೆಂಬ ಬಯಕೆಗಳಿದ್ದವು.

ಅದಕ್ಕೆಂದು ಆತ ಹಪಹಪಿಸುತ್ತಿದ್ದ. 1995ರಲ್ಲಿ ಎನ್ನೋಬಲ್ ಇಂಡಿಯಾ ಸೇವಿಂಗ್ಸ್ ಅನ್ನೋ ಚಿಟ್‌ಫಂಡ್ ಸ್ಥಾಪಿಸಿದ್ದನಾದರೂ ಮೂರೇ ವರ್ಷಕ್ಕೆ ಅದು ಮಕಾಡೆ ಮಲಗಿತ್ತು. ಅದಾದ ಮೇಲೆ ಮಾಧ್ಯಮ ಹಾಗೂ ಹೋಟೆಲ್ ವ್ಯವಹಾರದಲ್ಲೂ ಆತ ಕೈ ಆಡಿಸಿದ. ಆದರೆ ಆತನ ನಸೀಬು ಸರಿ ಇರಲಿಲ್ಲವಾದ್ದರಿಂದ ಅದರಲ್ಲೂ ಕೈ ಸುಟ್ಟುಕೊಂಡ.

1999ರಲ್ಲಿ ಸೋನಿಯಾ ಗಾಂಧಿ ಹಾಗೂ ಸುಷ್ಮಾ ಸ್ವರಾಜ್ ಬಳ್ಳಾರಿಯಿಂದ ಲೋಕಸಭೆಗೆ ಸ್ಪರ್ಧಿಸಿದ್ದೇ ರೆಡ್ಡಿ ಬದುಕಿನಲ್ಲಿ ಒಂದು ದೊಡ್ಡ ಟರ್ನಿಂಗ್ ಪಾಯಿಂಟ್ ಆಯಿತು. ಸುಷ್ಮಾಳ ಸೆರಗು ಹಿಡಿದು ರಾಜಕೀಯದಲ್ಲಿ ಕುದುರಿಕೊಳ್ಳುತ್ತಲೇ ಗಣಿಗಾರಿಕೆಗೂ ಕಾಲಿರಿಸಿದ ರೆಡ್ಡಿ ಐದೇ ವರ್ಷಗಳಲ್ಲಿ ಅದೆಷ್ಟು ದೋಚಿದನೆಂದರೆ ಇಡೀ ರಾಜ್ಯ ಸರ್ಕಾರವನ್ನೇ ತಮ್ಮ ಕಪ್ಪು ಹಣದಿಂದ ಅಲ್ಲಾಡಿಸುವಂತಾದ.

ಕರ್ನಾಟಕ-ಆಂಧ್ರದ ಗಡಿಯನ್ನೇ ತಿರುಚಿ ಅಕ್ರಮ ಗಣಿಗಾರಿಕೆಯನ್ನು ನಡೆಸಿದ ರೆಡ್ಡಿ ಮೂಲಕ ಮೂವತ್ತು ವರ್ಷಗಳವರೆಗೆ ಬರಬಹುದಾಗಿದ್ದ ಬಳ್ಳಾರಿ ಗಣಿ ಸಂಪತ್ತನ್ನು ಒಂದೇ ದಶಕದಲ್ಲಿ ಖಾಲಿ ಮಾಡಿದ. ಆ ಮೂಲಕ ತನ್ನ ಚಂದಮಾಮ ಕನಸನ್ನು ನನಸಾಗಿಸಿಕೊಂಡ.

ಈಗ ಮಾಡಿದ ಪಾಪಕ್ಕೆ ಪ್ರತಿಫಲ ಎಂಬಂತೆ ರೆಡ್ಡಿ ಚಂಚಲಗುಡ ಜೈಲಿನಲ್ಲಿ ಲಟಿಕೆ ಮುರಿಯುತ್ತಿದ್ದಾನೆ. ರೆಡ್ಡಿ ಮೇಲೇರಿದ ವೇಗದಲ್ಲೇ ಪಾತಾಳ ಸೇರುತ್ತಿರುವುದೂ ಚಂದಮಾಮನ ಕಥೆಯ ಮುಂದುವರೆದ ಭಾಗದಂತಿದೆ ಅಲ್ಲವೆ?

ಪಾರ್ವತಮ್ಮನವರಿಗೆ ಗಂಭೀರ ಕಾಯಿಲೆ



ಡಾ.ರಾಜ್‌ಕುಮಾರ್ ಅವರ ಪತ್ನಿ ಆಗಿದ್ದು ಮಾತ್ರವಲ್ಲದೇ ಅಣ್ಣನವರ ಸಕಲ ಯಶಸ್ಸುಗಳ ಹಿಂದಿನ ಶಕ್ತಿಯಾಗಿದ್ದ ಅಮ್ಮ ಪಾರ್ವತಮ್ಮನವರ ಅರೋಗ್ಯ ಕ್ಷೀಣಿಸಿದೆ. ದಿನದ ಇಪ್ಪತ್ತನಾಲ್ಕು ಗಂಟೆಯೂ ಬಿಡುವಿಲ್ಲದ ಕೆಲಸಗಳಲ್ಲಿ, ಸಂಸಾರದ ಹೊಣೆಯನ್ನು ಹೆಗಲಿಗೇರಿಸಿಕೊಂಡು ಓಡಾಡಿಕೊಂಡಿದ್ದ ಪಾರ್ವತಮ್ಮ ಇತ್ತೀಚೆಗೆ ಎಲ್ಲೂ ಹೊರಗೆ ಕಾಣಿಸಿಕೊಳ್ಳುತ್ತಿಲ್ಲ. ಪಾರ್ವತಮ್ಮನವರನ್ನು ಕಳೆದೊಂದು ವರ್ಷದಿಂದ ಕಾಡುತ್ತಿರುವುದು ಮಾಮೂಲಿ ಮೈ ಕೈ ನೋವುಗಳು, ವೃದ್ಧಾಪ್ಯದ ನಿಶ್ಯಕ್ತಿಗಳಷ್ಟೇ ಅಲ್ಲ. ಗಂಭೀರ ಕಾಯಿಲೆಗೆ ಗುರಿಯಾಗಿದ್ದ ಅಮ್ಮ ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದಾರೆ....

• ಅರುಣ್ ಕುಮಾರ್.ಜಿ

ದೊಡ್ಡಗಾಜನೂರೆಂಬ ಕುಗ್ರಾಮದ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ಮಗನಾದ ಮುತ್ತುರಾಜ್ ಯಾವುದೇ ಗಾಡ್‌ಫಾದರ್‌ಗಳಿಲ್ಲದೆ ಕನ್ನಡ ಚಿತ್ರರಂಗದಲ್ಲಿ ಬೆಳೆದದ್ದು, ಚಿತ್ರರಂಗವನ್ನೂ ಬೆಳೆಸಿದ್ದು, ಕನ್ನಡ ಸಾಂಸ್ಕೃತಿಕ ಲೋಕದ ಸಂಕೇತವಾಗಿದ್ದು ಸಿನಿಮಾ ಕತೆಯಷ್ಟೇ ರೋಚಕವಾದದ್ದು. ಅದೇ ರೀತಿ ಅವರ ಗೆಲುವಿನ ಒಂದೊಂದು ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿದ ಮಹಿಳೆಯ ಕತೆಯೂ ಅಷ್ಟೇ ರೋಚಕ ವಾದದ್ದು.

ಅವರೇ ಪಾರ್ವತಮ್ಮ ರಾಜ್‌ಕುಮಾರ್.

ಯಾವುದೋ ಕಗ್ಗಾಡಿನಲ್ಲಿ ಹುಟ್ಟಿ ಬೆಳೆದು, ಸಾಮಾನ್ಯ ರಂಗಭೂಮಿ ನಟನೊಬ್ಬನನ್ನು ಮದುವೆಯಾಗಿ, ನಂತರ ತನ್ನ



ಪತಿ ಅಸಾಮಾನ್ಯನಾಗಿ ಬೆಳೆಯುವಲ್ಲಿ ನೆರವಾಗಿದ್ದು, ತಮ್ಮ ಮಕ್ಕಳು ಎಲ್ಲೂ ಹೆಸರು ಕೆಡಿಸಿಕೊಳ್ಳದಂತೆ ಕಣ್ಣಲ್ಲಿ ಕಣ್ಣಿಟ್ಟು ಅವರನ್ನು ಪೊರೆದದ್ದು, ತನ್ನದೇ ಸ್ವಂತ ನಿರ್ಮಾಣ ಸಂಸ್ಥೆ ಸ್ಥಾಪಿಸಿದ್ದು, ಆನಂತರ ಅನೇಕ ಉದ್ಯಮಗಳನ್ನು ಪ್ರಾರಂಭಿಸಿ ಸಾವಿರಾರು ಜನರಿಗೆ ಅನ್ನದ ದಾರಿ ತೋರಿಸಿದ್ದು, ಅವರೆಲ್ಲರ ಪ್ರೀತಿಯ ಅಮ್ಮನಾಗಿದ್ದ ತಾಯಿಯೇ ಇವತ್ತು ಕಳಾಹೀನರಾಗಿ ಮಲಗಿಬಿಟ್ಟಿದ್ದಾರೆ.

ಹೌದು...

ಡಾ.ರಾಜ್‌ಕುಮಾರ್ ಅವರ ಪತ್ನಿ ಆಗಿದ್ದು ಮಾತ್ರವಲ್ಲದೇ ಅಣ್ಣನವರ ಸಕಲ ಯಶಸ್ಸುಗಳ ಹಿಂದಿನ ಶಕ್ತಿಯಾಗಿದ್ದ ಅಮ್ಮ ಪಾರ್ವತಮ್ಮನವರ ಅರೋಗ್ಯ ಕ್ಷೀಣಿಸಿದೆ. ದಿನದ ಇಪ್ಪತ್ತನಾಲ್ಕು ಗಂಟೆಯೂ ಬಿಡುವಿಲ್ಲದ ಕೆಲಸಗಳಲ್ಲಿ, ಸಂಸಾರದ ಹೊಣೆಯನ್ನು ಹೆಗಲಿಗೇರಿಸಿಕೊಂಡು ಓಡಾಡಿಕೊಂಡಿದ್ದ ಪಾರ್ವತಮ್ಮ ಇತ್ತೀಚೆಗೆ ಎಲ್ಲೂ ಹೊರಗೆ ಕಾಣಿಸಿಕೊಳ್ಳುತ್ತಿಲ್ಲ. ಕಳೆದ ವರ್ಷ ಹಿರಿಯ ಪುತ್ರ ಶಿವರಾಜ್‌ಕುಮಾರ್ ಅವರ ನೂರನೇ ಚಿತ್ರ 'ಜೋಗಯ್ಯ' ಚಿತ್ರದ ಮುಹೂರ್ತ ಸಮಾರಂಭಕ್ಕೆ ಬಂದಿದ್ದೇ ಕೊನೆ, ಆನಂತರ ಪಾರ್ವತಮ್ಮನವರು ಯಾವ ಸಾರ್ವಜನಿಕ ಸಮಾರಂಭಗಳಲ್ಲೂ ಕಾಣಿಸಿಕೊಂಡಿಲ್ಲ.

ಈಗ ಪಾರ್ವತಮ್ಮನವರಿಗೆ ಸುಮಾರು 70 ವರ್ಷ ವಯಸ್ಸು. ಅವರಿಗೆ ಬಹಳ ವರ್ಷಗಳಿಂದಲೂ ಡಯಾಬಿಟೀಸು. ಜೊತೆಗೆ ಇತ್ತೀಚೆಗೆ ಕಾಲುನೋವೂ ಹೆಚ್ಚಾಗಿದೆ. ಆದ್ದರಿಂದಲೇ ಅಮ್ಮ ಈಗೀಗ ಎಲ್ಲೂ ಬರುತ್ತಿಲ್ಲ ಎಂದೇ ಚಿತ್ರರಂಗದವರ ಅಭಿಪ್ರಾಯವಾಗಿತ್ತು. ಆದರೆ ವಿಚಾರ ಇಷ್ಟು ಸಿಂಪಲ್ ಆಗಿಲ್ಲ. ಸಣ್ಣಪುಟ್ಟ ನೋವುಗಳಿಗೆ, ಆಲಸ್ಯಕ್ಕೆಲ್ಲಾ ಪಾರ್ವತಮ್ಮನವರು ಹೆದರಿ ಕೂರುವ ಜಾಯಮಾನದವರಲ್ಲ ಎಂಬುದೂ ಅವರ ಛಲ ಮತ್ತು ಅಸಾಧಾರಣ ಧೈರ್ಯವನ್ನು ಬಲ್ಲವರ ಅಭಿಪ್ರಾಯವಾಗಿತ್ತು.

ಅದು ನಿಜ ಕೂಡ. ಪಾರ್ವತಮ್ಮನವರನ್ನು ಕಳೆದೊಂದು ವರ್ಷದಿಂದ ಕಾಡುತ್ತಿರುವುದು ಮಾಮೂಲಿ ಮೈ ಕೈ ನೋವುಗಳು, ವೃದ್ಧಾಪ್ಯದ ನಿಶ್ಯಕ್ತಿಗಳಷ್ಟೇ ಅಲ್ಲ.

ಈ ವರ್ಷದ ಆರಂಭದಲ್ಲಿ ಅವರನ್ನು ಅಪಾರ ಎದೆ ನೋವು ಕಾಡಲಾರಂಭಿಸಿತು. ಅವರನ್ನು ವೈದ್ಯರು ಸಂಪೂರ್ಣ ತಪಾಸಣೆಗೆ ಒಳಪಡಿಸಿದ ನಂತರವಷ್ಟೇ ಗೊತ್ತಾಗಿದ್ದು:

ಅದು ಕ್ಯಾನ್ಸರ್...

ಮಹಾಮಾರಿ ಕ್ಯಾನ್ಸರ್ ಪಾರ್ವತಮ್ಮನವರನ್ನು ಇನ್ನಿಲ್ಲದಂತೆ ಹಿಂಡಿ ಹಿಪ್ಪೆಮಾಡಿಬಿಟ್ಟಿದೆ.

ಆದರೆ ಪಾರ್ವತಮ್ಮನವರು ಕ್ಯಾನ್ಸರ್‌ಗೂ ಹೆದರದ ಗಟ್ಟಿ ಮನೋಸ್ಥೈರ್ಯ ಹೊಂದಿರುವ ಮಹಿಳೆ. ಆ ಕಾರಣಕ್ಕೋ ಏನೋ ಪಾರ್ವತಮ್ಮನವರು ಕ್ಯಾನ್ಸರ್ ನಿಂದಾಗಿ ಭಯಾನಕ ಯಾತನೆಗಳನ್ನೇ ಅನುಭವಿಸಿದ್ದರೂ ಈಗ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಕ್ಯಾನ್ಸರ್‌ಅನ್ನು ಆರಂಭಿಕ ಹಂತದಲ್ಲೇ ಪತ್ತೆ ಮಾಡಿದ್ದರಿಂದ ಮತ್ತು ಆಗಲೇ ಆಪರೇಷನ್ ಮಾಡಿಸಿಕೊಂಡಿದ್ದರಿಂದ ಅವರ ದೇಹದೊಳಗಿದ್ದ ಕ್ಯಾನ್ಸರ್ ಗೆಡ್ಡೆಗಳನ್ನು ವೈದ್ಯರು ತೆಗೆದುಹಾಕಿದರು.

ಅದಾದ ನಂತರ ಪ್ರತೀವಾರ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಪಾರ್ವತಮ್ಮನವರಿಗೆ ಕೀಮೋಥೆರಪಿ ಕೊಡಿಸಲಾಗುತ್ತಿದೆ. ಡಾ. ರಾಜ್‌ಕುಮಾರರ ಕುಟುಂಬ ವೈದ್ಯ ಡಾ. ರಮಣರಾವ್ ಮಾತ್ರವಲ್ಲದೆ ಡಾ. ಸುನೀಲ್ ಎಂಬುವವರೂ ಪಾರ್ವತಮ್ಮನವರ ಯೋಗಕ್ಷೇಮದ ಬಗ್ಗೆ ಪ್ರತೀಕ್ಷಣ ಕಾಳಜಿ ವಹಿಸಿದ್ದಾರೆ. ಅಷ್ಟೇ ಅಲ್ಲದೆ, ಅಮೆರಿಕದಿಂದ ತರಿಸಿಕೊಂಡಿದ್ದ ವಿಶೇಷವಾದ ಇಂಜೆಕ್ಷನ್ ಅನ್ನು ಸತತ ಮೂರು ತಿಂಗಳ ಕಾಲ ಪಾರ್ವತಮ್ಮನವರಿಗೆ ವೈದ್ಯರು ನೀಡಿದ್ದಾರೆ. ಆ ಇಂಜೆಕ್ಷನ್ ಅದೆಷ್ಟು ದುಬಾರಿಯೆಂದರೆ ಇದಕ್ಕೆಂದು ಪ್ರತಿ ದಿನ ಒಂದೂವರೆ ಲಕ್ಷ ರೂಪಾಯಿ ವೆಚ್ಚವಾಗುತ್ತಿತ್ತಂತೆ.



ದೇಹದ ಮೇಲೆ ದೊಡ್ಡರೀತಿಯಲ್ಲಿ ದಾಳಿಯನ್ನೇ ಮಾಡುವ ಕೀಮೋಥೆರಪಿ ತರಹದ ಟ್ರೀಟ್‌ಮೆಂಟಗೆ ಒಳಪಟ್ಟವರಿಗೆ ಸಾಮಾನ್ಯವಾಗಿ ಕೂದಲುಗಳು ಉದುರುತ್ತವೆ. ಹೊಟ್ಟೆಹಸಿವು ನಶಿಸಿಹೋಗುತ್ತದೆ. ನೀರು ಕುಡಿದರೂ ಹೊಟ್ಟೆ ತೊಳಸಿ ವಾಂತಿ ಆಗುತ್ತದೆ. ಪಾರ್ವತಮ್ಮನವರ ದೇಹದ ಮೇಲೂ ಇಂತಹ ಪರಿಣಾಮಗಳಾಗಿವೆ. ಕೀಮೋಥೆರಪಿಯಿಂದಾಗಿ ಪಾರ್ವತಮ್ಮನವರ ದಟ್ಟ ಕೂದಲು ಉದುರಿವೆ; ಕಣ್ಣುಗಳು ನಿಸ್ತೇಜಗೊಂಡಿವೆ. ಆದರೂ ಪಾರ್ವತಮ್ಮನವರು ಸದ್ಯಕ್ಕಂತೂ ಡೇಂಜರ್ ಜೋನ್‌ನಿಂದ ಹೊರ ಬಂದಿದ್ದಾರೆ ಎಂಬುದೇ ನೆಮ್ಮದಿಯ ಸಂಗತಿ.

ಈ ಹಿಂದೆ ಲವಲವಿಕೆಯಿಂದ ಓಡಾಡುತ್ತಾ ಸಿನಿಮಾಗಳನ್ನು ನಿರ್ಮಿಸುತ್ತಿದ್ದ, ಕೋಟ್ಯಂತರ ರೂಪಾಯಿಗಳ ವ್ಯವಹಾರದ ಮೇಲೆ ನಿಗಾ ಇಟ್ಟಿರುತ್ತಿದ್ದ, ಮನೆ ಮತ್ತು ಮಕ್ಕಳ ಉಪಚಾರವನ್ನು ನಿಭಾಯಿಸುತ್ತಿದ್ದ, ಚಿತ್ರರಂಗದ ಸಭೆ-ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದ ಪಾರ್ವತಮ್ಮನವರನ್ನು ಕ್ಯಾನ್ಸರ್ ಜರ್ಝರಿತರನ್ನಾಗಿಸಿದೆ. ಅವರೀಗ ಪ್ರತೀ ಕ್ಷಣ ತಮ್ಮ ಸುತ್ತ ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಇರಲೇಬೇಕು ಎಂದು ಬಯಸುತ್ತಿದ್ದಾರೆ. ರಜೆ ದಿನಗಳಲ್ಲಂತೂ ತಮ್ಮ ಇಡೀ ಸಂಸಾರ ಎಲ್ಲಿಗೂ ಹೋಗದೆ ತಮ್ಮೊಂದಿಗೆ ಇರಬೇಕೆಂದು ಅಮ್ಮ ಅಪೇಕ್ಷಿಸುತ್ತಾರೆ.


ಅದಕ್ಕೆ ಅವರ ಮಕ್ಕಳು ಮತ್ತು ಮೊಮ್ಮಕ್ಕಳೂ ಸ್ಪಂಧಿಸುತ್ತಿದ್ದಾರೆ. ಪ್ರತೀ ವಾರ ಪಾರ್ವತಮ್ಮನವರು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಥೆರಪಿಗೆ ಹೋದಾಗ ಅವರ ದ್ವಿತೀಯ ಪುತ್ರ ರಾಘವೇಂದ್ರ ರಾಜ್‌ಕುಮಾರ್ ತಪ್ಪದೆ ತಮ್ಮ ತಾಯಿಯೊಟ್ಟಿಗೆ ಹೋಗುತ್ತಾರೆ. ಸದ್ಯ ಚಿತ್ರರಂಗದಲ್ಲಿ ಬ್ಯುಸಿ ನಟರಾಗಿರುವ ಪುನೀತ್ ಮತ್ತು ಶಿವಣ್ಣ ಕೂಡಾ ಬಿಡುವಾದಾಗಲೆಲ್ಲಾ ಅಮ್ಮನೊಂದಿಗೆ ಕಾಲ ಕಳೆಯುತ್ತಿದ್ದಾರೆ.

ಇಷ್ಟು ವರ್ಷಗಳ ಕಾಲ ಮನೆಯ ಯಜಮಾನಿ ಯಾಗಿ ಪತಿ, ಮಕ್ಕಳು, ಮೊಮ್ಮಕ್ಕಳು ಇದ್ದ ದೊಡ್ಡ ಕುಟುಂಬ ವನ್ನು ಪ್ರೀತಿಯಿಂದ ಪೊರೆಯುತ್ತಾ ಬಂದ ಅಮ್ಮನನ್ನು ಈಗ ಅವರ ಕುಟುಂಬದ ಸದಸ್ಯರೆಲ್ಲಾ ಪುಟ್ಟ ಮಗುವನ್ನು ಅಕ್ಕರೆಯಿಂದ ನೋಡಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದಾರೆ.

ಹೋದ ವರ್ಷದ ತನಕ ಯಾವುದೇ ಸಿನಿಮಾಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಎಲ್ಲರೂ ಸದಾಶಿವನಗರದಲ್ಲಿರುವ ರಾಜ್ ಮನೆಗೆ ಹಾಜರಾಗಿ ಅಮ್ಮನವರ ಕೈಗೆ ಆಮಂತ್ರಣ ಪತ್ರಿಕೆಯ ಪ್ರತಿಯನ್ನು ಇಡುತ್ತಿದ್ದರು. ಅಮ್ಮ ಕೂಡ ಎಲ್ಲರಿಗೆ ಶುಭ ಹಾರೈಸಿ ಕಳುಹಿಸುತ್ತಿದ್ದರು. ಆದರೆ ಇತ್ತೀಚೆಗೆ ಯಾರೇ ರಾಜ್ ಮನೆಗೆ ಹೋದರೂ ಅವರ ಮನೆಯವರು "ಅಮ್ಮ ಈಗ ಮಲಗಿದ್ದಾರೆ. ಅವರು ಎದ್ದ ಮೇಲೆ ಅವರಿಗೆ ಈ ಆಹ್ವಾನ ಪತ್ರವನ್ನು ಕೊಡ್ತೀವಿ" ಎಂದಷ್ಟೇ ಹೇಳಿ ಕಳುಹಿಸುವುದು ಮಾಮೂಲಿಯಾಗಿದೆ. ಇದು ಪಾರ್ವತಮ್ಮನವರ ಸೂಕ್ಷ್ಮ ಆರೋಗ್ಯವನ್ನು ರಕ್ಷಿಸುವುದಕ್ಕೆ ಅಗತ್ಯವೂ ಆಗಿದೆ.

ಡಾ.ರಾಜ್ ಮತ್ತು ಮಾಧವಿ ಜೊತೆಯಾಗಿ ನಟಿಸಿದ್ದ 'ಹಾಲು ಜೇನು' ಚಿತ್ರದಲ್ಲಿ ನಾಯಕಿ ಮಾಧವಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಾರೆ. ಅಂಥ ಸಂದರ್ಭದಲ್ಲಿ ನಾಯಕ ರಾಜ್ ಆಕೆಯ ಹೆಗಲಿಗೆ ಹೆಗಲು ಕೊಟ್ಟು, ಆಕೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿಂಚಿತ್ತೂ ಬಾಧೆಪಡದಂತೆ ಆಕೆಯ ಶುಶ್ರೂಷೆ ಮಾಡುತ್ತಾರೆ.

ಆದರೀಗ ನಿಜ ಬದುಕಿನಲ್ಲಿ ರಾಜ್‌ಗೆ ಆಸರೆಯಾಗಿ ಬಂ[...] ಕಲ್ಲಿನಂತೆ ನಿಂತ ಪಾರ್ವತಮ್ಮನವರು ಅಂಥದ್ದೇ ಕಾಯಿ[...]ಯಿಂದ ಹಾಸಿಗೆ ಹಿಡಿದಿದ್ದಾರೆ. ಆದರೆ ಅವರನ್ನು ಸಮ[...]ಧಾನಿಸಿ, ಅವರಿಗೆ ನೆರವಾಗಲು ಇವತ್ತು ಅವರ ಬ[...] ರಾಜ್‌ಕುಮಾರ್ ಅವರು ಇಲ್ಲ ಎಂಬುದು ಎಂಥವರ ಕಣ್ಣಲ್ಲೂ ನೀರು ತರಿಸುತ್ತದೆ.



ಪರ್ವತದಂಥ ರಾಜ್ ಮತ್ತು ಪಾರ್ವತಿಯ ಶಕ್ತಿ

ಪಾರ್ವತಮ್ಮನವರು ವಿಶಿಷ್ಟ ಗುಣಗಳನ್ನು, ಅಸಾ[...] ಧೈರ್ಯವನ್ನು, ಅಪಾರ ಶಕ್ತಿಗಳನ್ನು ಹೊಂದಿರುವ ತಾಯಿ[...]

ಅವರು ಕನ್ನಡ ಚಿತ್ರರಂಗ ಕಂಡಿರುವ ಅತಿ ಯಶಸ್ವಿ ಚ[...] ನಿರ್ಮಾಪಕಿ ಮಾತ್ರವಲ್ಲ, ಬುದ್ಧಿವಂತ ವಿತರಕಿ ಕೂ[...] ಎಂಬುದು ಎಲ್ಲರಿಗೂ ಗೊತ್ತು. ಅವರೇ ವಿಶೇಷ ಮು[...] ವರ್ಜಿ ವಹಿಸಿ ರಾಜ್‌ಕುಮಾರ್ ಅವರಿಗೆ ಹೊಂದುವಂತ[...] ಕಥೆಗಳನ್ನು ಆಯ್ಕೆ ಮಾಡಿ ಅನೇಕ ಸಿನಿಮಾಗಳ[...] ಮಾಡಿದ್ದಾರೆ. 'ಮಯೂರ', 'ಹೊಸಬೆಳಕು', 'ಎರಡು ಕನಸು[...]' 'ಸಮಯದ ಗೊಂಬೆ', 'ಜೀವನಚೈತ್ರ'ದಂಥ ಯಶ[...] ಚಿತ್ರಗಳಿಗೆ ಕತೆಗಳನ್ನು ಆರಿಸಿದ್ದು ಬೇರೆ ಯಾರೂ ಅಲ್ಲ, ಅವ[...] ಪಾರ್ವತಮ್ಮನವರ ಆಯ್ಕೆಗಳೇ. ತಮ್ಮ ಸಂಸ್ಥೆ ಸ್ಥಾಪಿಸಿದ ನಾ[...] ಬ್ಯಾನರ್‌ಗಳಡಿ ಒಟ್ಟು 75 ಸಿನಿಮಾಗಳನ್ನು ಕನ್ನಡ ಚಿತ್ರರಂ[...] ಕೊಟ್ಟಿರುವ ಪಾರ್ವತಮ್ಮ ಹಲವಾರು ಸೂಪರ್ ಹಿ[...] ಚಿತ್ರಗಳನ್ನು ನೀಡಿದ್ದಾರೆ.

ಗ್ರಾಮೀಣ ಹಿನ್ನೆಲೆಯನ್ನು ಹೊಂದಿರುವ, ಅಷ್ಟೇ[...] ವಿದ್ಯಾಭ್ಯಾಸವನ್ನು ಹೊಂದಿರದ ಪಾರ್ವತಮ್ಮನವರು ಒಂದ[...] ಇಷ್ಟೊಂದು ಸಂಖ್ಯೆಯ ಸಿನಿಮಾಗಳನ್ನು ನಿರ್ಮಿಸುತ್ತ[...] ಇನ್ನೊಂದೆಡೆ ಕುಟುಂಬದ ಹಿತ ಕಾಪಾಡಿಕೊಂಡು ತ[...] ಮಕ್ಕಳಿಗೆ ಬದುಕುವ ದಾರಿ ತೋರಿಸಿ, ಅವರಿಗೆಲ್ಲ ನೆಲೆ ಕ[...] ಮಗದೊಂದೆಡೆ ನೂರಾರು ಜನರಿಗೆ ಸಂಬಳ ಕೊಡುವಂತ[...]

ಹತ್ತನೆ ಕ್ಲಾಸ್ ಪಾರು ಯಶಸ್ವೀ ಪಾರ್ವತಮ್ಮನವರಾಗಿದ್ದು

ಪಾರ್ವತಮ್ಮನವರು ಚಿತ್ರ ನಿರ್ಮಾಣ ಹಾಗೂ ವಿತರಣೆಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳಲಿಲ್ಲ. ಈಗಲೂ ಗಾಂಧಿನಗರದ ವಜ್ರೇಶ್ವರಿ ಸಂಸ್ಥೆ ಕಟ್ಟಡದ ಮೇಲಂತಸ್ತಿನಲ್ಲಿ ಪೂರ್ಣಿಮಾ ಲ್ಯಾಬ್ ಇದೆ. ಮೂರು ಔಟ್ ಡೋರ್ ಯೂನಿಟ್‌ಗಳಿವೆ. ಅತ್ಯಂತ ದುಬಾರಿಯ ಕ್ಯಾಮೆರಾಗಳಿವೆ. ರಾಜ್ ಕುಟುಂಬದ ಓನರ್‌ಶಿಪ್‌ನಲ್ಲಿ ಗಾಂಧಿನಗರದಲ್ಲಿ ಡಾ|| ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಹೋಟೆಲ್ ಇದೆ. ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್‌ನಲ್ಲಿರುವ ಕ್ಯಾಂಟೀನ್‌ನಲ್ಲಿ ಪಾರ್ಟನರ್‌ಶಿಪ್, ಬನಶಂಕರಿಯಲ್ಲಿರುವ ಕಲ್ಯಾಣ ಮಂಟಪದ ಒಡೆತನ...




ಹೀಗೆ ರಾಜ್ ಕುಟುಂಬಕ್ಕೆ ಆರ್ಥಿಕ ಬಲ ಮತ್ತು ನೆಮ್ಮದಿ ಬಂದಿದ್ದೇ ಪಾರ್ವತಮ್ಮನವರ ವ್ಯಾವಹಾರಿಕ ಜಾಣ್ಮೆಯಿಂದ. ಇಷ್ಟೆಲ್ಲಾ ಸಾಧನೆಗಳ ನಡುವೆಯೂ ವಜ್ರೇಶ್ವರಿ ಸಂಸ್ಥೆ ಯಾವತ್ತೂ ಕೀಳು ಅಭಿರುಚಿಯ ಸಿನಿಮಾ ತಯಾರಿಸಲಿಲ್ಲ. ವಜ್ರೇಶ್ವರಿಯ ಸಿನಿಮಾಗಳನ್ನು ಜನ ಬೆರಗು, ಸಂತೋಷದಿಂದ ನೋಡಿ ಖುಷಿಪಟ್ಟಿದ್ದಾರೆ. ಬೆಂಬಲಿಸಿದ್ದಾರೆ. ಸಂಸ್ಥೆ ಕೂಡಾ ಹಲವಾರು ಹೊಸ ನಟ-ನಟಿಯರನ್ನು, ನಿರ್ದೇಶಕರನ್ನು ಬೆಳೆಸಿ ಉದ್ಯಮಕ್ಕೆ ಕೊಡುಗೆಯಾಗಿ ನೀಡಿದೆ. ಕನ್ನಡ ಚಿತ್ರರಂಗಕ್ಕೆ ಸುಧಾರಾಣಿ, ಮಾಲಾಶ್ರೀ, ಶಿಲ್ಪಾ, ಪ್ರೇಮಾ, ರಕ್ಷಿತಾ, ರಮ್ಯರಂಥ ಅನೇಕ ನಾಯಕಿಯರನ್ನು ಪರಿಚಯಿಸಿದ ಕೀರ್ತಿ ಕೂಡಾ ಪಾರ್ವತಮ್ಮನವರಿಗೇ ಸಲ್ಲುತ್ತದೆ.










ಮುತ್ತುರಾಜು ಪಾರ್ವತಿ ಮದುವೆ ಕರೆಯೋಲೆ

ವಜ್ರೇಶ್ವರಿ ಕಂಬೈನ್ಸ್ ಎಂಬ ಸಂಸ್ಥೆ ಕಟ್ಟಿದ ಪಾರ್ವತಮ್ಮನವರ ಕಾಯಕ ಶಕ್ತಿ ಅಪಾರವಾದದ್ದು.

ಕಗ್ಗಾಡಿನ ಮಧ್ಯದ ಗಾಜನೂರಿನಂತಹ ಪುಟ್ಟ ಗ್ರಾಮದಲ್ಲಿ ಬೆಳೆದ, ಹತ್ತನೇ ತರಗತಿ ತನಕ ಮಾತ್ರ ಓದಿದ್ದ ಈ ಹೆಣ್ಣುಮಗಳು ರಾಜ್‌ರಂತಹ ಮೇರು ಪ್ರತಿಭೆಯ ಪತ್ನಿಯಾಗಿದ್ದೇ ತನ್ನ ಬದುಕಿನ ಭಾಗ್ಯ ಎಂದುಕೊಂಡು ಸುಮ್ಮನೆ ಕೂರಲಿಲ್ಲ, ಸಿನಿಮಾ ಇಂಡಸ್ಟ್ರಿಯನ್ನು, ಅದರ ಹಣಕಾಸು ವ್ಯವಹಾರವನ್ನು, ರಾಜ್‌ರ ಇಮೇಜನ್ನು, ಜನರ ಅಭಿರುಚಿಯನ್ನು, ಸಿನಿಮಾ ನಿರ್ಮಾಣಕ್ಕೆ ಹಾಕಬೇಕಾದ ಬಂಡವಾಳವನ್ನು, ಅದರಿಂದ ಬರಬಹುದಾದ ಲಾಭವನ್ನು... ಹೀಗೆ ಪ್ರತಿಯೊಂದನ್ನೂ ಪಾರ್ವತಮ್ಮನವರು ಓರ್ವ ಸಾಧಾರಣ ಗೃಹಿಣಿ ಆಗಿದ್ದಾಗಲೇ ನಿಧಾನವಾಗಿ ಸ್ವಲ್ಪ ಸ್ವಲ್ಪವೇ ಅಭ್ಯಸಿಸಲಾರಂಭಿಸಿದರು.



ತಾಯಿಯೊಂದಿಗೆ

ಆಗ ಅವರಿಗೆ ಈ ಎಲ್ಲ ವಿಷಯಗಳ ಕುರಿತು ತಿಳಿಸುವವರಾಗಲಿ, ಹೇಳುವವರಾಗಲಿ, ಮಾರ್ಗದರ್ಶನ ಮಾಡುವವರಾಗಲಿ ಯಾರೂ ಇರಲಿಲ್ಲ, ಅವರೇ ಎಲ್ಲವನ್ನು ನೋಡುತ್ತ ಕಲಿಯಬೇಕಿತ್ತು. ಆದರೆ ಅವರು ಅಸಾಧಾರಣ ವಿದ್ಯಾರ್ಥಿನಿಯಾಗಿದ್ದರು. ಸ್ವತಂತ್ರವಾಗಿ ಅವರು ಎಲ್ಲವನ್ನೂ ಕಲಿತರು.

ಪಾರ್ವತಮ್ಮನವರು ಸುಮಾರು ಎಪ್ಪತ್ತೈದು ಚಿತ್ರಗಳನ್ನು ನಿರ್ಮಿಸಿ ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಯಲು ಹೇಗೆ ಸಾಧ್ಯವಾಯಿತು ಎಂದು ಹುಡುಕುತ್ತಾ ಹೋದರೆ ಕುತೂಹಲಕರವಾದ ವಿಚಾರಗಳು ಕಾಣಸಿಗುತ್ತವೆ.

ಪಾರ್ವತಮ್ಮನವರು ಹುಟ್ಟಿದ್ದೇ ಅಣ್ಣಾವ್ರಿಗಾಗಿ ಎಂಬಂತೆ ಅವರು ಹುಟ್ಟಿದ ಹನ್ನೆರಡನೇ ದಿನಕ್ಕೆ ನಾಮಕರಣ ಮಾಡುವ ಸಂದರ್ಭದಲ್ಲಿ ಡಾ.ರಾಜ್‌ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು "ಇವ್ಳು ನಮ್ಮ ಮನೆಯ ಭವಿಷ್ಯದ ಭಾಗ್ಯದೇವತೆ. ನಮ್ಮ ಮುತ್ತುರಾಜನ ಹೆಂಡತಿ" ಎಂದು ತೀರ್ಮಾನಿಸಿಬಿಟ್ಟಿದ್ದರು.



ಪಾರ್ವತಮ್ಮ ಬೆಳೆದು ಸಾಲಿಗ್ರಾಮದಲ್ಲಿ ಓದುತ್ತಿದ್ದಾಗ "ಹೋಗಿ ಪಾರ್ವತಿನ ಕರ್ಕೊಂಡು ಬಾ" ಎಂದು ಪುಟ್ಟಸ್ವಾಮಯ್ಯನವರು ಮುತ್ತುರಾಜ್‌ರನ್ನು ಕಳುಹಿಸುತ್ತಿದ್ದರಂತೆ. ಮುತ್ತು ರಾಜ್ ಸಾಲಿಗ್ರಾಮಕ್ಕೆ ಸೈಕಲ್‌ನಲ್ಲಿ ಹೋಗಿ, ಮಣ್ಣಿನಲ್ಲಿ ಆಡಿಕೊಂಡು ಗಲೀಜಾಗಿರುತ್ತಿದ್ದ ಪಾರ್ವತಿಯನ್ನು ತಮ್ಮ ಸೈಕಲ್ಲಿನಲ್ಲಿ ಕೂರಿಸಿಕೊಂಡು, ರಸ್ತೆಯಲ್ಲಿ ಸಿಗುವ ನಾಲ್ಕಾಣೆಯ ಬೆಂಡೋಲೆ, ಲೋಲಾಕು ಗಳನ್ನು ಕೊಡಿಸಿ ಕರೆತರುತ್ತಿದ್ದರು.

ಪಾರ್ವತಮ್ಮನವರು ಎಸ್ಸೆಸ್ಸೆಲ್ಸಿ ಓದುತ್ತಿದ್ದಾಗಲೇ ಅವರ ಮತ್ತು ಮುತ್ತುರಾಜ್ ನಡುವೆ ಮದುವೆಯಾಯಿತು. ಆಗ ಮುತ್ತುರಾಜ್ ಅವರು ದಾವಣಗೆರೆಯಲ್ಲಿ ಸುಬ್ಬಯ್ಯ ನಾಯ್ಡು ಕಂಪನಿಯಿಂದ ಬರುತ್ತಿದ್ದ ಸಣ್ಣ ಮೊತ್ತದ ಪಗಾರದಲ್ಲಿ ತಿಂಗಳಿಗೆ ಹತ್ತು ರೂಪಾಯಿಗಳನ್ನು ಪಾರ್ವತಿ ಅವರ ಸ್ಕೂಲ್ ಫೀಸ್‌ಗಾಗಿ ಕಳಿಸುತ್ತಿದ್ದರು. ಆಗ ಸುಬ್ಬಯ್ಯ ನಾಯ್ಡುರವರ ಕಂಪನಿ ನಾಟಕಗಳಲ್ಲಿ ಕಲಾವಿದರಾಗಿದ್ದ ಮುತ್ತುರಾಜ್‌ರನ್ನು ಮದುವೆಯಾದಾಗ ಪಾರ್ವತಮ್ಮನವರಿಗೆ ಬರೀ ಹದಿಮೂರೂವರೆ ವರ್ಷ ವಯಸ್ಸು. ಐನೂರು ರೂಪಾಯಿ ಸಾಲ ಮಾಡಿ ಮದುವೆಯಾಗಿದ್ದರು ರಾಜ್. ಮದುವೆ ಮುಗಿಸಿಕೊಂಡು ದಾವಣಗೆರೆಯಲ್ಲಿ ಬಿಡಾರ ಹೂಡಿದ್ದ ಸುಬ್ಬಯ್ಯ ನಾಯ್ಡು ಕಂಪನಿಗೆ ರಾಜ್ ವಾಪಸ್ ಹೋದಾಗ ಅವರ ಜೊತೆಗಾರರೆಲ್ಲ "ಏನಪ್ಪಾ ಮದ್ವೆ ಮಾಡ್ಕೊಂಡು ಬಂದಿದ್ದೀಯಾ... ನಮ್ಗೇನು ಊಟಗೀಟ ಹಾಕ್ಸಲ್ವಾ?" ಎಂದರಂತೆ. ಆಗ "ಊಟ ಹಾಕೋವಷ್ಟು ಯೋಗ್ಯತೆ ನನಗೆ ಇಲ್ಲದೇ ಇದ್ರೂ ಕಂಪನಿಯ ಊಟದ ಜೊತೆಗೇ ನಿಮ್ ಬಾಯಿ ಸಿಹಿ ಮಾಡಿಸೋಕೆ ಪ್ರಯತ್ನ ಮಾಡ್ತೀನಿ" ಎಂದ ಮುತ್ತುರಾಜ್ ಮದುವೆ ಖರ್ಚು ಮುಗಿದ ನಂತರ ತಮ್ಮ ಜೇಬಿನಲ್ಲಿ ಉಳಿದಿದ್ದ ನಲವತ್ತು ರೂಪಾಯಿಗಳನ್ನು ಭಟ್ಟರ ಕೈಗಿಟ್ಟು "ಹೇಗಾದರೂ ಮಾಡಿ ಈ ದುಡ್ಡಿನಲ್ಲೇ ವಿಶೇಷವಾಗಿ ಪಾಯಸವನ್ನು ಮಾಡಿ ಬಡಿಸಿ" ಎಂದು ವಿನಂತಿಸಿಕೊಂಡರು. ಭಟ್ಟರು ಅವತ್ತು ಹಾಲುಕೀರು, ಚಿತ್ರಾನ್ನ, ಕೋಸಂಬರಿ ಊಟವನ್ನು ಎಲ್ಲರಿಗೂ ಬಡಿಸಿದ್ದರು.

ಇದಾದ ನಂತರ ರಾಜ್‌ಗೆ ಗುಬ್ಬಿ ಕಂಪನಿಯಿಂದ ಬುಲಾವ್ ಬಂದದ್ದು, ಅವರು 'ಬೇಡರ ಕಣ್ಣಪ್ಪ' ಚಿತ್ರದಲ್ಲಿ ಪ್ರಮುಖ ಪಾತ್ರಕ್ಕೆ ಆಯ್ಕೆಯಾದದ್ದು, ಆ ಮೇಲೆ ಅವರು ನಿಧಾನವಾಗಿ ತಮ್ಮ ಪ್ರತಿಭೆಯಿಂದಲೇ ದೊಡ್ಡ ನಟರಾದದ್ದು ಈಗ ಇತಿಹಾಸ.

1956ರಲ್ಲಿ 'ಬೇಡರ ಕಣ್ಣಪ್ಪ' ಚಿತ್ರದಲ್ಲಿ ಪ್ರಥಮಬಾರಿಗೆ ನಾಯಕನಾಗಿ ಅವಕಾಶ ಪಡೆದಾಗ ರಾಜ್‌ಗೆ ಸಿಕ್ಕ ಅಡ್ವಾನ್ಸ್ ಬರೀ 800 ರೂಪಾಯಿ ಮಾತ್ರ. ನಿರ್ದೇಶಕ ಬಿ.ಎಸ್. ರಂಗಾ ಅವರು 1957ರಲ್ಲಿ 'ಮಹಿಷಾಸುರ ಮರ್ದಿನಿ' ಚಿತ್ರದಲ್ಲಿ ರಾಜ್‌ಗೆ ಛಾನ್ಸು ಕೊಟ್ಟಾಗ ಅವರು ಪಡೆದಿದ್ದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳ ಸಂಬಳವಷ್ಟೇ! ಅದು ಹಾಗೇ ಮುಂದುವರಿದು ಸತತ ಒಂಭತ್ತು ವರ್ಷಗಳ ಕಾಲ ರಾಜ್ ಅಷ್ಟೇ ಸಂಬಳ ಪಡೆಯುತ್ತಿದ್ದರು. ಮಾತ್ರವಲ್ಲ ರಂಗಾ ಅವರು ಕರೆದಾಗಲೆಲ್ಲ ಹೋಗಿ ಅವರ ಸಿನಿಮಾಗಳಲ್ಲಿ ನಟಿಸುತ್ತಿದ್ದರು.

ವಿಚಿತ್ರವೆಂದರೆ ರಾಜಕುಮಾರರು ನೂರನೇ ಚಿತ್ರದಲ್ಲಿ ನಟಿಸಿದಾಗಲೂ, ನಟಸಾರ್ವಭೌಮ ಎಂಬ ಬಿರುದು ಪಡೆದ ನಂತರವೂ ಅವರು ಪಡೆಯುತ್ತಿದ್ದ ಸಂಭಾವನೆ ಜಾಸ್ತಿ ಆಗಿರಲಿಲ್ಲ. 'ಮಣ್ಣಿನ ಮಗ' ಚಿತ್ರದ ನಿರ್ದೇಶಕ ಗೀತಪ್ರಿಯ ಅವರು ತಮ್ಮ ಚಿತ್ರಕ್ಕೆ ರಾಜ್‌ಅವರನ್ನು ಬುಕ್ ಮಾಡಲು ಹೋದಾಗ ಅವರು ಅಡ್ವಾನ್ಸ್ ಆಗಿ ರಾಜ್ ಕೈಗಿಟ್ಟದ್ದು ಬರೀ ನೂರಾಒಂದು ರೂಪಾಯಿ ಮಾತ್ರ! ರಾಜ್ ತಮ್ಮ ನೂರೈವತ್ತನೇ ಸಿನಿಮಾ 'ಗಂಧದ ಗುಡಿ' ಮುಗಿಸಿದಾಗಲೂ ಅವರ ಸಂಭಾವನೆ ಹದಿನೈದು, ಇಪ್ಪತ್ತು ಸಾವಿರದ ಆಸುಪಾಸಿನಲ್ಲೇ ಇತ್ತು.


'ಬಂಗಾರದ ಮನುಷ್ಯ' ಚಿತ್ರಕ್ಕೆ ರಾಜ್‌ಕುಮಾರ್ ಅವರು ನಲವತ್ತು ಸಾವಿರ ಪಡೆದಿದ್ದೇ ಬಹುಶಃ ದೊಡ್ಡ ಮೊತ್ತವಿರಬೇಕು. ರಾಜ್‌ಕುಮಾರ್ ಎಷ್ಟೇ ದೊಡ್ಡ ನಟನಾದ ಮೇಲೂ ದೊಡ್ಡ ಮಟ್ಟದ ಸಂಭಾವನೆಗೆ ಕೈಚಾಚಿರಲಿಲ್ಲ. ರಾಜ್‌ಕುಮಾರ್ ಅವರಿಂದಾಗಿ ನಿರ್ಮಾಪಕರ ತಿಜೋರಿ ತುಂಬಿತ್ತೇ ವಿನಃ ರಾಜ್ ಮಾತ್ರ ಆರ್ಥಿಕವಾಗಿ ಸದೃಢ ರಾಗಿರಲಿಲ್ಲ. ಒಂದು ವೇಳೆ ತಮ್ಮ ಚಿತ್ರಗಳಿಂದ ನಷ್ಟವಾದ ಪಕ್ಷದಲ್ಲಿ ಅಂಥ ನಿರ್ಮಾಪಕರಿಗೆ ಮತ್ತೆ ಮತ್ತೆ ಕಾಲ್‌ಶೀಟ್ ಕೊಟ್ಟು ಅನ್ನದಾತರನ್ನು ರಕ್ಷಿಸುವುದಷ್ಟೇ ಅವರ ಕಾಯಕವಾಗಿತ್ತು.

ರಾಜ್ ಎಂಬ ಹೆಸರೇ ಒಂದು ಅಕ್ಷಯ ಪಾತ್ರೆ ಎಂಬುದು ಗೊತ್ತಾಗುವ ಹೊತ್ತಿಗೆ ಅವರ ವೃತ್ತಿ ಬದುಕಿನ ಬಹಳಷ್ಟು ವರ್ಷಗಳು ಕಳೆದುಹೋಗಿದ್ದವು. ಅಂಥ ಸಂದರ್ಭದಲ್ಲೇ ಪಾರ್ವತಮ್ಮನವರು ಚಿತ್ರ ನಿರ್ಮಾಣಕ್ಕಿಳಿದದ್ದು. ಜೊತೆಗೆ ವಿತರಣೆಯನ್ನೂ ಶುರು ಮಾಡಿದ್ದು. 'ಶ್ರೀನಿವಾಸ ಕಲ್ಯಾಣ' ಮತ್ತು 'ತ್ರಿಮೂರ್ತಿ' ಚಿತ್ರಗಳನ್ನು ಆರು ಲಕ್ಷದ ಬಜೆಟ್‌ನೊಳಗೆ ಮುಗಿಸಿ ಗೆದ್ದ ಪಾರ್ವತಮ್ಮನವರು 'ಶಂಕರ್ ಗುರು' ಚಿತ್ರದ ಮೂಲಕ ಒಂದು ಕೋಟಿ ರೂಪಾಯಿಗಳನ್ನು ದುಡಿದು ಚಿತ್ರರಂಗದಲ್ಲಿ ಮೊಟ್ಟ ಮೊದಲ ಬಾರಿಗೆ ದಾಖಲೆ ಬರೆದರು. ನಂತರ 'ಭಕ್ತ ಕುಂಬಾರ', 'ಬಬ್ರುವಾಹನ'ದಂಥ ಚಿತ್ರಗಳೂ ಪಾರ್ವತಮ್ಮರಿಗೆ ಭರ್ಜರಿ ಲಾಭ ತಂದು ಕೊಟ್ಟವು.

ಆ ನಂತರದಲ್ಲಿ ತಮ್ಮ ಮೂವರು ಮಕ್ಕಳಿಗೆಂದೇ ಸಿನಿಮಾಗಳನ್ನು ನಿರ್ಮಿಸಲು ಆರಂಭಿಸಿದ ಪಾರ್ವತಮ್ಮನವರನ್ನು ವ್ಯಾವಹಾರಿಕವಾಗಿ ಇವತ್ತಿಗೂ ಬೇರೆ ಯಾರೂ ಹಿಂದಿಕ್ಕಲು ಸಾಧ್ಯವಾಗಿಲ್ಲ.

ಇಂಥ ಯಶಸ್ವೀ ಮಹಿಳೆ ಪಾರ್ವತಮ್ಮನವರು ಆದಷ್ಟು ಬೇಗ ಸಂಪೂರ್ಣ ಚೇತರಿಸಿಕೊಂಡು, ಹಿಂದಿನಂತೆ ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡು, ಚಿತ್ರರಂಗದ ಚಟುವಟಿಕೆಗಳಲ್ಲಿ ಬೆರೆಯುವಂತಾಗಲಿ. ಮುಂದಿನ ತಿಂಗಳು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಅಮ್ಮ ಇನ್ನೂ ಹತ್ತಾರು ವರ್ಷ ಹಾಯಾಗಿ ಕಾಲ ಕಳೆಯುವಂತಾಗಲಿ. ಇದು ಕನ್ನಡ ಕುಲಕೋಟಿಯ ಅಂತರಾಳದ ಆಶಯ...

ಬಿಜೆಪಿ ಅಂದ್ರೆ ಬಹುಜನ ಪರಪ್ಪನ ಪಾರ್ಟಿ ಸಾರ್!



ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿ ಎಡಿಯೂರಪ್ಪನವರು ಪರಪ್ಪನ ಅಗ್ರಹಾರದಿಂದ ಬಿಡುಗಡೆಯಾದ ನಂತರ ಅವರನ್ನು ಮಾತನಾಡಿಸುವುದು ನಮ್ಮ ಕರ್ತವ್ಯವಲ್ಲವೆ. ಅದಕ್ಕಾಗಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಶಿವ ಶಂಭೋ ಲಿಂಗಾ ನಾನೇನಂದಿಲ್ಲ ಬಾರೊ, ನಾನೇನಂದಿಲ್ಲ ಬಾರೊ ಎಂದು ನಿನಗೆ ಆಗಿಲ ಗೈರು, ಇಂದು ಈ ಕಂದನ ಕಾಯೋ ನಾ....."

"ಹಲೋ ಯಾರು?"

"ಹಲೋ ನಾನು ಸಾರ್ ಯಾಹೂ ಅಂತ ಪತ್ರಕರ್ತ."

"ಸಾಹೇಬ್ರು ಪೂಜೆ ಮಾಡ್ತ ಅವ್ರೆ."

"ತಾವ್ಯಾರು ಸಾರ್?"

"ನಾನು ಸಿದ್ದಲಿಂಗ ಸ್ವಾಮಿ."

"ಯಾವ ದೇವರಿಗೆ ಪೂಜೆ ಮಾಡ್ತ ಅವ್ರೆ?"

"ಹುಚ್ಚರಾಯ ಸ್ವಾಮಿಗೆ ಸಾರ್."

"ಒಳ್ಳೆ ದೇವರು ಕಂಡ್ರಿ. ಹುಚ್ಚರಾಯ ಸ್ವಾಮಿಗೆ ಎಡೂರಪ್ಪನವರು ಒಳ್ಳೆ ಭಕ್ತರಲ್ಲವಾ."

"ಕೊಟ್ಟೆ ಇರಿ. ಯಾರೊ ಪತ್ರಕರ್ತರಂತೆ ಸಾರ್, ಯಾಹೂ ಅಂತ ಹೇಳ್ತರೆ."

"ಏನ್ರಿ ಯಾಹೂ ಅವರೆ?"

"ನಮಸ್ಕಾರ ಸಾರ್. ಜೈಲಿಂದ ಬಂದ ಮೇಲೆ ಮಾತನಾಡಿಸಿರಲಿಲ್ಲ, ಅದ್ಕೆ ಫೋನ್ ಮಾಡಿದೆ."

ಧಾತ್ತೇರಿ
-ಯಾಹೂ

"ಆ ಜೈಲಿನ ವಿಷಯ ನೆನಪಿಸಬೇಡಿ."

"ಅದೊಂದು ವಿಶಿಷ್ಟ ಅನುಭವ ಅಂತ ತಿಳಕೊಳಿ ಸಾರ್."

"ಏನ್ರಿ ಹೀಗೇಳ್ತಿರಿ? ಯಾರೊ ಕೊಟ್ಟ ಖಾಸಗಿ ದೂರಿನ ಮೇಲೆ ಅನ್ಯಾಯವಾಗಿ ಜೈಲಿಗೋದದ್ದನ್ನು ಅನುಭವ ಅಂತ ತಿಳಕೊಬೇಕ? ನಾನೇನಂತ ತಪ್ಪು ಮಾಡಿದ್ದೆ?"

"ಅದ್ಭುತ ಸಾರ್. ನೀವು ಜೈಲಿಂದ ಬಂದ ಮೇಲೂ ಏನೂ ಬದಲಾಗಿಲವಲ್ಲ ಸಾರ್. ಖಾಸಗಿ ದೂರಲ್ಲಿ ಸತ್ಯ ಇರೋವತ್ತಿಗೆ ಅಲವ ಸಾರ್ ಜೈಲಿಗೋದದ್ದು?"

"ಸಂತೋಷ್ ಹೆಗಡೆ ಹಿಂಗೆ ಮಾಡ್ತರೆ ಅಂತ ಗೊತ್ತಿರಲಿಲ್ಲ, ನಾವು ಮುಖ್ಯಮಂತ್ರಿಯಾಗಿದ್ದಾಗ ತನಿಖೆ ಮಾಡಿ ಅಂತ ಹೇಳಿದ್ರೆ ನನ್ನ ಹೆಸರನ್ನೆ ಲೋಕಾಯುಕ್ತದಲ್ಲಿ ಸೇರಿಸಿ ಧರಂಸಿಂಗ್, ಎಸ್.ಎಂ. ಕೃಷ್ಣ ಕುಮಾರಸ್ವಾಮಿನ ಕೈಬಿಟ್ರಲ್ಲ, ಇದು ಸೇಡಿನ ಕ್ರಮ ಅಲ್ಲವೇನ್ರಿ?"

"ನೀವೀಗ ಜೈಲಿಗೋಗಿ ಬಂದದ್ದು ಸಂತೋಷ್ ಹೆಗಡೆಯವರ ವರದಿಯಿಂದ ಅಲ್ಲವಲ್ಲ ಸಾರ್?"

"ಸರಿ ಕಂಡ್ರಿ. ಮುಖ್ಯಮಂತ್ರಿಗಿರಿ ಹೋದದ್ದು ಯಾರಿಂದ?"

"ಸಾರ್, ಸಂತೋಷ್ ಹೆಗಡೆಯವರು ಕೃಷ್ಣ ಕುಮಾರಸ್ವಾಮಿ, ಧರ್ಮಸಿಂಗ್ ಕಾಲದ ಕಡತಕ್ಕೆ ಕೈಹಾಕಿದ್ರೆ ಲೋಕಾಯುಕ್ತ ವರದಿ ಕೊಡಕ್ಕೆ ಹತ್ತೊರ್ಸಾಗದು."

"ಆದರೇನಂತೆ?"

"ನೀವು ಬಚಾವಾಗ್ತಿದ್ರಲ್ಲಾ ಸಾರ್."

"ನಾನೇನು ಮಾಡಿದ್ದಿನ್ರಿ?"

"ಸಾರ್, ನೀವು ಏನೂ ಮಾಡಿಲ್ಲ ಅಂತ ದೇವೇಗೌಡರಂಗೆ ಮಾತಾಡಬಹುದು. ರಾಜ್ಯದ ವಿಷಯ ಬಿಡಿ ಆದ್ರೆ ಶಿವಮೊಗ್ಗ ನೋಡಿ ಬಂದ ಜನ ಹೇಳೊ ಪ್ರಕಾರ ಊರಿನ ಅಭಿವೃದ್ಧಿ ಕೆಲಸಗಳ ಜೊತೆಗೆ ನಿಮ್ಮ ಹೋಟೆಲು, ಕಾಲೇಜು, ಹಾಸ್ಪಟಲು ಬಿಲ್ಡಿಂಗ್ ಎದ್ದುವಂತೆ. ಆಶ್ಚರ್ಯ ಅಂದ್ರೆ ಶಿವಮೊಗ್ಗ ಬಸ್ಟಾಂಡಿಗೆ ಹೊಡದಿರೊ ಬಣ್ಣ, ನಿಮ್ಮ ಕಾಲೇಜಿಗೆ ಹೊಡದಿರೊ ಬಣ್ಣ ಒಂದೇ ಅಂತೆ. ಸರ್ಕಾರಿ ಕಾಮಗಾರಿ ಕೆಲಸ ಮಾಡ್ತಿದ್ದ ಕೂಲಿಯಾಳುಗಳು ಅದೇ ಟೈಮಲ್ಲಿ ನಿಮ್ಮ ಸ್ವಂತ ಕಟ್ಟಡದ ಕೆಲಸಗಳನ್ನು ಮಾಡಿದರಂತೆ."

"ರೀ, ಕಾಲೇಜ್ ಕಟ್ಟಿದ್ದಿನಿ ಅಂದ್ರೆ ಅದರಲ್ಲಿ ನನ್ನ ಮಕ್ಕಳು ಓತ್ತರೇನ್ರಿ? ಹಾಸ್ಪಟಲಿನಲ್ಲಿ ನನ್ನ ಮಕ್ಕಳು ಇರತರಾ? ಸಾರ್ವಜನಿಕರಿಗಲ್ಲವೇನ್ರಿ ಅದನ್ನೆಲ್ಲಾ ಮಾಡಿರೋದು. ಅಷ್ಟು ತಿಳಕೊಳದು ಬೇಡವಾ ನೀವು?"

"ಸಾರಿ ಸಾರ್, ಸರ್ಕಾರಿ ಕಾಮಗಾರಿ, ಸ್ವಂತ ಕಾಮಗಾರಿ ಬೇರೆಬೇರೆ ಅಂತ ತಿಳಕೊಂಡಿದ್ದೆ ಸಾರ್."

"ನನ್ನ ಪೆಟ್ರೋಲ್ ಬಂಕಿರೋದು ಯಾರಿಗೆ? ಸ್ಟಾರ್ ಹೋಟಲಿರೋದು ನನಿಗಾ? ಸಿಮೆಂಟ್ ರೋಡು ಮಾಡಿಸಿದ್ದು ನನಿಗಾ? ಇದನ್ನೆಲ್ಲಾ ತಿಳಕೊ ಬೇಡವಾ."

"ವಾಲ್ಮೀಕಿ ಕತೆ ಕೇಳಿದಂಗಾಯ್ತಾ ಅದೆ ಸಾರ್."

"ಯಾವುದೇ ಶ್ಯಡ್ಯಂತ್ರಕ್ಕೆ ಬಗ್ಗೋನಲ್ಲ ಈ ಎಡೂರಪ್ಪ ಇನ್ನು ಇಪ್ಪತ್ತು ವರ್ಷ ರಾಜಕೀಯ ಮಾಡ್ತಿನಿ."

"ಅಂತೂ ಅದ್ವಾನಿ ವಯಸ್ಸಿನವರೆಗೂ ಇರ್ತಿರಿ."

"ಇದ್ದೇ ಇರತಿನಿ. ದೇವರ ಆಶೀರ್ವಾದ ನನ್ನ ಮೇಲಿದೆ. ಅದ್ಕೆ ಜೈಲಿಂದ ಬಿಡುಗಡೆಯಾಗಿರದು."

"ಬಿಡುಗಡೆಯಾಗಿದ್ದು ದೇವರ ಆಶೀರ್ವಾದ ಅನ್ನದಾದ್ರೆ ಒಳಗೋದದ್ದು?"

"ವಿರೋಧ ಪಕ್ಷಗಳ ಶ್ಯಡ್ಯಂತ್ರದಿಂದ."

"ಜೆಡಿಎಸ್ನೊ, ಕಾಂಗ್ರೆಸ್ ಶ್ಯಡ್ಯಂತ್ರನೊ?"

"ಈ ಅಪ್ಪಾ ಮಕ್ಕಳು ಮಾಡಿದ್ದು ಕಂಡ್ರಿ. ಯಾವ್ರು ಕೇಸು ಇಲ್ದೆ ಉಪವಾಸ ಇದ್ದ ಪಾಶ, ಬಾಲರಾಜ ಅನ್ನೊ ವಕೀಲರನ್ನ ಶಿವಮೊಗ್ಗದಿಂದ ಕರಿಸಿಕೊಂಡು ಕೇಸಾಕಿಸಿದ್ರು ಗೊತ್ತಾ?"

"ಅವ್ರನ್ನ ನೀವು ಒಳಗಾಕ್ಸಿ ಸಾರ್ ಅತ್ತಗೆ."

"ಆದಾಗದಿಲ್ಲ ಕಂಡ್ರಿ. ನಾನು ಬಿಜೆಪಿ ಬಿಡದಂಗೆ ತಿರುಗ ಪಕ್ಷ ಕಟ್ಟಿ ಜಯಲಲಿತನಂಗೆ ಪುನಃ ಮುಖ್ಯಮಂತ್ರಿಯಾಗ್ತಿನಿ. ಆಗ ಮಾತ್ರ ನಾನು ಜೈಲಿಗೋದ ಕೆಟ್ಟ ಅನುಭವನ ಮರಿಬವುದು."

"ಜೈಲಲ್ಲೇನು ಮಾಡಿದ್ರಿ ಸಾರ್?"

"ಅಳುಬರ್ತಿತ್ತು, ಜೊತೆಗೆ ಸಿಟ್ಟು ಬರ್ತಿತ್ತು, ಅದ್ಕೆ ಕುಂತಗೊಂಡು ಡೈರಿ ಬರಿತಿದ್ದೆ."

"ಏನು ಡೈರಿ ಬರದ್ರಿ ಸಾರ್?"

"ಅದೆ, ನನಿಗೆ ಯಾರ್ಯಾರು ಸಹಾಯ ಮಾಡಿದ್ರು, ಯಾರ್ಯಾರು ದ್ರೋಹ ಮಾಡಿದ್ರು ಅದನ್ನ ದಾಖಲಿಸಿದ್ದಿನಿ."

"ಅಂತೂ ಡೈರಿಲೂ ಸೇಡು ದಾಖಲಾಗಿದೆ."

"ಮತ್ತೆ? ಯಾರಿಗೂ ಬಗ್ಗದಿಲ್ಲ, ಶರಣಾಗದೂ ಇಲ್ಲ, ಅಂತ ಶರಣ ನಾನು."

"ಶರಣರು ನ್ಯಾಯಕ್ಕೆ ಶರಣಾಗಬೇಕಲ್ಲವಾ ಸಾರ್?"

"ನಾನು ಅಂತಾ ಶರಣಲ್ಲ ಕಂಡ್ರೀ."

"ಹಾಗಾದ್ರೆ ಕಾನೂನೇ ಬಗ್ಗಿಸಿ ಶರಣ ಮಾಡ್ತುಸ್ತೆ ಬುಡಿ ಸಾರ್."

"ಅದು ಇನ್ನುಮುಂದಾಗೊಲ್ಲ, ಲೋಕಾಯುಕ್ತರಿಂದ ಹಿಡುದು ಪೊಲೀಸ್ ಕಾನ್ಸ್‌ಟೇಬಲ್‌ವರಿಗೂ ನಾವು ಹೇಳಿದಂಗೆ ಕೇಳೋರನ್ನೇ ನೇಮಕ ಮಾಡ್ತಿವಿ."

"ಈಗಾಗ್ಲೆ ಅಂತ ಕೆಲಸನ ಸದಾನಂದ ಗೌಡನಿಂದ್ಲೆ ಶುರು ಮಾಡಿಸಿದ್ದಿರಲ್ಲಾ ಸಾರ್?"

"ಅದ್ಕೆ ನಾನು ಬಿಜೆಪಿನೂ ಬಿಡಲ್ಲ, ಬೇರೆ ಪಕ್ಷನೂ ಕಟ್ಟಲ್ಲ."

"ಆದ್ರೆ ಬಿಜೆಪಿ ನಿಮ್ಮನ್ನು ಬಿಟ್ಟಂಗೆ ಕಾಣ್ತದಲ್ಲ ಸಾರ್?"

"ಈ ಎಡೂರಪ್ಪಿದ್ರೆ ಬಿಜೆಪಿ, ಇಲ್ಲ ಅಂದ್ರೆ ಇಲ್ಲ ಗೊತ್ತಾ?"

"ಗೊತ್ತು ಸಾರ್. ಬಿಜೆಪಿಲಿ ನೀವಿದ್ರೆ ಒಂದು ಕಳೆ. ಸದ್ಯದ ಬಿಜೆಪಿ ಅಂದ್ರೆ ಬಹುಜನ ಪರಪ್ಪನ ಪಾರ್ಟಿ ಅನ್ನುಸ್ತಾ ಅದೆ."

"ಅದನ್ನ ತಡಿಯೋದಕ್ಕೆ ನನ್ನ ಹೋರಾಟ ಮೀಸಲು ಕಂಡ್ರಿ."

"ಥೂತ್ತೇರಿ!!!"


ಸೋಮಣ್ಣನ ಕಾರಸ್ಥಾನದ ಹಿಂದೆ ಯಡ್ಡಿಯ ಹಿಕಮತ್ತು

ಟಾರ್ಗೆಟ್ ಅಶೋಕ್

ಬಿಜೆಪಿ ಸರ್ಕಾರದ ಇಬ್ಬರು ಬಲಾಢ್ಯ ಕೋಮಿನ ಮಂತ್ರಿಗಳ ಮಧ್ಯೆ ಹೊಗೆಯಾಡುತ್ತಲೇ ಇರುವ ಮುಸುಕಿನ ಗುದ್ದಾಟದ ಕಾರಣ ಮತ್ತು ಪರಿಣಾಮಗಳನ್ನು ಲೆಕ್ಕ ಹಾಕುತ್ತಾ ಹೋದರೆ ಅಂತಿಮವಾಗಿ ಅದು ಪರಪ್ಪನ ಅಗ್ರಹಾರ ಜೈಲಿಗೆ ಬಂದು ನಿಲ್ಲುತ್ತದೆ. ಗೃಹಮಂತ್ರಿ ಅಶೋಕ್ ಇಷ್ಟರಲ್ಲೇ ಜೈಲುಪಾಲಾಗುವುದು ಶತಸಿದ್ಧ ಎಂದು ಸಮಸ್ತ ಯಡ್ಡಿ ಅನುಯಾಯಿ ವರ್ಗ ನಂಬಿಕೂತಿದ್ದರೆ ಮತ್ತೊಂದೆಡೆ ಸೋಮಣ್ಣನನ್ನು ಹೇಗಾದರೂ ಮಾಡಿ ಜೈಲಿಗೆ ಹಾಕಿಸಬೇಕೆಂದು ಅಶೋಕ್ ಗುಂಪು ಕಾತರಿಸುತ್ತಿದೆ.

• ರಾ. ಸೋಮನಾಥ್

ಜೈಲಿಂದ ಹೊರಬಿದ್ದ ತನ್ನನ್ನು ಮಾತಾಡಿಸಹೋದ ಗೃಹಮಂತ್ರಿ ಅಶೋಕ್‌ಗೆ ಯಡ್ಡಿ ಯಕ್ಕಾಮಕ್ಕಾ ಉಗಿದಟ್ಟಿದರೆಂಬುದು ಒಂದು ಸುದ್ದಿ. ಅಶೋಕ್ ವಿರುದ್ಧದ ಭೂಕಬಳಿಕೆಯ ಆರೋಪವನ್ನು ಕೆದಕಿ ಮತ್ತೆ ಲೋಕಾಯುಕ್ತಕ್ಕೆ ಹಾಕಿಕೊಟ್ಟಿದ್ದೇ ಯಡ್ಡಿ ಬಂಟ ಸೋಮಣ್ಣ ಎಂಬುದು ಮತ್ತೊಂದು ಸುದ್ದಿ. ಸೋಮಣ್ಣ ಮತ್ತು ಅಶೋಕ್ ಮಧ್ಯೆ ರಾಜಿಗೆ ಆದಿಚುಂಚನಗಿರಿ ಬಾಲಗಂಗಾಧರನಾಥರು ಏರ್ಪಡಿಸಿದ್ದ ಪಂಚಾಯ್ತಿಗೆ ಸಾಕ್ಷಾತ್ ಯಡ್ಡಿಯೇ ಅಡ್ಡಗಾಲಿಟ್ಟರೆಂಬುದು ಇನ್ನೊಂದು ಸುದ್ದಿ. ತನ್ನ ದಾಯಾದಿಯೊಬ್ಬನ ಛೇಲಾನನ್ನು ಛೂ ಬಿಟ್ಟು ಅಶೋಕ್ ಸೋಮಣ್ಣನಿಗೆ ಚಪ್ಪಲಿಯಲ್ಲಿ ಹೊಡೆಸಿದರೆಂಬುದು ಮಗದೊಂದು ಸುದ್ದಿ.




ಹೀಗೆ ಬಿಜೆಪಿ ಸರ್ಕಾರದ ಇಬ್ಬರು ಬಲಾಢ್ಯ ಕೋಮಿನ ಮಂತ್ರಿಗಳ ಮಧ್ಯೆ ಹೊಗೆಯಾಡುತ್ತಲೇ ಇರುವ ಮುಸುಕಿನ ಗುದ್ದಾಟದ ಕಾರಣ ಮತ್ತು ಪರಿಣಾಮಗಳನ್ನು ಲೆಕ್ಕ ಹಾಕುತ್ತಾ ಹೋದರೆ ಅಂತಿಮವಾಗಿ ಅದು ಪರಪ್ಪನ ಅಗ್ರಹಾರ ಜೈಲಿಗೆ ಬಂದು ನಿಲ್ಲುತ್ತದೆ. ಗೃಹಮಂತ್ರಿ ಅಶೋಕ್ ಇಷ್ಟರಲ್ಲೇ ಜೈಲುಪಾಲಾಗುವುದು ಶತಸಿದ್ಧ ಎಂದು ಸಮಸ್ತ ಯಡ್ಡಿ ಅನುಯಾಯಿ ವರ್ಗ ನಂಬಿಕೂತಿದ್ದರೆ ಮತ್ತೊಂದೆಡೆ ಸೋಮಣ್ಣನನ್ನು ಹೇಗಾದರೂ ಮಾಡಿ ಜೈಲಿಗೆ ಹಾಕಿಸಬೇಕೆಂದು ಅಶೋಕ್ ಗುಂಪು ಕಾತರಿಸುತ್ತಿದೆ.

ಇಬ್ಬರ ಪೈಕಿ ಯಾರು ಜೈಲಿಗೆ ಹೋದರೂ ಎದುರಾಳಿ ಗುಂಪು ವಿಜಯೋತ್ಸವ ಆಚರಿಸುತ್ತದೆ. ಅದೇ ವೇಳೆಗೆ ಜೈಲುಪಾಲಾಗದ ಹಾಗೆ ತನ್ನನ್ನು ತಾನೇ ಕಾಪಾಡಿಕೊಳ್ಳಲು ಪ್ರತಿಯೊಂದು ಗುಂಪೂ ಸಮರೋಪಾದಿಯಲ್ಲಿ ತಂತ್ರ-ಪ್ರತಿತಂತ್ರ ಹೆಣೆಯುತ್ತಲೇ ಇದೆ. ಮೇಲುನೋಟಕ್ಕಿದು ಜಾತಿ ವೈಷಮ್ಯದಂತೆ ಕಂಡರೂ, ಅದರ ಆಳದಲ್ಲಿರುವುದು ಅಧಿಕಾರದಾಹ. ಹಿಂದಾದರೆ ಬೆಂಗಳೂರಿಗೆ ಇಬ್ಬರು ಉಸ್ತುವಾರಿ ಮಂತ್ರಿಗಳಿದ್ದರು. ಕಟ್ಟಾ ಜೈಲು ಪಾಲಾದ ಮೇಲೆ ಇಡೀ ಬೆಂಗಳೂರಿಗೆ ಅಶೋಕ್ ಅನಭಿಷಕ್ತ ದೊರೆಯಾದರು. ಪ್ರತಿಷ್ಠಿತ ಗೃಹಖಾತೆಯ ಜೊತೆಗೆ ಅಷ್ಟೇ ಫಲವತ್ತಾದ ಸಾರಿಗೆ ಇಲಾಖೆ, ಸಾಲದ್ದಕ್ಕೆ ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿ ಬೇರೆ. ಇಷ್ಟೇ ಅಲ್ಲದೆ ಮಂಡ್ಯಕ್ಕೂ ಅಶೋಕ್‌ರದ್ದೇ ಅಧಿಪತ್ಯ. ಆದಿಚುಂಚನಗಿರಿ ಬಾಲಗಂಗಾಧರನಾಥರಿಗೂ ಅಶೋಕ್ ಬಗ್ಗೆ ಸಾಫ್ಟ್ ಕಾರ್ನರ್ ಇದೆ. ಬೆಂಗಳೂರಿನ ಮೇಯರ್ ಶಾರದಮ್ಮ ಕೂಡ ಆಕೆಯ ಗಾಡ್‌ಫಾದರ್ ದಾಸರಹಳ್ಳಿ ಶಾಸಕ ಮುನಿರಾಜು ಮುಖೇನ ಅಶೋಕ್ ಶಿಷ್ಯೆಯೆ. ಗೆದ್ದ ಬಿಜೆಪಿ ಕಾರ್ಪೊರೇಟರುಗಳ ಪೈಕಿ ಬಹುಸಂಖ್ಯಾತರೆಲ್ಲ ಅಶೋಕ್ ಅನುಯಾಯಿಗಳೆ.

ದೊಡ್ಡ ಕಂಟಕ

ಅಶೋಕ್ ಸದ್ಯ ಬಿಜೆಪಿ ಸರ್ಕಾರದಲ್ಲಿ ಒಕ್ಕಲಿಗರ ಏಕಮೇವಾದ್ವಿತೀಯ ನಾಯಕ. ತನ್ಮೂಲಕ ಮುಖ್ಯಮಂತ್ರಿ ಗಾದಿಗೂ ಪರೋಕ್ಷ ಉಮೇದುವಾರ. ರಾಷ್ಟ್ರನಾಯಕ ಅನಂತ್‌ಕುಮಾರ್ ಹೆಣೆಯುವ ಷಡ್ಯಂತ್ರಗಳ ವಿರುದ್ಧ ಯಡ್ಡಿಗೆ ಎಷ್ಟೇ ಆಕ್ರೋಶವಿದ್ದರೂ ಅನಂತ್ ನೇರಾನೇರ ತನ್ನ ವಿರುದ್ಧ ತೊಡೆತಟ್ಟಲಾರ ಎಂಬುದು ಯಡ್ಡಿಗೆ ಚೆನ್ನಾಗಿ ಗೊತ್ತಿದೆ. ಬಿಜೆಪಿಯಲ್ಲೇ ತನ್ನ ಎದುರಾಳಿಗಳಾದ ಈಶ್ವರಪ್ಪ ಶೆಟ್ಟರ್, ಗಣಿ ರೆಡ್ಡಿಗಳಿದ್ದರೂ ಅವರ‍್ಯಾರೂ ಅಶೋಕ್‌ರಂತೆ ನೇರಾನೇರ ಯಡ್ಡಿಯನ್ನು ಎದುರು ಹಾಕಿಕೊಳ್ಳುವುದಿಲ್ಲ, ಅಂಥದೊಂದು ಧೈರ್ಯ, ತಾಕತ್ತು, ಖದರ‍್ರು ಇರುವುದು ಅಶೋಕ್‌ಗೆ ಮಾತ್ರ. ಆ ಕಾರಣಕ್ಕೇ ಯಡ್ಡಿ ಪಾಲಿಗೆ ಅಶೋಕ್ ದೊಡ್ಡ ಕಂಟಕ.



ಜೈಕುಮಾರ್ ಹಿರೇಮಠ್

ಇದೇ ವೇಳೆಗೆ ಯಡ್ಡಿಗೊಬ್ಬ ಟ್ರಬಲ್ ಶೂಟರ್ ಅರ್ಥಾತ್ ವಿಘ್ನ ನಿವಾರಕನಂತೆ ಸಿಕ್ಕವನು ಸೋಮಣ್ಣ. ಯಡ್ಡಿಯ ಒಡ್ಡೋಲಗದಲ್ಲಿ ಶೋಭಾ ಕರಂದ್ಲಾಜೆಗೆ ಅದೇನೇ ಪ್ರಾಮುಖ್ಯತೆಯಿದ್ದರೂ ಆಕೆಗೆ ಸ್ವಂತ ಶಕ್ತಿ, ವರ್ಚಸ್ಸು, ಯುದ್ಧ ಕೌಶಲ್ಯವಿಲ್ಲ, ರಾಮಚಂದ್ರೇಗೌಡ ಯಡ್ಡಿಯ ಆಸ್ಥಾನ ವಿಧೂಷಕನೇ ಹೊರತು ಯೋಧನಲ್ಲ, ರೇಣುಕಾಚಾರ್ಯನಂಥ ಕಮಂಗಿಯನ್ನು ಕಟ್ಟಿಕೊಂಡು ದೊಡ್ಡ ಬೇಟೆಗಿಳಿಯಲಾಗದು ಎಂಬ ವಾಸ್ತವ ಯಡ್ಡಿಗೆ ಗೊತ್ತಿಲ್ಲವೆಂದಲ್ಲ. ನಿರಾಣಿ, ಬೊಮ್ಮಾಯಿ, ಸವದಿ, ಉದಾಸಿ, ಕತ್ತಿ, ಕಾರಜೋಳರಂಥ ಅಲ್ಪತೃಪ್ತರನ್ನು ನೆಚ್ಚಿ ಯಾವುದೇ ದುಸ್ಸಾಹಸಕ್ಕಿಳಿಯುವ ಬದಲು ಒಬ್ಬ ಸೋಮಣ್ಣ ಇದ್ದುಬಿಟ್ಟರೆ ಏನು ಬೇಕಾದರೂ ಸಾಧಿಸಬಹುದೆಂಬ ಲೆಕ್ಕಾಚಾರ ಯಡ್ಡಿಯದ್ದು.

ಹಾಗೆ ನೋಡಿದರೆ ಯಡ್ಡಿಯ ವೀರಶೈವ ಸಾಮ್ರಾಜ್ಯಕ್ಕೊಬ್ಬ ಉತ್ತರಾಧಿಕಾರಿ ಅಂತಿದ್ದರೆ ಅದು ಸೋಮಣ್ಣ ಮಾತ್ರ!

ಹಿಂದೆ ದೇವೇಗೌಡರ ಜೊತೆಗಿದ್ದು ಅವರ ಎಲ್ಲಾ ಕಾರಸ್ಥಾನಗಳನ್ನೂ ಮೈಗೂಡಿಸಿಕೊಂಡ ಸೋಮಣ್ಣ ಯಾವತ್ತೂ ಜಾತಿವಾದಿ ಎನಿಸಿಕೊಂಡವರಲ್ಲ. ಯಾವತ್ತು ಯಡ್ಡಿಯ ಜೊತೆ ಸೋಮಣ್ಣ ಕೈಜೋಡಿಸಿದನೋ ಕ್ರಮೇಣ ಲಿಂಗಾಯತ ಲಾಬಿಯೆಂಬುದು ಆತನಿಗೆ ಅನಿವಾರ್ಯವಾಯಿತು. ಯಡ್ಡಿಯನ್ನು ಸಿದ್ಧಗಂಗೆಯ ಸ್ವಾಮೀಜಿಯ ಸನ್ನಿಧಿಗೆ ಕೆಡವಿದ್ದು, ಸುತ್ತೂರು ಮಠದಲ್ಲಿ ಯಡ್ಡಿಯ ಬೈಠಕ್ ಶುರುವಾಗಿದ್ದು, ರಂಭಾಪುರಿ ಜಗದ್ಗುರುವಿನ ಕಾಲಿಗೆ ಬೀಳಿಸಿದ್ದು ಇತ್ಯಾದಿಗಳೆಲ್ಲದರ ಹಿಂದಿದ್ದದ್ದು ಸೋಮಣ್ಣನೆ. ಇದು ಮೊದಲು ರೊಚ್ಚಿಗೆಬ್ಬಿಸಿದ್ದು ಗಣಿ ರೆಡ್ಡಿಗಳನ್ನು. ಆದರೆ ಸೋಮಣ್ಣನ ಟಾರ್ಗೆಟ್ ಇದ್ದದ್ದು ಅಶೋಕ್ ಮೇಲೆಯೆ. ಏಕೆಂದರೆ ಅಶೋಕ್ ಯಡ್ಡಿ ಪಾಲಿಗೆ ಮಗ್ಗಲ ಮುಳ್ಳು.

ಒಕ್ಕಲಿಗರ ಲಾಬಿ

ಒಂದಲ್ಲ ಎರಡು ಖಾತೆ ಕೊಟ್ಟೂ, ಬೆಂಗಳೂರಿನ ಉಸ್ತುವಾರಿ ವಹಿಸಿಯೂ ಅಶೋಕ್ ಯಡ್ಡಿಗೆ ನಿಷ್ಠನಾಗಲೇ ಇಲ್ಲ, ಹಾಗಂಥ ಪಕ್ಕಾ ಅನಂತ್‌ಕುಮಾರ್ ಬೆಂಬಲಿಗನಾಗಿಯೂ ಅಶೋಕ್ ತೋರ್ಪಡಿಸಿಕೊಳ್ಳಲಿಲ್ಲ. ಅತ್ತ ಯಡ್ಡಿ ಜೊತೆಗಿದ್ದೂ ಅನಂತ್ ಜೊತೆ ಸಖ್ಯ, ಅನಂತ್ ಜೊತೆಗಿದ್ದಂತೆ ಕಂಡರೂ ಲೆಕ್ಕಾಚಾರದ ಅಂತರ. ಶೆಟ್ಟರ್, ಗಣಿ ರೆಡ್ಡಿಗಳು, ಈಶ್ವರಪ್ಪ ಜೊತೆಗೂ ಅಷ್ಟೇ ಸಾಮರಸ್ಯ ಕಾಯ್ದುಕೊಂಡು; ಯಾರಿಗೂ ಶತ್ರುವಲ್ಲ ಯಾರಿಗೂ ಪರಮಾಪ್ತನಲ್ಲ ಎಂಬಂತೆ ವಿಶಿಷ್ಟ ರಾಜಕೀಯ ತಂತ್ರಗಾರಿಕೆಯೊಂದಕ್ಕೆ ಅಶೋಕ್ ಕೈಯಿಟ್ಟಿದ್ದು ಯಾರ‍್ಯಾರಿಗೆ ಯಾವ್ಯಾವ ರೀತಿ ಕಾಣಿಸಿತೊ.

ಆದರೆ ಅಶೋಕ್ ಲೆಕ್ಕಾಚಾರವೇ ಬೇರೆಯಿತ್ತು. ತಾನು ಪಕ್ಕಾ ಪಕ್ಷನಿಷ್ಠನಂತೆ ಕಾಣಿಸಿಕೊಂಡು ಅವಕಾಶ ಸಿಕ್ಕಾಗ ಅನಂತ್, ಈಶ್ವರಪ್ಪ ಶೆಟ್ಟರ್, ಗಣಿರೆಡ್ಡಿಗಳನ್ನು ತನ್ನ ಅನುಕೂಲಕ್ಕೆ ತಕ್ಕಂಥ ಬಳಸಿಕೊಳ್ಳುವುದು. ಅದೇ ವೇಳೆಗೆ ತನ್ನ ರಿಯಲ್ ಎಸ್ಟೇಟ್ ಸಾಮ್ರಾಜ್ಯ ಮತ್ತು ಒಕ್ಕಲಿಗರ ಅಧಿಪತ್ಯವನ್ನೂ ಸಂಭಾಳಿಸುವುದು. ಯಾರ ಅಂಕೆಗೂ ನಿಲುಕದೆ, ಯಾರ ಹಂಗಿಗೂ ಬೀಳದೆ ತನ್ನದೇ ಪ್ರತ್ಯೇಕ ಮಾರ್ಗ ಹಿಡಿದ ಅಶೋಕ್‌ಗೆ ಕಟ್ಟಾ ಜೈಲಿಗೆ ಹೋಗಿದ್ದು ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಇದಕ್ಕೂ ಮುನ್ನ ಅಶೋಕ್ ಹುಷಾರಾಗಿ ನಿಗೂಢ ತಂತ್ರವೊಂದಕ್ಕೆ ಕೈಹಾಕಿದ್ದು ಸೋಮಣ್ಣನ ವಿರುದ್ಧ.



ಅಶ್ವತ್ಥನಾರಾಯಣ

ಇವತ್ತಲ್ಲಾ ನಾಳೆ ಸೋಮಣ್ಣ ತನ್ನ ಸಾಮ್ರಾಜ್ಯಕ್ಕೆ ಕಂಟಕನಾಗುವುದು ಶತಸ್ಸಿದ್ಧ ಎಂಬುದು ಅಶೋಕ್‌ಗೆ ಆತ ಬಿಜೆಪಿಗೆ ಕಾಲಿಟ್ಟಾಗಲೇ ನಿಕ್ಕಿಯಾಗಿತ್ತು. ಸೋಮಣ್ಣ ಬಿಜೆಪಿಯೊಳಕ್ಕೆ ನುಸುಳದ ಹಾಗೆ ಏನೆಲ್ಲಾ ಅಡ್ಡಗಾಲಿಟ್ಟರೂ ಅದು ಫಲಕಾಣದೆ ಹೋದಾಗ ಅಶೋಕ್ ತನ್ನ ಬತ್ತಳಿಕೆಯ ಮೊದಲ ಬಾಣಬಿಟ್ಟರು. ಅದು ಸೋಮಣ್ಣನ ಪುರಾತನ ಎದುರಾಳಿ ಅಶ್ವತ್ಥನಾರಾಯಣ್ಣನನ್ನು ಎಮ್ಮೆಲ್ಸಿ ಮಾಡಿದ್ದು.





ಜಾತಿಯಲ್ಲಿ ಅಶ್ವತ್ಥನಾರಾಯಣ ಕೂಡ ಒಕ್ಕಲಿಗನೆ. ಜೊತೆಗೆ ಸೋಮಣ್ಣನ ಮತ್ತೊಬ್ಬ ಕಡುವೈರಿ ಲೇಟ್ ಕೃಷ್ಣಪ್ಪನವರಿಗೂ ಪರಮಾಪ್ತ, ಅಶ್ವತ್ಥನಾರಾಯಣ, ಲೇಟೆಸ್ಟ್ ಕೃಷ್ಣಪ್ಪ ಮತ್ತು ಅಶೋಕ್ ಮಿತ್ರಕೂಟ ಇನ್ನೊಂದರ್ಥದಲ್ಲಿ ಸೋಮಣ್ಣನ ವಿರುದ್ಧದ ಒಕ್ಕಲಿಗ ಕೂಟವೂ ಆಗಿತ್ತು. ಈ ಎಲ್ಲಾ ಸಮೀಕರಣದ ಪರಿಣಾಮವೇ ಗೋವಿಂದರಾಜನಗರದ ಉಪಚುನಾವಣೆಯಲ್ಲಿ ಸೋಮಣ್ಣನ ಸೋಲು.

ಮಂತ್ರಿಯಾಗಿದ್ದಾಗಲೂ ಚುನಾವಣೆಯಲ್ಲಿ ಗೆಲ್ಲಲಾಗದ ತನ್ನ ದುರ್ಗತಿಗೆ ಸೋಮಣ್ಣ ಬಹಿರಂಗವಾಗಿ ದೇವೇಗೌಡರನ್ನು ದೂಷಿಸಿದನಾದರು ಆಳದಲ್ಲಿ ಅಶೋಕ್ ವಿರುದ್ಧ ಕುದಿಯುತ್ತಲೇ ಇದ್ದ, ಅದಕ್ಕೆ ತಕ್ಕಂತೆ ಯಡ್ಡಿ ಸಾತು ಕೊಟ್ಟರು. ಯಡ್ಡಿಗೂ ಅಶೋಕ್ ಬಾಲ ಕತ್ತರಿಸಬೇಕಿತ್ತು, ಯಾವ ದೇವೇಗೌಡರಿಗೆ ಪರ್ಯಾಯವಾಗಿ ಅಶೋಕ್‌ರನ್ನು ಎತ್ತಿಕಟ್ಟಲು ಯಡ್ಡಿ ಇನ್ನಿಲ್ಲದ ಷಡ್ಯಂತ್ರಕ್ಕಿಳಿದಿದ್ದರೋ ಆ ಮೂಲಕ ಮತ್ತೊಂದು ಒಕ್ಕಲಿಗ ಸಾಮ್ರಾಜ್ಯ ಸ್ಥಾಪಿಸುವುದು ಯಡ್ಡಿಯ ಹುನ್ನಾರವಾಗಿತ್ತೋ, ಅದೇ ಉಲ್ಟಾ ಹೊಡೆದಿತ್ತು.

ಮೂಟೆ ಮಂಜ.....!

ಯಡ್ಡಿಯ ಮುಖೇನ ಎಲ್ಲಾ ಸವಲತ್ತು, ಸೌಕರ್ಯವನ್ನು ಪಡೆದೂ ಅಶೋಕ್ ದೇವೇಗೌಡರಿಗಾಗಲಿ, ಕುಮಾರಸ್ವಾಮಿಗಾಗಲಿ ಸೆಡ್ಡು ಹೊಡೆಯಲೇ ಇಲ್ಲ, ಬದಲಾಗಿ ದೇವೇಗೌಡರ ಜೊತೆಗೇ ಕೈಜೋಡಿಸಿಬಿಟ್ಟರು. ಯಡ್ಡಿ ವಿರುದ್ಧ ಪದೇಪದೇ ದೇವೇಗೌಡರ ಕಿವಿ ಕಚ್ಚತೊಡಗಿದರು ಇದು ಯಡ್ಡಿಗೆ ಗೊತ್ತಾಗಲು ಎಷ್ಟು ಹೊತ್ತು. ತನ್ನಿಂದ ಎಲ್ಲಾ ಅನುಕೂಲ ಪಡೆದೂ ತನ್ನ ವಿರುದ್ಧವೇ ದೇವೇಗೌಡರ ಜೊತೆ ಕೈಜೋಡಿಸಿದ ಅಶೋಕ್ ಮಟ್ಟಾ ಹಾಕಲು ಸೋಮಣ್ಣನಿಗಿಂತ ಲಾಯಕ್ಕಾದ ಕಟ್ಟಾಳುಬೇಕೆ?

ತನ್ನ ವಿರುದ್ಧ ಶಿವಮೊಗ್ಗದ ವಕೀಲರಾದ ಸಿರಾಜಿನ್ ಭಾಷಾ ಮತ್ತು ಬಾಲರಾಜರನ್ನು ಛೂ ಬಿಟ್ಟು ಲೋಕಾಯುಕ್ತಕ್ಕೆ ದೂರು ಕೊಡಿಸಿದ ದೇವೇಗೌಡರಿಗೂ ಬಿಸಿ ಮುಟ್ಟಿಸಬೇಕಲ್ಲ; ಅದಕ್ಕೊಂದು ಸೋಮಣ್ಣನ ಮೂಲಕ ಯಡ್ಡಿ ಬಾಣಬಿಟ್ಟರು ಲೊಟ್ಟೆಗೊಲ್ಲಹಳ್ಳಿಯ ಡೀನೋಟಿಫಿಕೇಷನ್ ಹಗರಣವನ್ನು. ಬಿಡಿಎ ನೋಟಿಫೈ ಮಾಡಿದ ಜಮೀನನ್ನು ಭೂಮಾಲೀಕರ ಮೂಲಕ ಡೀನೋಟಿಫೈ ಮಾಡಿಸಿ ಅದನ್ನು ಅಗದಿ ಕಮ್ಮಿರೇಟಿಗೆ ತನ್ನ ಕೈವಶ ಮಾಡಿಕೊಂಡ ಅಶೋಕ್ ವಿರುದ್ಧ ಎಲ್ಲಾ ದಾಖಲೆಗಳನ್ನು ಕಲೆಹಾಕಿ ರಾಜ್ಯಪಾಲರಿಗೆ ದೂರು ಕೊಟ್ಟ ಆರ್‌ಪಿಸಿ ಲೇಔಟಿನ ಮೂಟೆ ಮಂಜ ಹೇಳಿಕೇಳಿ ಸೋಮಣ್ಣನ ಬಂಟ. ಅಲ್ಲಿಗೆ ಸೋಮಣ್ಣ ತನ್ನನ್ನು ಜೈಲಿಗೆ ಕಳಿಸಲು ಕತ್ತಿ ಮಸೆಯುತ್ತಿದ್ದಾನೆಂಬುದು ಅಶೋಕ್‌ಗೆ ಖಾತರಿಯಾಗಿತ್ತು.

ಇಷ್ಟಾಗಿದ್ದೇ ತಡ ಅಕ್ರಮ ಗಣಿಗಾರಿಕೆಯಲ್ಲಿ ಮಗನ ಮೂಲಕ ಸೋಮಣ್ಣನ ಕೈಚಳಕ ತೋರಿದ್ದಕ್ಕೆ ಅಶೋಕ್ ಬಳಿ ದಾಖಲೆಯಿತ್ತು. ಹೌಸಿಂಗ್ ಬೋರ್ಡ್ ಭೂಖರೀದಿಯಲ್ಲಿ ಸೋಮಣ್ಣ ಮಗನನ್ನು ಮುಂದೆ ಬಿಟ್ಟು ಕಮಿಷನ್ ಹೊಡೆದದ್ದು, ಸ್ಲಂ ಬೋರ್ಡ್ ಮನೆಗಳ ನಿರ್ಮಾಣದಲ್ಲಿ ಕಂಟ್ರಾಕ್ಟರ್ ರಾಧಾಕೃಷ್ಣನನ್ನು ಮುಂದೆ ಬಿಟ್ಟು ಸೋಮಣ್ಣ ಲೂಟಿಗೈದಿದ್ದು, ಹೌಸಿಂಗ್ ಬೋರ್ಡ್ ನಿವೇಶನಗಳ ವಿತರಣೆಯಲ್ಲಿ ನಡೆಸಿದ ಗೋಲ್‌ಮಾಲ್ ಮತ್ತು ಜ್ಞಾನಭಾರತಿಗೆ ಹೊಂದಿಕೊಂಡಂತೆ ತನ್ನ ವಿಎಸ್‌ಎಸ್ ಇಂಟರ್‌ನ್ಯಾಷನಲ್ ಸ್ಕೂಲಿಗೆಂದು ಸೋಮಣ್ಣ ಬಿಡಿಎ ಆಸ್ತಿ ದೋಚಿದ್ದು ಇತ್ಯಾದಿಗಳೆಲ್ಲವನ್ನೂ ಅಶೋಕ್ ದಾಖಲೆ ಸಮೇತ ಸಂಗ್ರಹಿಸಿಟ್ಟುಕೊಂಡರು. ಇದೆಲ್ಲಕ್ಕೂ ಮಿಗಿಲಾಗಿ ಬನ್ನಿಮಂಟಪ ಭೂಹಗರಣದಲ್ಲಿ ಸೋಮಣ್ಣ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದ. ಇದೆಲ್ಲವನ್ನೂ ಒಟ್ಟಿಗೆ ಸೇರಿಸಿ ಲೋಕಾಯುಕ್ತಕ್ಕೇನಾದರೂ ದೂರು ಕೊಟ್ಟಿದ್ದೇ ಆಗಿದ್ದರೆ ಯಡ್ಡಿ ಜೊತೆ ಸೋಮಣ್ಣ ಕೂಡ ಜೈಲು ಸೇರಬೇಕಿತ್ತು. ಇದು ಗೊತ್ತಾಗಿಯೇ ಸೋಮಣ್ಣ ಅಶೋಕ್ ಜೊತೆ ರಾಜಿ ನಟಿಸಿದ. ತನ್ನ ಛೇಲಾ ಮೂಟೆ ಮಂಜನ ಮೂಲಕ ಅಶೋಕ್ ವಿರುದ್ಧ ನೀಡಿದ ದೂರನ್ನು ವಾಪಸ್ ಪಡೆದು ಅದಕ್ಕೆ ಪ್ರತಿಯಾಗಿ ಅಶೋಕ್ ತನ್ನ ವಿರುದ್ಧದ ಯಾವ ದಾಖಲೆಯನ್ನೂ ಬಹಿರಂಗಪಡಿಸದಂತೆ ತಾತ್ಕಾಲಿಕ ಒಪ್ಪಂದ ಮಾಡಿಕೊಂಡ.

ಅಲ್ಲಿಗೆ ಎಲ್ಲವೂ ಸರಿಹೋಯಿತೆಂದೇ ಲೆಕ್ಕ ಹಾಕಿದ ಅಶೋಕ್ ನಿಟ್ಟುಸಿರಿಟ್ಟು ಸುಮ್ಮನಾದರೆ ಯಡ್ಡಿ ತಾನೇ ಹೇಗೆ ಕೈಕಟ್ಟಿ ಕೂರಲು ಸಾಧ್ಯ?

ಹಿರೇಮಠನ ಎಂಟ್ರಿ

ದೇವೇಗೌಡರ ಷಡ್ಯಂತ್ರದ ಫಲವಾಗಿ ತಾನು ಜೈಲುಪಾಲಾದ ಮೇಲೆ ತನ್ನ ಜೊತೆಗಿದ್ದೇ ಗೌಡರ ಜೊತೆ ಕೈಜೋಡಿಸಿದ ಅಶೋಕ್‌ನನ್ನು ಜೈಲು ಪಾಲಾಗುವಂತೆ ಮಾಡಲೇಬೇಕಲ್ಲವೆ?

ದೇವೇಗೌಡ, ಕುಮಾರಸ್ವಾಮಿ, ದತ್ತ ಮತ್ತು ಅಶೋಕ್ ಒಟ್ಟೊಟ್ಟಾಗಿಯೆ ತನ್ನ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆಂಬುದು ಅದ್ಹೇಗೆ ಯಡ್ಡಿಯ ತಲೆ ಹೊಕ್ಕಿತೊ ಗೊತ್ತಿಲ್ಲ, ಸೋಮಣ್ಣನ ಬಂಟ ಮೂಟೆ ಮಂಜು ಅಶೋಕ್ ವಿರುದ್ಧ ನೀಡಿದ ದೂರು ತಾತ್ಕಾಲಿಕವಾಗಿ ನಿಷ್ಕ್ರಿಯಗೊಂಡಿತ್ತಾದರೂ ಅದಕ್ಕಿನ್ನೂ ಜೀವವಿತ್ತು. ಇದನ್ನು ಜೈಲಲ್ಲಿ ಕೂತೇ ಲೆಕ್ಕ ಹಾಕಿದ ಯಡ್ಡಿ ಅಶೋಕ್ ವಿರುದ್ಧ ಮತ್ತೆ ಎರಡನೆ ಸುತ್ತಿನ ದಾಳಿಗೆ ಅಣಿಯಾಗುವಂತೆ ಸೋಮಣ್ಣನಿಗೆ ಸೂಚನೆ ಕೊಟ್ಟರು! ಜೊತೆಗೆ ರೇಣುಕಾಚಾರ್ಯ, ಶೋಭಾ ಕರಂದ್ಲಾಜೆ ಕೂಡ ಅಶೋಕ್ ವಿರುದ್ಧ ಸೋಮಣ್ಣನಿಗೆ ಸಾತು ಕೊಟ್ಟರು. ಯಡ್ಡಿಯ ಜೈಲುಕರ್ಮಕ್ಕೆ ಪ್ರತಿಕಾರವೋ, ಒಕ್ಕಲಿಗರ ಲಾಬಿ ವಿರುದ್ಧ ಲಿಂಗವಂತರ ಷಡ್ಯಂತ್ರವೋ, ಅನಂತ್ ಪಟಾಲಮ್ ವಿರುದ್ಧ ಯಡ್ಡಿ ಬಣದ ಆಕ್ರೋಶವೋ ಎಂಬಂತೆ ಸತ್ತೇಹೋಗಿದ್ದ ಅಶೋಕ್ ವಿರುದ್ಧ ಭೂಕಬಳಿ

ಪ್ರಕರಣಕ್ಕೆ ಸದ್ದಿಲ್ಲದೇ ಜೀವ ಬಂದಿದ್ದು ಜಯಕುಮಾರ್ ಹಿರೇಮಠನ ಮೂಲಕ.


ಮೂಲತಃ ಸಂತೆಬೆನ್ನೂರಿನ ಜಯಕುಮಾರ್ ಹಿರೇಮಠ್ ಸದ್ಯ ಅಶೋಕ್ ಭೂಕಬಳಿಕೆ ವಿರುದ್ಧದ ಪಿರ್ಯಾದಿ. ಒಂದಾನೊಂದು ಕಾಲಕ್ಕೆ ಈತ ಕೂಡ ಬಿಜೆಪಿ ಕಾರ್ಯಕರ್ತನಾಗಿದ್ದ. ಕ್ರಮೇಣ ಲಿಕ್ಕರ್ ದೊರೆ ಆದಿಕೇಶವುಲು ಬಳಿ ಕೆಲಸಕ್ಕೆ ಸೇರಿಕೊಂಡ. ಜಾತಿಯಲ್ಲಿ ಲಿಂಗಾಯತ. ಪಾಪರೆಡ್ಡಿ ಪಾಳ್ಯದ ರಾಘವೇಂದ್ರ ಸ್ವಾಮಿ ಮಠದಲ್ಲಿ ಪುಜಾರಿಕೆ ಮಾಡಿಕೊಂಡಿದ್ದಾನೆ. ಅದು ಹೇಗೆ ಈತನಿಗೂ ಅಶೋಕ್ ವಿರುದ್ಧದ ದೂರಿಗೂ ಗಂಟು ಬಿತ್ತೋ ಗೊತ್ತಿಲ್ಲ. ಯಡ್ಡಿ ಪಾಳಯಕ್ಕೆ ಈತ ಚಿರಪರಿಚಿತನೆಂಬುದೂ ಅಷ್ಟೇ ಸತ್ಯ. ಸೋಮಣ್ಣನ ಬಂಟ ಮೂಟೆ ಮಂಜ ತಾನು ಅಶೋಕ್ ವಿರುದ್ಧ ದಾಖಲಿಸಿದ್ದ ದೂರಿಗೆ ಉಲ್ಟಾ ಹೊಡೆದ ಮೇಲೆ ಅದೇ ದೂರನ್ನಿಟ್ಟುಕೊಂಡು ಈಗ ಹಿರೇಮಠ್ ಎಂಟ್ರಿ ಕೊಟ್ಟಿದ್ದಾನೆ. ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ಮೂಟೆ ಮಂಜನಿಂದ ಬಚಾವಾಗಿ ನಿಟ್ಟುಸಿರಿಡುವ ಮೊದಲೇ ಅಶೋಕ್‌ಗೆ ಹಿರೇಮಠನ ಉರುಳು ಬಿದ್ದಿದೆ.

ಇದೇ ನವೆಂಬರ್ 21 ಕ್ಕೆ ಲೋಕಾಯುಕ್ತ ನ್ಯಾಯಾಧೀಶ ಸುಧೀಂದ್ರ ರಾವ್ ಕೋರ್ಟಿನಲ್ಲಿ ಅಶೋಕ್ ಭೂಕಬಳಿಕೆ ವಿಚಾರಣೆಗೆ ಬರಲಿದೆ. ಈಗಾಗಲೇ ಎಫ್ಐಆರ್ ದಾಖಲಾಗಿದೆ. ಜೊತೆಗೆ ಅಶೋಕ್ ಬಲಗೈ ಬಂಟನೆಂದೇ ಚಾಲ್ತಿಯಲ್ಲಿರುವ ದಾಸರಹಳ್ಳಿ ಶಾಸಕ ಮುನಿರಾಜು ವಿರುದ್ಧ ಮತ್ತೊಂದು ಭೂಕಬಳಿಕೆಯ ದೂರು ದಾಖಲಾಗಿದೆ. ಲೋಕಾಯುಕ್ತ ಎಸ್‌ಪಿ ಶಿವಶಂಕರ್ ಏನೇ ಕಾಲಹರಣ ಮಾಡಲು ಯತ್ನಿಸಿದರೂ ಅದಕ್ಕೆ ಕೋರ್ಟು ಒಪ್ಪುತ್ತಿಲ್ಲ. ಗೃಹಮಂತ್ರಿಯೊಬ್ಬ ಜೈಲುಪಾಲಾಗುವ ಎಲ್ಲಾ ಸೂಚನೆಗಳೂ ನಿಚ್ಚಳಗೊಂಡಿರುವುದು ಒಂದೆಡೆಯಾದರೆ ಮತ್ತೊಂದೆಡೆ ಲಿಂಗಾಯತ ಲಾಬಿಯ ವಿರುದ್ಧದ ಒಕ್ಕಲಿಗರ ದಾಳಿಯೂ ತೀವ್ರಗೊಂಡಿದೆ.


ಶೈಲಜಾ ಸೋಮಣ್ಣ?

ಅಶೋಕ್ ಜೈಲು ಪಾಲಾದರೆ ತಾನೇ ಬೆಂಗಳೂರಿನ ಉಸ್ತುವಾರಿ ಮಂತ್ರಿಯಾಗಬಹುದೆಂಬ ಸೋಮಣ್ಣನ ದುರಾಶೆ ಕೈಗೂಡುತ್ತೋ ಇಲ್ಲವೋ ಗೊತ್ತಿಲ್ಲ. ಇದರ ವಾಸನೆ ಹಿಡಿದೇ ಅಶೋಕ್ ಬೆಂಬಲಿತ 60 ಕ್ಕೂ ಅಧಿಕ ಬಿಬಿಎಂಪಿಯ ಕೌನ್ಸಿಲರ್‌ಗಳು ಯಾವುದೇ ಕಾರಣಕ್ಕೂ ಸೋಮಣ್ಣನನ್ನು ಕಟ್ಟಾ ಜಾಗಕ್ಕೆ ಬೆಂಗಳೂರು ಉಸ್ತುವಾರಿ ಮಂತ್ರಿಯನ್ನಾಗಿ ನೇಮಿಸಕೂಡದು ಎಂದು ರಾಜ್ಯಾಧ್ಯಕ್ಷ ಈಶ್ವರಪ್ಪನವರಿಗೆ ಮನವಿ ಸಲ್ಲಿಸಿದ್ದಾರೆ. ಬಿಜೆಪಿಯ ವಕೀಲರ ಘಟಕದಲ್ಲೇ ಸ್ಪಷ್ಟವಾಗಿ ಲಿಂಗಾಯತರು ಮತ್ತು ಒಕ್ಕಲಿಗರ ಪ್ರತ್ಯೇಕ ಗುಂಪುಗಳಾಗಿವೆ. ಆರೆಸ್ಸೆಸ್ ನಾಯಕರ ಪೈಕಿ ಮೈ.ಚ. ಜಯದೇವನ ಹೊರತಾಗಿ ಮಿಕ್ಕೆಲ್ಲರೂ ಯಡ್ಡಿ ವಿರುದ್ಧ ತಿರುಗಿಬಿದ್ದಿದ್ದಾರೆ. ಬೆಂಗಳೂರಿನ ಶಾಸಕರ ಪೈಕಿ ನಂದೀಶ್ ರೆಡ್ಡಿ, ಯಲಹಂಕ ವಿಶ್ವನಾಥ್ ಮತ್ತು ರಾಜರಾಜೇಶ್ವರಿ ನಗರದ ಶ್ರೀನಿವಾಸ್ ಯಡ್ಡಿ ಗುಂಪಾದರೆ ಸತೀಶ್ ರೆಡ್ಡಿ, ದಾಸರಹಳ್ಳಿ ಮುನಿರಾಜು, ಕೃಷ್ಣಪ್ಪ, ಅಶ್ವತ್ಥನಾರಾಯಣ, ಲಿಂಬಾವಳಿ ಮತ್ತು ರಘು ಅಶೋಕ್ ಜೊತೆಗಿದ್ದಾರೆ.

ಈ ವರದಿ ಅಚ್ಚಿಗೆ ಹೋಗುವ ಕೊನೇ ಗಳಿಗೆಯಲ್ಲಿ ಬಂದ ಮಾಹಿತಿಯಂತೆ ಸೋಮಣ್ಣನ ಪತ್ನಿ ಶೈಲಜಾ ಸೋಮಣ್ಣ ಮತ್ತು ಯಡ್ಡಿಯನ್ನು ಆರೋಪಿಗಳನ್ನಾಗಿಸಿ ಮತ್ತೊಂದು ಡಿನೋಟಿಫಿಕೇಷನ್ ವಿರುದ್ಧ ಸಾಮಾಜಿಕ ಕಾರ್ಯಕರ್ತ ರವಿಕೃಷ್ಣ ರೆಡ್ಡಿ ದೂರು ದಾಖಲಿಸಿದ್ದಾರೆ. ಅದು ನಾಗದೇವನಹಳ್ಳಿಯಲ್ಲಿರುವ ಸೋಮಣ್ಣನ ವಿಎಸ್‌ಎಸ್ ಇಂಟರ್‌ನ್ಯಾಷನಲ್ ಸ್ಕೂಲಿಗಾಗಿ ಯಡ್ಡಿ ಡೀನೋಟಿಫೈ ಮಾಡಿಕೊಟ್ಟ 22 ಗುಂಟೆ ಬಿಡಿಎ ಆಸ್ತಿಯ ಕರ್ಮಕಾಂಡ. ಇದರ ಬೆನ್ನಲ್ಲೇ ಇನ್ನೂ ಮೂರ್‍ನಾಲ್ಕು ದೂರುಗಳು ಸೋಮಣ್ಣನ ವಿರುದ್ಧ ದಾಖಲಾಗಬಹುದು. ಸಾಲದ್ದಕ್ಕೆ ಅಶೋಕ್ ವಿರುದ್ಧ ಇನ್ನೂ ಒಂದೆರಡು ಭೂಕಬಳಿಕೆ ದೂರುಗಳೂ ದಾಖಲಾದೀತು. ಮೇಲುನೋಟಕ್ಕಿದು ಬೆಂಗಳೂರು ಉಸ್ತುವಾರಿಗಾಗಿ ಸೋಮಣ್ಣ ಮತ್ತು ಅಶೋಕ್ ಬಣಗಳು ನಡೆಸುತ್ತಿರುವ ಜಟಾಪಟಿಯಂತೆ ಕಂಡರೂ ವಾಸ್ತವದಲ್ಲಿದು ಲಿಂಗಾಯತ ಮತ್ತು ಒಕ್ಕಲಿಗರ ಕಚ್ಚಾಟವೆ.


ರವಿಕೃಷ್ಣ ರೆಡ್ಡಿ

ಅಂತಿಮವಾಗಿ ಯಾರು ಯಾರನ್ನು ಜೈಲಿಗೆ ಹಾಕುತ್ತಾರೋ, ಅಥವಾ ಇಬ್ಬರೂ ಒಟ್ಟೊಟ್ಟಿಗೆ ಜೈಲುಪಾಲಾಗುತ್ತಾರೋ ಎಂಬುದಷ್ಟೇ ಉಳಿಕೆಯ ಪ್ರಶ್ನೆ.



ಮದುವೆಯಲ್ಲೂ ಯಡ್ಡಿ ರಾಜಕೀಯ

ಹುಬ್ಬಳ್ಳಿಯ ಗೋಕುಲ್ ಗಾರ್ಡನ್‌ನಲ್ಲಿ ಮೊನ್ನೆ ನಡೆದ ಸಮಾರಂಭವೊಂದು ತೋರಿಕೆಗೆ; ಒಂದು ಸಾಂಪ್ರದಾಯಿಕ ಮದುವೆ ಆಗಿದ್ದರೂ ವಾಸ್ತವವಾಗಿ ಅದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ರಾಜಕೀಯ ಕಾರ್ಯಕ್ರಮದಂತಿತ್ತು.

ನೆನಪಿದೆಯೇ, ನಮ್ಮ ಜುಲೈ 6, 2011ರ ಸಂಚಿಕೆಯಲ್ಲಿ ಯಡ್ಡಿಯ ಜಾತಿ ಬುದ್ಧಿಯ ಬಗ್ಗೆ ಒಂದು ವರದಿ ಪ್ರಕಟಿಸಿದ್ದೆವು. ಆ ವರದಿಯಲ್ಲಿ ಗಾಣಿಗ ಲಿಂಗಾಯತ ಸಮುದಾಯಕ್ಕೆ ಸೇರಿರುವ ಯಡ್ಡಿ ತನ್ನ ನಾದನಿಯ ಮಗ ಮತ್ತು ಪಂಚಮಸಾಲಿ ಚಿಕ್ಕನ ಗೌಡನ ಮಗಳ ನಡುವೆ ಮದುವೆ ಮಾಡಿಸುವ ಮೂಲಕ ಸಂಖ್ಯಾ ಬಲ ಹೊಂದಿರುವ ಪಂಚಮಸಾಲಿ ಲಿಂಗಾಯತರ ಬೆಂಬಲವನ್ನು ಪಡೆಯಲು ಸಂಚು ರೂಪಿಸಿದ್ದಾನೆ ಎಂದಿದ್ದೆವು. ನಾವು ಅಂದು ಊಹಿಸಿದ್ದು ಮೊನ್ನೆ ನಿಜವಾಗಿದೆ.

ನಿಗೂಢವಾಗಿ ಸಾವನ್ನಪ್ಪಿದ ಯಡ್ಡಿಯ ಹೆಂಡತಿ ಮೈತ್ರಾದೇವಿ ಅವರ ತಂಗಿಯ ಹೆಸರು ಚಂದ್ರಪ್ರಭಾ. ಈ ಚಂದ್ರಪ್ರಭಾ ಮತ್ತಾಕೆಯ ಗಂಡ ಹೊನ್ನಪ್ಪನ ಮಗನ ಹೆಸರು ನಿತಿಶ್, ಈ ನಿತಿಶ್ ಯಡ್ಡಿ ಶಿವಮೊಗ್ಗೆಯಲ್ಲಿ ನಡೆಸುತ್ತಿರುವ ಮೈತ್ರಾದೇವಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡುತ್ತಿದ್ದಾನೆ. ವರಸೆಯಲ್ಲಿ ಈ ನಿತಿಶ್ ಯಡ್ಡಿಗೆ ಮಗನಾಗಬೇಕು.

ಉತ್ತರ ಕರ್ನಾಟಕದಲ್ಲಿ ಪಂಚಮಸಾಲಿಗಳು ಬಲಾಢ್ಯರಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ ಈ ಲಿಂಗಾಯತ ಜಾತಿಯ ಪಂಚಮಸಾಲಿ ಪಂಗಡದ ಸಂಖ್ಯೆ ಎಪ್ಪತ್ತೈದು ಲಕ್ಷಕ್ಕೂ ಅಧಿಕ. ಹೀಗಿರುವಾಗ ವರಸೆಯಲ್ಲಿ ತನ್ನ ಮಗನಾದ ನಿತಿಶ್‌ಗೆ ಆ ಸಮುದಾಯದೊಂದಿಗೆ ನಂಟಸ್ಥಿಕೆ ಬೆಳೆಸಿಕೊಂಡರೆ ನಾಳೆ ಅದರಿಂದ ತನಗೆ ರಾಜಕೀಯ ಲಾಭವೂ ಆಗುತ್ತದೆ ಎಂದು ಯಡ್ಡಿ ಲೆಕ್ಕಹಾಕಿದ. ಆಗ ಆತನ ಕಣ್ಣಿಗೆ ಬಿದ್ದದ್ದು ಧಾರವಾಡದ ಕುಂದಗೋಳದ ಬಿಜೆಪಿ ಶಾಸಕ ಎಸ್.ಐ. ಚಿಕ್ಕನ ಗೌಡ. ಹೇಳಿ ಕೇಳಿ ಈ ಚಿಕ್ಕನ ಗೌಡರೂ ಯಡ್ಡಿಯಂತೆಯೇ ರಾಜಕೀಯ ವ್ಯಕ್ತಿ. ಬಿಜೆಪಿ ಪಕ್ಷದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿರುವ, ಬರುವ ಚುನಾವಣೆಯಲ್ಲಿ ತನಗೆ ಟಿಕೆಟ್ ಗ್ಯಾರಂಟಿ ಮಾಡಿಕೊಳ್ಳಲು ಹವಣಿಸುತ್ತಿದ್ದ ಚಿಕ್ಕನ ಗೌಡನಿಗೆ ನಂದಾ ಎಂಬ ಏಕೈಕ ಪುತ್ರಿ ಇದ್ದಾಳೆ. ಯಡ್ಡಿಯ ಆದೇಶದಂತೆ ತನ್ನ ಮಗಳನ್ನು ನಿತಿಶ್‌ಗೆ ಕೊಟ್ಟು ಮದುವೆ ಮಾಡಿದರೆ ತನಗೂ ಲಾಭ ಎಂದು ಚಿಕ್ಕನ ಗೌಡ ಲೆಕ್ಕಹಾಕಿದ್ದರೂ ಅಚ್ಚರಿ ಇಲ್ಲ. ಹೀಗಾಗಿ ಕಳೆದ ಜೂನ್ ತಿಂಗಳಲ್ಲಿ ನಿತಿಶ್ ಮತ್ತು ನಂದಾಳ ನಿಶ್ಚಿತಾರ್ಥ ಕಾರ್ಯಕ್ರಮ ನಡೆದಿತ್ತು.

ಆದರೆ ಯಡ್ಡಿಯ ನಸೀಬು ನೆಟ್ಟಗಿರಲಿಲ್ಲ. ಈ ನಿಶ್ಚಿತಾರ್ಥ ನಡೆದ ಕೆಲ ವಾರಗಳಲ್ಲೇ ಆತ ತನ್ನ ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡ. ಅದೂ ಸಾಲದೆಂಬಂತೆ ನ್ಯಾಯಾಲಯ



ಮದುವೆ ಮನೆಗೆ ಮೆರವಣಿಗೆಯಲ್ಲಿ ಹೋದ ಯಡ್ಡಿ....

ಜಾಮೀನು ಕೊಡುವ ತನಕ ಪರಪ್ಪನ ಅಗ್ರಹಾರ ಜೈಲಿಯಲ್ಲಿ 24 ದಿನಗಳ ಕಾಲ ಕಂಬಿ ಎಣಿಸಿದ. ಕೊನೆಗೂ ಜೈಲಿನಿಂದ ತಾತ್ಕಾಲಿಕವಾಗಿ ಬಿಡುಗಡೆಗೊಂಡ ಯಡ್ಡಿ ಮೊನ್ನೆ ನವೆಂಬರ್ 13ರಂದು ನಡೆದ ನಿತಿಶ್–ನಂದಾಳ ಮದುವೆಗೆ ಹಾಜರಾದ. ಅದೂ ಯಾವರೀತಿ ಹಾಜರಾದ ಎಂದು ನೋಡಿದರೆ ಆತ ತನ್ನ ಮಗನ ಮದುವೆ ಸಮಾರಂಭಕ್ಕೆ ಹೋದನೋ ಅಥವಾ ತನ್ನ ರಾಜಕೀಯ ಬಲ ಪ್ರದರ್ಶಿಸುವ ರಾಜಕೀಯ ಕಾರ್ಯಕ್ರಮಕ್ಕೆ ಹೋದನೋ ಎಂಬ ಗುಮಾನಿ ಜನರಲ್ಲಿ ಮೂಡಿತು.

ಯಡ್ಡಿಯನ್ನು ಸ್ವಾಗತಿಸಲು ಬೀಗ ಚಿಕ್ಕನ ಗೌಡ ವಿಮಾನ ನಿಲ್ದಾಣದಲ್ಲಿ ದೊಡ್ಡ ಏರ್ಪಾಟನ್ನೇ ಮಾಡಿದ್ದ. ಯಡ್ಡಿ ತಲೆ ಮೇಲೆ ಹೂ ತೂರಲು ಮಹಿಳೆಯರು, ಫ್ಲೆಕಾರ್ಡ್ ಹಿಡಿದು ಸ್ವಾಗತಿಸಲು ಯುವಕರು, ಜೈಕಾರ ಕೂಗಲು ಪುಂಡರು ... ಎಲ್ಲರೂ ವಿಮಾನ ನಿಲ್ದಾಣದಲ್ಲಿ ಹಾಜರಾಗಿದ್ದರು.

ಅಷ್ಟೇ ಅಲ್ಲ, ಯಡ್ಡಿಯ ಬಲಗೈ ಬಂಟ ಬಸವರಾಜ್ ಬೊಮ್ಮಾಯಿ, ಎಂಎಲ್‌ಸಿ ಮೋಹನ ಲಿಂಬಿಕಾಯಿ, ದೇವರಾಜ್ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷ ಅಶೋಕ್ ಕಾಟವೆ, ಸಿ.ಎಂ.ನಿಂಬಣ್ಣವರ, ಶಿಗ್ಗಾಂವಿಯ ಬಸು ಬೇವಿನ ಮರದ, ಸಚಿವ ಸಿ.ಎಂ. ಉದಾಸಿ ತರಹದ ರಾಜಕೀಯ ನಾಯಕರೂ ನಿಲ್ದಾಣದಲ್ಲಿ ಹಾಜರಾಗಿದ್ದರು. ಬಸು ಮತ್ತು ಚಿಕ್ಕನ ಗೌಡ ಫತ್ವಾ ಹೊರಡಿಸಿ ಕುಂದಗೋಳ ಮತ್ತು ಕಲಘಟಗಿ ವಿಧಾನ ಸಭಾ ಕ್ಷೇತ್ರಗಳಿಂದ ಜನರ ದಿಂಡನ್ನೇ ಕರೆಸಿದ್ದರು.

ವಿಮಾನ ನಿಲ್ದಾಣಕ್ಕೆ ಆಗಮಿಸಿದ ಯಡ್ಡಿ ಅಲ್ಲಿಂದ ಕಾರಿನಲ್ಲಿ ಮದುವೆ ನಡೆಯುತ್ತಿದ್ದ ಗೋಕುಲ ಗಾರ್ಡನ್ಸ್‌ಗೆ ಹೋಗಲಿಲ್ಲ, ಬದಲಾಗಿ ಬಿಜೆಪಿಯ ಬಾವುಟಗಳೊಂದಿಗೆ ಶೃಂಗಾರಗೊಂಡಿದ್ದ ತೆರೆದಿದ್ದ ವಾಹನದಲ್ಲಿ ನಿಂತು ರಾಜಕೀಯ ಸಮಾರಂಭಕ್ಕೆ ಹೋಗುವಂತೆ ಮೆರವಣಿಗೆಯಲ್ಲಿ ಹೋದರು!

ಅಚ್ಚರಿಯ ಸಂಗತಿ ಯಾವುದೆಂದರೆ ಈ ಮೆರವಣಿಗೆಯಲ್ಲಿ ಭಾಗವಹಿಸುವುದಿಲ್ಲ ಎಂದಿದ್ದ ಹಿರಿಯ ಸಚಿವ ಜಗದೀಶ್ ಶೆಟ್ಟರ್ ಮತ್ತು ಸಂಸದ ಪ್ರಹ್ಲಾದ್ ಜೋಷಿ ಕೂಡ ಈ ಮೆರವಣಿಗೆಯಲ್ಲಿ ಹಲ್ಲು ಕಿಸಿಯುತ್ತಾ ತಮ್ಮ ವೈರಿ ಯಡ್ಡಿ ಜೊತೆ ಹೋಗಿದ್ದು, ಶೆಟ್ಟರ್ ಮತ್ತು ಜೋಷಿಯನ್ನು ನಂಬಿದ್ದ ಶಾಸಕ ಸಂಕರ ಪಾಟೀಲ್ ಮುನ್ನೇನಕೊಪ್ಪ, ವೀರಭದ್ರ ಹಾಲಹರವಿ ಮತ್ತು ಸೀಮಾ ಮಸೂತಿಗಳಿಗೆ ಏನು ಮಾಡುವುದೆಂದು ಗೊತ್ತಾಗದೆ ಪಿಚ್ಚಾದರು.

ಇನ್ನು ಮದುವೆ ನಡೆಯುತ್ತಿದ್ದ ಸ್ಥಳದಲ್ಲಂತೂ ರಾಜಕೀಯ ಸಮಾರಂಭವೊಂದು ನಡೆದೇ ಹೋಯಿತು. ಇದೊಂದು ಮದುವೆ ಸಮಾರಂಭ ಎಂಬುದನ್ನೇ ಮರೆತ ಯಡ್ಡಿ ಮೈಕು ಹಿಡಿದು ಭಾಷಣ ಕುಟ್ಟಿದರು. ಅದನ್ನು ಕೇಳಿಸಿಕೊಂಡು ಬಿಜೆಪಿಯ ಹಲವಾರು ಸಚಿವರು, ಶಾಸಕರು, ಸಂಸದರು ಮತ್ತು ಇತರೆ ಪುಡಿ ನಾಯಕರಲ್ಲದೆ, ಹಾಲಿ ಮುಖ್ಯಮಂತ್ರಿ ಸದಾನಂದ ಗೌಡ ಕೂಡ ಕೋಲೆ ಬಸವರಂತೆ ತಲೆ ಅಲ್ಲಾಡಿಸಿದರು.

ಇದು ಸಾಲದೆಂಬಂತೆ ಬಾಳೆಹೊನ್ನೂರಿನ ರಂಭಾಪುರಿ ಸ್ವಾಮೀಜಿ ಕೂಡ ರಾಜಕೀಯ ಭಾಷಣ ಮಾಡಿದರು. ತಾನು ಧರ್ಮ ಬೋಧನೆ, ಸಂಸ್ಕಾರ, ಸದಾಚಾರಗಳನ್ನು ಜನರಿಗೆ ತಿಳಿಸಬೇಕೆಂಬುದನ್ನೇ ಮರೆತ ರಂಭಾಪುರಿ ಸ್ವಾಮಿ ಮೈಕು ಹಿಡಿದು "ಯಡಿಯೂರಪ್ಪನವರೆ, ನೀವೇ ಜನ ನಾಯಕರು, ಮುಂದೆ ನೀವೇ ಮುಖ್ಯಮಂತ್ರಿಗಳು" ಎಂದೆಲ್ಲಾ ಭೋಪರಾಕ್ ಹಾಕಿದರು. ಅಷ್ಟೇ ಅಲ್ಲ, ಯಡ್ಡಿ ಹಾಗು ಶೆಟ್ಟರ್ ಪಕ್ಕಾ ವೈರಿಗಳಾದರೂ "ಇವರಿಬ್ಬರೂ ಲವ ಕುಶರಿದ್ದಂತೆ" ಎಂದು ರಂಭಾಪುರಿ ಸ್ವಾಮಿಗಳು ಹೇಳಿದಾಗ ಜನರಿಗೆ ಎಲ್ಲಿಂದ ನಗಬೇಕು ಎಂದೇ ಅರ್ಥವಾಗಲಿಲ್ಲ.


ಇದೆಲ್ಲಕ್ಕಿಂತ ಮಜವಾಗಿದ್ದ ಸಂಗತಿ ಯಾವುದೆಂದರೆ ಯಡ್ಡಿಯನ್ನು ಸ್ವಾಗತಿಸಲು ಬಿಜೆಪಿ ನಾಯಕರ ಮತ್ತು ಜನರ ದಂಡೇ ನೆರೆದಿದ್ದರೆ, ಹಾಲಿ ಮುಖ್ಯಮಂತ್ರಿ ಸದಾನಂದ ಗೌಡರು ಬಂದಾಗ, ಓರ್ವ ಬಸು ಬೊಮ್ಮಾಯಿ ಹೊರತು ವಿಮಾನ ನಿಲ್ದಾಣದಲ್ಲಿ ಯಾರೂ ಇರಲಿಲ್ಲ!!

ಹೀಗೆ ಯಡಿಯೂರಪ್ಪ ಒಂದು ಖಾಸಗಿ ಮದುವೆ ಸಮಾರಂಭವನ್ನು ರಾಜಕೀಯ ಸಭೆಯಾಗಿ ಪರಿವರ್ತಿಸಿ ತನ್ನ ಬಲಾಬಲ ಪ್ರದರ್ಶಿಸಿದ್ದು ಹೇಸಿಗೆ ಹುಟ್ಟಿಸುವಂತಿತ್ತು.

• ಹುಬ್ಬಳ್ಳಿಯಾಂವ


ಸಂತೋಷ್ ಹೆಗ್ಡೆ

ಪ್ರಾಮಾಣಿಕ ಹೆಗ್ಡೆ ವಿರುದ್ಧ ಭ್ರಷ್ಟರ ಯುದ್ಧ!


ವಿಶ್ವೇಶ್ವರ ಭಟ್

ಬಿಜೆಪಿಯ ಯಡಿಯೂರಪ್ಪ, ಜೆಡಿಎಸ್‌ನ ಕುಮಾರಸ್ವಾಮಿ, ಪತ್ರಕರ್ತರಾದ ವಿಶ್ವೇಶ್ವರ ಭಟ್ ಮುಂತಾದವರು ಸಂತೋಷ್ ಹೆಗ್ಡೆಯವರನ್ನು ಟೀಕಿಸಲು ನಾ ಮುಂದು ತಾ ಮುಂದು ಎಂದು ರೇಸಿಗೆ ಬಿದ್ದಿರುವುದು ನಿಜಕ್ಕೂ ಆಶ್ಚರ್ಯ ಮೂಡಿಸುತ್ತಿದೆ 'ಲೋಕಾಯುಕ್ತದಲ್ಲೂ ಭ್ರಷ್ಟರಿದ್ದಾರೆ' ಎಂಬ ಮಧುಕರ ಶೆಟ್ಟರ ಮಾತನ್ನು 'ಸಂತೋಷ್ ಹೆಗ್ಡೆಯೂ ಭ್ರಷ್ಟ' ಎಂಬಂತೆ ತಿರುಚಿ ದೊಡ್ಡಮಟ್ಟದ ಅಪಪ್ರಚಾರ ಪ್ರಾರಂಭಿಸಲಾಗಿದೆ. ಇದು ಯಾಕೆಂದರೆ ಇವರೆಲ್ಲರ ಭ್ರಷ್ಟಾಚಾರವನ್ನು ಸಂತೋಷ್ ಹೆಗ್ಡೆಯವರ ಟೀಮ್ ಪತ್ತೆ ಹಚ್ಚಿ ವರದಿ ನೀಡಿದೆಯಲ್ಲ ಅದಕ್ಕೆ!

• ಪಾರ್ವತೀಶ


ಮಧುಕರ್

ಈ ಯುದ್ಧತಂತ್ರ ಸಿಂಪಲ್ಲಾಗಿದೆ.

ಆದರೆ ಅಷ್ಟೇ ಜಾಣತನದಿಂದಲೂ ಕೂಡಿದೆ.

ಸಂತೋಷ್ ಹೆಗ್ಡೆ ಲೋಕಾಯುಕ್ತರಾಗಿದ್ದಾಗ ಸಾಕ್ಷಿ ಪುರಾವೆ ಸಮೇತ ಸಿಕ್ಕಿಬಿದ್ದಿರುವ ಭ್ರಷ್ಟ ರಾಜಕಾರಣಿಗಳಿಗೆ ಹಾಗೂ ಕೆಲವು ಪತ್ರಕರ್ತರ ಕೈಗೆ ಈಗ ಹೊಸದೊಂದು ಅಸ್ತ್ರ ಸಿಕ್ಕಿದೆ.

ಮಧುಕರ ಶೆಟ್ಟಿ ಎಂಬ ಅಸ್ತ್ರ ಅದು!

'ಲೋಕಾಯುಕ್ತ ಸಂಸ್ಥೆಯಲ್ಲೂ ಭ್ರಷ್ಟರಿದ್ದಾರೆ' ಎಂದು ಮಧುಕರ ಶೆಟ್ಟರು ನೀಡಿದ್ದ ಬಿಡುಬೀಸು ಹೇಳಿಕೆಯೊಂದನ್ನೇ ಬಿಗಿಯಾಗಿ ಹಿಡಿದು ಸಂತೋಷ್ ಹೆಗ್ಡೆಯವರನ್ನೇ ಬಲಿಪಶುವಾಗಿಸಲು ಶಿಖಂಡಿ ಯುದ್ಧವೊಂದಕ್ಕೆ ಚಾಲನೆ ನೀಡಲಾಗಿದೆ.



ಬಿಜೆಪಿಯ ಯಡಿಯೂರಪ್ಪ, ಜೆಡಿಎಸ್‌ನ ಕುಮಾರಸ್ವಾಮಿ, ಪತ್ರಕರ್ತರಾದ ವಿಶ್ವೇಶ್ವರ ಭಟ್ ಮುಂತಾದವರು ಸಂತೋಷ್ ಹೆಗ್ಡೆಯವರನ್ನು ಟೀಕಿಸಲು ನಾ ಮುಂದು ತಾ ಮುಂದು ಎಂದು ರೇಸಿಗೆ ಬಿದ್ದಿರುವುದು ನಿಜಕ್ಕೂ ಆಶ್ಚರ್ಯ ಮೂಡಿಸುತ್ತಿದೆ.

'ಲೋಕಾಯುಕ್ತದಲ್ಲೂ ಭ್ರಷ್ಟರಿದ್ದಾರೆ' ಎಂಬ ಮಧುಕರ ಶೆಟ್ಟರ ಮಾತನ್ನು 'ಸಂತೋಷ್ ಹೆಗ್ಡೆಯೂ ಭ್ರಷ್ಟ' ಎಂಬಂತೆ ತಿರುಚಿ ದೊಡ್ಡಮಟ್ಟದ ಅಪಪ್ರಚಾರ ಪ್ರಾರಂಭಿಸಲಾಗಿದೆ.

ಇದು ಯಾಕೆಂದರೆ ಇವರೆಲ್ಲರ ಭ್ರಷ್ಟಾಚಾರವನ್ನು ಸಂತೋಷ್ ಹೆಗ್ಡೆಯವರ ಟೀಮ್ ಪತ್ತೆ ಹಚ್ಚಿ ವರದಿ ನೀಡಿದೆಯಲ್ಲ ಅದಕ್ಕೆ!

ಲೋಕಾಯುಕ್ತಕ್ಕೆ ಬೀಗ-ಬಿಜೆಪಿ ಸ್ಕೆಚ್

ಈ ಬಿಜೆಪಿಗಳು ನಿಜಕ್ಕೂ ಎರಡು ನಾಲಿಗೆಯ ಜನ!

ಒಬ್ಬ ಅಡ್ವಾಣಿ ಭ್ರಷ್ಟಾಚಾರದ ವಿರುದ್ಧ ಜನಚೇತನ ರಥಯಾತ್ರೆ ಮಾಡುತ್ತಾರೆ. ಅದೇ ಬಿಜೆಪಿಗೆ ಸೇರಿದ ಯಡ್ಡಿ, ಈಶ್ವರಪ್ಪ ಭ್ರಷ್ಟಾಚಾರಿಗಳನ್ನು ಸದೆಬಡಿಯುತ್ತಿರುವ ಲೋಕಾಯುಕ್ತ ಸಂಸ್ಥೆಗೆ ಬೀಗ ಹಾಕಲು ರೆಡಿಯಾಗುತ್ತಾರೆ. ಮಗದೊಂದೆಡೆ ಆರೆಸ್ಸೆಸ್‌ನ ಐನಾತಿಗಳು ಅಣ್ಣಾ ಹಜಾರೆ ಗುಂಪಿನಲ್ಲಿ ತೂರಿಕೊಂಡು ಜನ ಲೋಕಪಾಲ್ ಮಸೂದೆ ಜಾರಿಗೆ ಜಗಳ ಶುರುಮಾಡುತ್ತಾರೆ.

ಇವರ ಗದ್ದಲದ ನಡುವೆ ಕನ್ನಡಪ್ರಭ ದಿನಪತ್ರಿಕೆಯು ಲೋಕಾಯುಕ್ತರ ವಿರುದ್ಧ ಭ್ರಷ್ಟರಾಜಕಾರಣಿಗಳನ್ನೇ ಪ್ರಚೋದಿಸಿ ಎತ್ತಿಕಟ್ಟುತ್ತಿದೆ ಮತ್ತು ಈ ಷಡ್ಯಂತ್ರಕ್ಕೆ ಉತ್ತಮ ಲೋಕಾಯುಕ್ತ ಆಫೀಸರ್ ಎನಿಸಿಕೊಂಡಿದ್ದ ಮಧುಕರ್ ಶೆಟ್ಟಿ 'ಹರಕೆಯ ಕುರಿ'ಯಂತೆ ಬಳಕೆಯಾಗಿದ್ದಾರೆ.

ಇವರೆಲ್ಲರ ವಿರುದ್ಧ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಮತ್ತೆ ಯುದ್ಧ ಘೋಷಿಸಿದ್ದಾರೆ.

ಹಾಗೆ ನೋಡಿದರೆ ಸಂತೋಷ್ ಹೆಗ್ಡೆ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿಯಿಂದ ಹಿಡಿದು ಖಾಯಂ ಜೋಕರ್ ರೇಣುಕಾಚಾರಿತನಕ ಎಲ್ಲರೂ ಬಯ್ಯಾಡುವವರೇ ಆಗಿದ್ದಾರೆ. ಆದರೆ ಇದು ನಾಟಕೀಯ ತಿರುವು ಪಡೆದದ್ದು ಮಾತ್ರ ಮಾಜಿ ಲೋಕಾಯುಕ್ತ ಎಸ್‌ಪಿ ಮಧುಕರ ಶೆಟ್ಟಿಯಿಂದ.

ವಿಭಟ್ಟರ ಪಿತೂರಿ

ಮೊನ್ನೆ ನವೆಂಬರ್ 13ರಂದು ಭಾನುವಾರದ ಕನ್ನಡಪ್ರಭ ದಿನಪತ್ರಿಕೆಯ ಮುಖಪುಟದಲ್ಲೇ ಒಂದು ಸೆನ್ಸೇಷನಲ್ ಸುದ್ದಿ ಇತ್ತು. ಈಗ ಅಮೆರಿಕದಲ್ಲಿರುವ ರಾಜ್ಯ ಸರ್ಕಾರಿ ನೌಕರ, ಐಪಿಎಸ್ ಅಧಿಕಾರಿ ಮಧುಕರ ಶೆಟ್ಟಿಯ 'ಸಂದರ್ಶನ' ಎಂದು ಬಿಂಬಿಸಲಾದ ವರದಿ ಅದಾಗಿತ್ತು.

"ನಾನು ಲೋಕಾಯುಕ್ತದಲ್ಲಿ ನೋಡಿದಷ್ಟು ಮೋಸಗಾರರನ್ನು ಭ್ರಷ್ಟರಲ್ಲೂ ನೋಡಲಿಲ್ಲ, ಇವರು ಭ್ರಷ್ಟರಿಗಿಂತಲೂ ಡೇಂಜರ್"

- ಇದು ಮಧುಕರ ಶೆಟ್ಟರ ಖುದ್ದು ಸ್ಟೇಟ್‌ಮೆಂಟ್ ಎನ್ನುವಂತೆ ಕನ್ನಡಪ್ರಭ ಬಿಂಬಿಸಿ ಪ್ರಕಟಿಸಿತು.

ಕನ್ನಡ ಪ್ರಭಕ್ಕಾಗಿ ಮಧುಕರ್ ನೀಡಿರುವ ವಿಶೇಷ ಇಂಟರ್‌ವ್ಯೂ ಎಂಬಂತಿದ್ದ ಆ 'ಸಂದರ್ಶನ'ವು ನಿಜಾರ್ಥದಲ್ಲಿ ಒಂದು ಇಂಟರ್‌ವ್ಯೂ ಆಗಿರಲೇ ಇಲ್ಲ!

ಮತ್ತದು ಈಗ ನವೆಂಬರ್ 12ರ ರಾತ್ರಿ ನಡೆದ ಟೆಲಿಫೋನ್ ಸಂದರ್ಶನವೂ ಆಗಿರಲಿಲ್ಲ!!

ನಿಜವಾಗಲೂ ಆಗಿದ್ದೇನೆಂದರೆ ಕಳೆದ ಆಗಸ್ಟ್ 9ರಂದು ಮಧುಕರ ಶೆಟ್ಟರು ಕನ್ನಡ ಪ್ರಭದ ಪತ್ರಕರ್ತರೊಬ್ಬರೊಂದಿಗೆ ನಡೆಸಿದ ಉಭಯಕುಶಲೋಪರಿಯ, ಸ್ವಗತ ಲಹರಿ ತರದ ಸಂಭಾಷಣೆಯೇ ಈಗ ಏಕಾಏಕಿ ಇಂಟರ್‌ವ್ಯೂ ರೀತಿಯಲ್ಲಿ ಪ್ರಕಟಗೊಂಡಿದೆ.

ಇದಕ್ಕೂ ಒಂದು ಹಿನ್ನೆಲೆ ಹಾಗೂ ಖದಕ್ಕಾದ ಕಾರಣವೂ ಇದೆ.

ಬಹುಶಃ ಈ ಒಂದು ಸುದ್ದಿ ಕರ್ನಾಟಕದ ಬಹುತೇಕ ಜನರ ಗಮನಕ್ಕೂ ಬಂದಿರುತ್ತದೆ.

ಗಣಿ ಹಗರಣದ ತನಿಖಾ ವರದಿಯು ಕಳೆದ ಜುಲೈ ಅಂತ್ಯದಲ್ಲಿ ಸರ್ಕಾರದ ಕೈಸೇರಿತು. ಅವತ್ತು ಶುರುವಾದ ರಾಜಕೀಯ ಅಲ್ಲೋಲ ಕಲ್ಲೋಲಗಳು ಈಗಲೂ ಮುಂದುವರೆಯುತ್ತಿದೆ. ಈ ನಡುವೆ ಪ್ರಜಾವಾಣಿ ದಿನಪತ್ರಿಕೆ ಆಗಸ್ಟ್‌ನಲ್ಲೊಮ್ಮೆ ತನ್ನ ಮುಖಪುಟದಲ್ಲೇ ಒಂದು ಗಣಿ ಭ್ರಷ್ಟಾಚಾರದ ಸುದ್ದಿ ಪ್ರಕಟಿಸಿತು.

ಪತ್ರಕರ್ತರ ಗಣಿ ಲಂಚದ ವರದಿ ಅದು. ಲೋಕಾಯುಕ್ತರು ಜನಾರ್ದನ ರೆಡ್ಡಿಯ ಆಪ್ತನೊಬ್ಬನ ಆಫೀಸ್‌ಗೆ ರೇಡು ಮಾಡಿದಾಗ ಅಲ್ಲಿ ಸಿಕ್ಕ ಕಂಪ್ಯೂಟರ್‌ನಲ್ಲಿ ಲಂಚ ಪಡೆದ ಫಲಾನುಭವಿಗಳ ಪಟ್ಟಿ ಇತ್ತೆಂತಲೂ ಆ ಪಟ್ಟಿಯಲ್ಲಿ ಆರ್‌ಬಿ ಹಾಗೂ ವಿ.ಭಟ್ ಎಂಬ ಹೆಸರು ಅರ್ಥಾತ್ ಸಂಕೇತಾಕ್ಷರಗಳು ಸಿಕ್ಕವೆಂತಲೂ ತನಿಖಾ ತಂಡ ವರದಿ ನೀಡಿದೆಯಷ್ಟೇ.

ಆ ಪಟ್ಟಿಯಲ್ಲಿ ಎದ್ದು ಕಂಡ ಕೆಲವು ಹೆಸರುಗಳು ಹೀಗಿದ್ದವು:

* ಯಶವಂತ್ ದೇಶಪಾಂಡೆ

* ಬ್ಯಾಂಗಳೂರ್ ಮಿರರ್

ಸಂತೋಷ್ ಹೆಗ್ಡೆ ಪ್ರಚಾರ ಪ್ರಿಯರಲ್ಲ

ಈ ಹಿಂದಿನ ಲೋಕಾಯುಕ್ತ ವೆಂಕಟಾಚಲ ಹಾಗೂ ಇತ್ತೀಚಿನ ಸಂತೋಷ್ ಹೆಗ್ಡೆಯವರ ವರ್ತನೆಗಳನ್ನೊಮ್ಮೆ ಹೋಲಿಸಿ ನೋಡಿ...

ವೆಂಕಟಾಚಲ ಯಾರ ಮೇಲಾದರೂ ದಾಳಿ ಮಾಡುವ ಮುನ್ನಾ ಟಿವಿ ಕ್ಯಾಮೆರಾ, ಪೇಪರ್‌ನವರು ಇರದಿದ್ದರೆ ಹೊರಡುತ್ತಿರಲಿಲ್ಲ, ಸಂತೋಷ್ ಹೆಗ್ಡೆ ಮೀಡಿಯಾಗಳೆದಿರು ರೇಡು ಮಾಡುತ್ತಿರಲಿಲ್ಲ, ಅಸಲಿಗೆ ಅವರು ಖುದ್ದಾಗಿ ದಾಳಿಗೆ ಹೋಗಿದ್ದೇ ಅತಿ ಅಪರೂಪ. ಆದರೆ ವೆಂಕಟಾಚಲ ತಾಲ್ಲೂಕಾಫೀಸು, ಸಬ್‌ರಿಜಿಸ್ಟ್ರಾರ್ ಆಫೀಸು ಹೀಗೆ ಒಂದೂ ಬಿಡದೆ ಮೀಡಿಯಾಗಳೊಂದಿಗೆ ಸುತ್ತುತ್ತಿದ್ದರು.


ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಇತಿಹಾಸದಲ್ಲೇ ಅತೀ ಕಷ್ಟದ ಹಾಗೂ ಸವಾಲಿನಂತಹ ಘಟನೆಗಳು ನಡೆದದ್ದು, ತನಿಖೆಗಳಾದದ್ದು ಸಂತೋಷ್ ಹೆಗ್ಡೆಯವರ ಕಾಲದಲ್ಲಿ, ಅದನ್ನವರು ನಿಷ್ಠೆ, ಪ್ರಾಮಾಣಿಕತೆಗಳಿಂದ ನಿಭಾಯಿಸಿದ್ದಾರೆ. ಜೊತೆಗಿದ್ದ ಡಾ. ಯು.ವಿ.ಸಿಂಗ್, ರೂಪಕ್‌ಕುಮಾರ್ ದತ್ತ, ಮಧುಕರ್ ಶೆಟ್ಟಿ ತರದ ದಕ್ಷರು ಕೈಜೋಡಿಸಿ ಭ್ರಷ್ಟರನ್ನು ಸದೆಬಡಿಯುತ್ತಿದ್ದರು. ಸಂತೋಷ್ ಹೆಗ್ಡೆ ಯಾರು ಕರೆದರೂ ಒಪ್ಪಿ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು, ತಾವು ಹೋದಲೆಲ್ಲಾ ಶಾಲಾ-ಕಾಲೇಜುಗಳಲ್ಲೂ ಸಹ ಸಮಾಜ, ಸರ್ಕಾರ, ಮೌಲ್ಯಗಳ ಕುರಿತೇ ಮಾತಾಡುತ್ತಿದ್ದರೇ ಹೊರತು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿರಲಿಲ್ಲ.

ಮಧುಕರ ಶೆಟ್ಟರು 'ಸಂತೋಷ್ ಹೆಗ್ಡೆಯವರು ಪ್ರಚಾರ ಪ್ರಿಯ' ಎಂದಿರುವುದಕ್ಕೆ ಒಂದೆರಡು ಆಂತರಿಕ ವಿಚಾರಗಳೇ ಕಾರಣವಾಗಿರಬಹುದು. ಒಮ್ಮೆ ಕೆಜಿಎಫ್ ಶಾಸಕ ಸಂಪಂಗಿ ಬಂಧನವಾಗುವ ಮುನ್ನ ಮಧುಕರ ಶೆಟ್ಟರು ಸಾಕಷ್ಟು ಸಾಕ್ಷಿ ಪುರಾವೆಗಳನ್ನು ಕಲೆಹಾಕುವ ಮೊದಲೇ ಹೆಗ್ಡೆಯವರು ಮೀಡಿಯಾಗೆ ಮಾಹಿತಿ ನೀಡಿ ಇಕ್ಕಟ್ಟು ಸೃಷ್ಟಿಸಿದ್ದರೆಂದು ಹೇಳಲಾಗಿದೆ. ಇದು ನಿಜವಾಗಿದ್ದರೂ ಸಹ ಘೋರ ಅಪರಾಧವೇನಾಗಿರಲಿಲ್ಲ, ಇದಲ್ಲದೆ ಶೆಟ್ಟರಿಗೆ ತಮ್ಮ ಮೇಲಾಧಿಕಾರಿಯಾಗಿದ್ದ ರೂಪಕ್‌ಕುಮಾರ್ ದತ್ತರೊಂದಿಗೂ ಕೆಲವು ಸಣ್ಣಪುಟ್ಟ ಜಟಾಪಟಿಗಳಿದ್ದವು.

ಅನನುಭವ Ego clashಗಳೇ ಅವಕ್ಕೆ ಕಾರಣವಾಗಿರುತ್ತಿದ್ದವು. ಆದರೆ ಸಂತೋಷ್ ಹೆಗ್ಡೆ ಇದಕ್ಕೆ ಹೆಚ್ಚು ಮಹತ್ವ ನೀಡದೆ, ಅಂದರೆ ದತ್ತ ಅಥವಾ ಮಧುಕರ ಶೆಟ್ಟಿ ಹೀಗೆ ಯಾರ ಪರ-ವಿರೋಧ ವಹಿಸದೆ ಕೇವಲ ಕೆಲಸದತ್ತ ಗಮನ ಕೊಟ್ಟಿದ್ದರು.

ಬಹುಶಃ ಮಧುಕರ ಶೆಟ್ಟರಲ್ಲಿ 'ನನ್ನನ್ನು ನಿರ್ಲಕ್ಷಿಸಲಾಯಿತು' ಎಂಬ ಭಾವನೆಯನ್ನು ಇದು ಮೂಡಿಸಿತೇನೋ? ಇಂತಹವೆಲ್ಲ ಸಣ್ಣಪುಟ್ಟ ಅತೃಪ್ತಿಗಳು ಸೇರಿ 'ಹೆಗ್ಡೆ ಪ್ರಚಾರ ಪ್ರಿಯರು' ಎಂದು ಶೆಟ್ಟಿ ಹೇಳಿದ್ದಾರಷ್ಟೇ.


ವೆಂಕಟಾಚಲ



ವಡ್ಡರ್ಸೆ ಕುರಿತ ಪುಸ್ತಕ

ಆರ್.ಬಿ.

ವಿ.ಭಟ್

ಸಂಜಯ್ ಸರ್

ಡೆಕ್ಕನ್ ಕ್ರಾನಿಕಲ್

ಬೆಂಗಳೂರ್ ಪ್ರೆಸ್ ಕ್ಲಬ್

...ಭಟ್ ಅಂತಿದ್ದದ್ದು ವಿಶ್ವೇಶ್ವರ್ ಭಟ್ ಹೌದಾ? ಎಂಬ ಪ್ರಶ್ನೆಗಳಿವೆ. ...ತೋಷ್ ಹೆಗ್ಡೆಯವರು ಸಹ ಈಗ "ವಿ.ಭಟ್ ಅಂದರೆ ಕನ್ನಡ ...ದ ಸಂಪಾದಕ ವಿಶ್ವೇಶ್ವರ ಭಟ್ಟರಾ ಎಂಬುದನ್ನು ಸರ್ಕಾರ ತನಿಖೆ ...ಲಿ" ಎಂದು ಸಲಹೆ ನೀಡಿದ್ದಾರೆ.

...ಈಗ ಯೋಚಿಸಿ ನೋಡಿ. ಲೋಕಾಯುಕ್ತ ಸಂಸ್ಥೆ ಬಗ್ಗೆ ಹಾಗೂ ...ೋಷ್ ಹೆಗ್ಡೆಯವರ ಬಗ್ಗೆ ಅನುಮಾನ ಬರುವಂತೆ ವರದಿಯನ್ನು ...ಪ್ರಭ ಯಾಕೆ ಈಗ ಪ್ರಕಟಿಸಿತೆಂದರೆ ವಿ.ಭಟ್ಟ ಎಂಬುವರಿಗೆ ಗಣಿ ...ತಿಂದವರ ಪಟ್ಟಿಯಲ್ಲಿ ತನ್ನ ಹೆಸರೂ ಸೇರಿದ್ದು ಕಸಿವಿಸಿ ಹುಟ್ಟಿಸಿದೆ. ...ವೊಂದು ದಿನ ಸಿಬಿಐನವರು ಎತ್ತಾಕಿಕೊಂಡು ಹೋದರೆ ...ಏನೆಂಬ ಭೀತಿಯೂ ಇದೆ. ಹಾಗಾಗಿ ಲೋಕಾಯುಕ್ತ ವರದಿಯನ್ನೇ ...ಗುಂಪು ಮಾಡಿಸಲು ಅವಕಾಶ ಸಿಗಲೆಂದು ಕಾದಿದ್ದ ಈತ. ಈಗ ...ಕರ ಶೆಟ್ಟಿ ಕೊಂಚ ಭಾವುಕನಾಗಿ ಹಾಗೂ ಬಾಲಿಷವಾಗಿ ಹೇಳಿದನ್ನೇ ...ಗಿ ಬಳಸುತ್ತಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ...ಪ್ರಭ'ವೂ ಈ ಭ್ರಷ್ಟರ ದುರುದ್ದೇಶ ಹಾಗೂ ಸ್ವಾರ್ಥಕ್ಕೆ ...ಯಾಗುತ್ತಿದೆ.

ಇಷ್ಟಕ್ಕೂ ಶೆಟ್ಟರು ಹೇಳಿದ್ದೇನು?

...ನ್ನಡ ಪತ್ರಿಕೋದ್ಯಮದ ಗೌರವಾನ್ವಿತ ವ್ಯಕ್ತಿಯಾಗಿದ್ದ ವಡ್ಡರ್ಸೆ ...ರಾಮ ಶೆಟ್ಟರ ಮಗ ಮಧುಕರ ಶೆಟ್ಟಿ ಇಂಡಿಯನ್ ಪೊಲೀಸ್ ಸರ್ವೀಸ್ ಪರೀಕ್ಷೆ ಗೆದ್ದು ಪೊಲೀಸ್ ಅಧಿಕಾರಿಯಾಗಿದ್ದಾರೆ. ಅವರು ಲೋಕಾಯುಕ್ತದಲ್ಲಿದ್ದಾಗ ಸಂತೋಷ ಹೆಗ್ಡೆಯವರ ಟೀಮ್‌ನ ಉತ್ತಮ ಮೆಂಬರ್ ಆಗಿದ್ದವರು.

...ಗಣಿ ಲಂಚ ತಿಂದ ...ರ್‌ಬಿ & ವಿ.ಭಟ್ಟರು ಯಾರು?

"ವಿ.ಭಟ್ ಅಂದರೆ ವಿಶ್ವೇಶ್ವರ ಭಟ್ಟರಾ?"

...ಈಗೊಂದು ಪ್ರಶ್ನೆಗೆ ಸಂತೋಷ್ ಹೆಗ್ಡೆ 'ವಿ.ಭಟ್ ಅನ್ನುವವರ ಹೆಸರು ...ಲಂಚ ತಗೊಂಡವರ ಪಟ್ಟಿಯಲ್ಲಿದೆ. ಅದು ಮಾಧ್ಯಮ ಸಂಸ್ಥೆಯೊಂದರ ...ಪ್ರಭ-ಸುವರ್ಣ ನ್ಯೂಸ್) ಮುಖ್ಯಸ್ಥ ವಿಶ್ವೇಶ್ವರ ಭಟ್ಟರಾ ಎಂಬ ಬಗ್ಗೆ ...ರ ತನಿಖೆ ನಡೆಸಲಿ' ಎಂದುತ್ತರಿಸಿದ್ದಾರೆ.

...ದರ ಹಿನ್ನೆಲೆ ಇಷ್ಟೆ: ಅಕ್ರಮ ಗಣಿ ದಂಧೆಯಲ್ಲಿದ್ದ ಮಧುಶ್ರೀ ...ಸ್ಟ್ರೈಸಸ್ ಎನ್ನುವವರ ಆಫೀಸಿಗೆ ಲೋಕಾಯುಕ್ತ ತನಿಖಾ ತಂಡ ರೇಡು ...ಒಂದಷ್ಟು ದಾಖಲೆಗಳು ಹಾಗೂ ಕಂಪ್ಯೂಟರ್ ಡಿಸ್ಕ್‌ಗಳು ಸಿಕ್ಕಿದ್ದವು. ...ಲ್ಲೊಂದು ಕಡೆ ದುಡ್ಡು ತಗೊಂಡು 'ಸುಮ್ಮನಿರಲು' ಒಪ್ಪಿಕೊಂಡಿದ್ದ ...ರ ಪಟ್ಟಿ ಇತ್ತು,

...ಆ ಪಟ್ಟಿಯಲ್ಲಿ ಎರಡು ಹೆಸರುಗಳು ಎದ್ದು ಕಾಣುತ್ತಿತ್ತು,

...ಒಂದು ಆರ್‌ಬಿ!

...ಇನ್ನೊಂದು ವಿ.ಭಟ್!!

...ವರ ಪೈಕಿ ಆರ್‌ಬಿ ಹತ್ತು ಲಕ್ಷ ರೂ.ಗಣಿ ಲಂಚ ತಿಂದಿದ್ದನೆಂತಲೂ ...ರಿಗೆ ಒಮ್ಮೆ 50 ಲಕ್ಷ, ಇನ್ನೊಮ್ಮೆ 25 ಲಕ್ಷದಷ್ಟು ಲಂಚ ತಿನ್ನಿಸಲಾಗಿದೆ ...ವೂ ದಾಖಲಿಸಲಾಗಿತ್ತು,

...ದಕ್ಕಾರೆಂದು ಪತ್ತೆಹಚ್ಚಲು ಈಗ ಅಷ್ಟೊಂದು ಕಷ್ಟಪಡಬೇಕಿಲ್ಲ. ...ಪ್ರಾಮಾಣಿಕವಾಗಿಯೇ ಬದುಕಿ, ಕೆಲಸ ನಿರ್ವಹಿಸಿರುವ ಸಂತೋಷ್ ...ವರ ವಿರುದ್ಧ ಯಾವ್ಯಾವ ಪತ್ರಕರ್ತರು 'ಮಧುಕರ ಶೆಟ್ಟಿ'ಯನ್ನು ಸಾಕ್ಷಿ ...ಯಾಗಿಸುತ್ತಿದ್ದಾರೆಂದು ನೋಡಿದರೆ ಗೊತ್ತಾಗುತ್ತದೆ.

...ಈ ರಾಜ್ಯದ ಒಳಿತಿಗಿಂತ ನಿಸರ್ಗ ಸಂಪತ್ತಿನ ರಕ್ಷಣೆಗಿಂತಾ, ಗಣಿ ಕಳ್ಳರಿಗೆ ...ಆಗಬೇಕೆಂಬುದಕ್ಕಾಗಿ ಸಂತೋಷ್ ಹೆಗ್ಡೆಯವರ ವಿರುದ್ಧ ದಾಳಿ ...ಡೆಸುವುದೇ ಇವರ ಅಜೆಂಡಾ ಆಗಿದೆ.

ಲೋಕಾಯುಕ್ತದಲ್ಲಿ ಭ್ರಷ್ಟರಿದ್ದಾರೆ ನಿಜ, ಹಾಗಂತ....!

ಮಧುಕರ ಶೆಟ್ಟರು ಹೇಳಿರುವುದರಲ್ಲಿ ಹೊಸದೇನೂ ಇಲ್ಲ, ಅದರಲ್ಲಿ ಉತ್ಪ್ರೇಕ್ಷೆಯೂ ಇಲ್ಲ.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಡಜನ್‌ಗಟ್ಟಲೆ ಭ್ರಷ್ಟರಿದ್ದಾರೆ. ಹೆದರಿಸಿ ಹಣಕೀಳುವ ನೆಟ್‌ವರ್ಕ್ ಇದೆ. ಹೆಡ್ಡಾಫೀಸ್‌ನಲ್ಲೇ ರಂಗಸ್ವಾಮಿ ನಾಯಕ್ ಎಂಬ ಪರಮ ಭ್ರಷ್ಟ ಅಧಿಕಾರಿ ಇದ್ದಾನೆ. ಆಡಳಿತ ವಿಭಾಗದ ಮುಖ್ಯಸ್ಥನೀತ. ಯಾವ್ಯಾವ ಜಿಲ್ಲೆಗೆ ಯಾರನ್ನು ವರ್ಗಾ ಮಾಡಬೇಕು, ಎಲ್ಲೆಲ್ಲಿ ಹೇಗೆ ಹಣ ಕೀಳಬೇಕು, ಒಳ್ಳೇ ಉತ್ಪತ್ತಿ ಇರುವ ಜಾಗ ಯಾವುದೆಂಬ ಬಗ್ಗೆಯೇ ರಂಗಸ್ವಾಮಿ ನಾಯಕ ಚೆನ್ನಾಗಿ ಸ್ಟಡಿ ಮಾಡಿದ್ದಾನೆ.



ರಂಗಸ್ವಾಮಿ

ಈ ಬಗ್ಗೆ ಲಂಕೇಶ್ 2011ರ ಸೆಪ್ಟೆಂಬರ್ 11ರ ಸಂಚಿಕೆಯಲ್ಲೇ ವಿವರವಾಗಿ ವರದಿ ಪ್ರಕಟಿಸಿದೆ.

ಯಡ್ಡಿ ಮಕ್ಕಳ ಜೊತೆ ಡೀಲು ಕುದುರಿಸಿಕೊಂಡಿದ್ದ ನಾಯಕ್ ಗಣಿ ಹಗರಣದ ಬಗ್ಗೆ ಲೋಕಾಯುಕ್ತ ತನಿಖೆಯಾಗಿ ಅಂತಿಮ ವರದಿ ರೆಡಿಯಾಗುತ್ತಿದ್ದಾಗ ಕೆಲವು ಮಾಹಿತಿ ಕದ್ದು ಯಡ್ಡಿಗೆ ರವಾನಿಸಿದ್ದ.

ಇವನಲ್ಲದೆ ಚಿತ್ರದುರ್ಗದ ನಾಗರಾಜ್, ಹುಮನಾಬಾದಿನ ಟಿ.ಬಿ.ರಾಯ್ಕರ್, ರಾಮನಗರದಲ್ಲಿದ್ದ ಎಸ್‌ಪಿ ವಿ.ಎಸ್.ಸ್ವಾಮಿ... ಇವರೆಲ್ಲ ಒಬ್ಬರನ್ನು ಮೀರಿಸುವ ಮತ್ತೊಬ್ಬ ಭ್ರಷ್ಟರಾಗಿದ್ದಾರೆ.

ಅದೇ ರೀತಿ ಪ್ರಣವ್ ಮೊಹಾಂತಿ, ಯು.ವಿ.ಸಿಂಗ್, ಆರ್.ಕೆ. ದತ್ತ ತರದ ಪ್ರಚಂಡ ಧೈರ್ಯಶಾಲಿಗಳೂ, ಪ್ರಾಮಾಣಿಕರೂ ಇದ್ದರಲ್ಲವೆ?

ಹಾಗೆಂದು ಲೋಕಾಯುಕ್ತ ಎಂದರೆ ಭರ್ತಿ ಪ್ರಾಮಾಣಿಕರ ಅಥವಾ ಪೂರ್ತಿ ಭ್ರಷ್ಟರ ಸಂಸ್ಥೆ ಎನ್ನಬಾರದಲ್ಲವೇ? ಬೇರೆಲ್ಲಾ ಕಡೆ ಇರುವಂತೆ ಲೋಕಾಯುಕ್ತದಲ್ಲೂ ಅನ್ನ ತಿನ್ನುವ ಮನುಷ್ಯರೇ ಇದ್ದಾರೆ. ಅಲ್ಲೂ ತಪ್ಪುಗಳಾಗುತ್ತವೆ. ಹಾಗೆಂದು ಲೋಕಾಯುಕ್ತ ಸಂಸ್ಥೆಯನ್ನೇ ಫಿನಿಶ್ ಮಾಡುವಂತೆ ಮಧುಕರ ಶೆಟ್ಟಿ ವರ್ತಿಸಕೂಡದು.

ಇಷ್ಟಾದ ಮೇಲೂ ಹೇಳಬೇಕಾದ ಇನ್ನೊಂದೆರಡು ಸಂಗತಿಗಳಿವೆ.

ಮಧುಕರ ಶೆಟ್ಟಿ ಯುವ ಉತ್ಸಾಹಿ ಪ್ರಾಮಾಣಿಕ ಪೊಲೀಸ್ ಅಧಿಕಾರಿ ಎಂಬುದು ನಿಜ. ನೀವೊಮ್ಮೆ ಅವರ ಆಸ್ತಿ ಘೋಷಣಾ ಅಫಿಡವಿಟ್‌ಗಳನ್ನು ಓದಿ ನೋಡಬೇಕು. ಮೂರು ಸಾವಿರ ರೂಪಾಯಿ ಬೆಲೆಯ ಮಂಚ, ಒಂದೂವರೆ ಸಾವಿರ ರೂ. ಬೆಲೆಯ ಟಿವಿ ಸ್ಟಾಂಡು, ಇನ್ನೂರು ರೂ. ಬೆಲೆಯ ಪ್ಲಾಸ್ಟಿಕ್ ಚೇರ್‌ಗಳ ಬಗ್ಗೆಯೆಲ್ಲಾ ಅವರು ದಾಖಲಿಸಿದ್ದಾರೆ. ನಲವತ್ತು ಸಾವಿರ ರೂಪಾಯಿತನಕ ಸಂಬಳ ಪಡೆಯುತ್ತಿದ್ದ ಮಧುಕರ್ ಈಗ ಬಡವರೇನಲ್ಲ, ಆದರೆ ಬಹುಶಃ ಸರಳ ಬದುಕಿನ ಆಪೇಕ್ಷೆ ಇರಬಹುದು. ಅವರು ಬದುಕಿನ ಕಷ್ಟ-ನಷ್ಟ, ಒಳಿತು-ಕೆಡುಕುಗಳನ್ನೆಲ್ಲಾ ನೋಡಿದ್ದಾರೆ. ಆದರೆ ಅನೇಕ ಸಾರಿ ಸಿನಿಕರಂತೆ ವರ್ತಿಸುವ ಧೋರಣೆಯೂ ಇದೆ.

ಈಗಿನ ಪ್ರಸಂಗ ಅಂತ ಸಿನಿಕತೆಯೇ ಆಗಿದೆ.

ಈಗ ಹೆಚ್ಚಿನ ವ್ಯಾಸಂಗಕ್ಕಾಗಿ 2 ವರ್ಷ ರಜೆ ಪಡೆದು ಅಮೆರಿಕಾಗೆ ಹೋಗಿರುವ ಮಧುಕರ ಶೆಟ್ಟಿ ಹೇಳಿರುವುದಿಷ್ಟೇ...

-ಲೋಕಾಯುಕ್ತದಲ್ಲೂ ಭ್ರಷ್ಟರಿದ್ದಾರೆ.

-ಸಂತೋಷ್ ಹೆಗ್ಡೆ ಪ್ರಚಾರ ಪ್ರಿಯರಾಗಿದ್ದರು

-ಯಾರೋ ಒಬ್ಬ ಲಂಚ ಪಡೆದವನನ್ನು ಹಿಡಿದ ಮಾತ್ರಕ್ಕೆ ಭ್ರಷ್ಟಾಚಾರ ಹೋಗಿಬಿಡುವುದಿಲ್ಲ.

- ಕೆಲವರ ತಪ್ಪುಗಳನ್ನೇ ಎತ್ತಿ ತೋರಿಸುವ, ಆ ಮೂಲಕ ನಾವು ಶ್ರೇಷ್ಠ ಎಂದು ಬಿಂಬಿಸಿಕೊಳ್ಳುವ ಲೋಕಾಯುಕ್ತ ವ್ಯವಸ್ಥೆಯೇ ಅಪರಿಪೂರ್ಣ.

-ಇತ್ಯಾದಿ



- ಶೆಟ್ಟರ ಈ ಹೇಳಿಕೆಗಳ ಪೈಕಿ 'ಸಂತೋಷ್ ಹೆಗ್ಡೆ ಪ್ರಚಾರ ಪ್ರಿಯರಾಗಿದ್ದರು' ಎನ್ನುವ ಸುಳ್ಳುಬಿಟ್ಟರೆ ಉಳಿದೆಲ್ಲಾ ಮಾತುಗಳೂ ನಿಜವೇ ಆಗಿವೆ. ಮತ್ತದರಲ್ಲಿ ಹೊಸತೇನೂ ಇಲ್ಲ. ಆದರೂ ಶೆಟ್ಟರ ಮಾತುಗಳು ಯಾವ ಸಂದರ್ಭದಲ್ಲಿ ಹೇಗೆ ಯಾವ ಉದ್ದೇಶಕ್ಕೆ ಬಳಕೆಯಾಗುತ್ತಿವೆ ನೋಡಿ?

ಬಿಜೆಪಿ ಸರ್ಕಾರ ಲೋಕಾಯುಕ್ತರ ಗಣಿ ತನಿಖಾ ವರದಿಯನ್ನು ಇದುವರೆಗೂ ಅಂಗೀಕರಿಸಿಲ್ಲ. ಸಿಎಂ ಸದಾನಂದ ಗೌಡರಿಗೆ ಹೊಸ ಲೋಕಾಯುಕ್ತರನ್ನು ಆರಿಸಿ ಶಿಫಾರಸ್ಸು ಮಾಡಲು ಮನಸ್ಸೇ ಇದ್ದಂತಿಲ್ಲ. ಯಡ್ಡಿ-ಕುಮಾರಸ್ವಾಮಿಗೆ ತಮ್ಮ ಅಕ್ರಮಗಳನ್ನು ಪತ್ತೆ ಹಚ್ಚಿರುವ ಲೋಕಾಯುಕ್ತ ವರದಿ ಬೇಕಿಲ್ಲ, ಲೋಕಾಯುಕ್ತರೂ ಬೇಕಿಲ್ಲ. ಹಾಗಾಗಿ ಇವರಿಬ್ಬರೂ ಮಧುಕರ ಶೆಟ್ಟರ ದಿಕ್ಕಾಪಾಲಿನಂತಹ ಹೇಳಿಕೆಗಳನ್ನೇ ಮುಂದಿಟ್ಟುಕೊಂಡು ಸಂತೋಷ್ ಹೆಗ್ಡೆ ವಿರುದ್ಧ ದಾಳಿ ನಡೆಸುತ್ತಿದ್ದಾರೆ.

ಸಂತೋಷ್ ಹೆಗ್ಡೆಯವರು ಈಗ ಗಟ್ಟಿಯಾಗಿ ನಿಲ್ಲಲಿ. ಜನ ಅವರೊಂದಿಗಿದ್ದಾರೆ.

ಶಾಂತಕುಮಾರ್‌ಗೆ ಮಧುಕರ್ ಶೆಟ್ಟಿ ಕೇಳಿದ್ದು

ಈಗೊಂದು ನಾಲ್ಕು ತಿಂಗಳ ಹಿಂದಿನ ಘಟನೆ ಇದು.



ಆಗಸ್ಟ್ 8 ಮಧುಕರ ಶೆಟ್ಟರ ತಂದೆ ವಡ್ಡರ್ಸೆ ರಘುರಾಮ ಶೆಟ್ಟರು ತೀರಿಕೊಂಡ ದಿನ. ಈ ಕುಟುಂಬಕ್ಕೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಯಡಾಡಿಯಲ್ಲಿ ಆರೆಕರೆ ಜಮೀನು ಮತ್ತು ಒಂದು ಪುಟ್ಟ ತೋಟದ ಮನೆಯೂ ಇದೆ. ರಘುರಾಮ ಶೆಟ್ಟರು ತಮ್ಮ ಕೊನೆಯ ದಿನಗಳನ್ನು ಕಳೆದದ್ದು ಇಲ್ಲಿಯೇ.

ಮಧುಕರ ಶೆಟ್ಟಿ ಮತ್ತವರ ಇಬ್ಬರು ಸೋದರರು ತಮ್ಮ ತಂದೆಯ ನೆನಪಿಗೆ ಒಂದು ಟ್ರಸ್ಟ್ ಸ್ಥಾಪಿಸಿದ್ದಾರೆ. ಕುಟುಂಬದ ಸದಸ್ಯರಲ್ಲದೆ ಪ್ರಜಾವಾಣಿಯ ದಿನೇಶ್ ಅಮೀನ್ ಮಟ್ಟು, ಬಿಡಿಎನಲ್ಲಿರುವ ಕೆಎಎಸ್ ಅಧಿಕಾರಿ-ಲೇಖಕ ಪುಟ್ಟಸ್ವಾಮಿ ಸಹ ಈ ಟ್ರಸ್ಟಿನ ಮೆಂಬರ್‌ಗಳಾಗಿದ್ದಾರೆ.

ಆಗಸ್ಟ್ ಮೊದಲ ವಾರದಲ್ಲೊಮ್ಮೆ ಮಧುಕರ ಶೆಟ್ಟರು ಪ್ರಜಾವಾಣಿಯ ಮುಖ್ಯಸ್ಥ ಶಾಂತಕುಮಾರ್‌ಗೆ ಫೋನ್ ಮಾಡಿದ್ದಾರೆ. 'ನಮ್ಮ ತಂದೆಯವರ ಬಗ್ಗೆ ಹಾಗೂ ನನ್ನ ವೃತ್ತಿಜೀವನ ಮುಂತಾದ ವಿಚಾರ ಕುರಿತು ಒಂದು ಲೇಖನ ಬರೆದುಕೊಡಲೆ? ಪ್ರಕಟಿಸುತ್ತೀರಾ?' ಎಂದು ಕೇಳಿದ್ದಾರೆ. ಇದಕ್ಕೆ ಶಾಂತಕುಮಾರ್ ತಕ್ಷಣ ಉತ್ತರಿಸದೆ ಕೊಂಚ ಕಾಲ ತೆಗೆದುಕೊಂಡಿದ್ದಾರೆ. ಇದರರ್ಥ 'ನೋ' ಇರಬಹುದೆಂದು ಭಾವಿಸಿದ ಮಧುಕರ ಶೆಟ್ಟಿ ಕನ್ನಡ ಪ್ರಭದ ವರದಿಗಾರ ರಾಘವೇಂದ್ರ ಭಟ್‌ರನ್ನು ಸಂಪರ್ಕಿಸಿದ್ದಾರೆ.

ನಂತರ ಒಂದಿಬ್ಬರ ಸಮ್ಮುಖದಲ್ಲಿ ಇವರಿಬ್ಬರ ಭೇಟಿಯೂ ಆಗಿದೆ. ಆದರೆ ಅದು ಯಾವ ಕಾರಣಕ್ಕೂ ಒಂದು ಅಧಿಕೃತ ಇಂಟರ್‌ವ್ಯೂ ಆಗಿರಲಿಲ್ಲ. ಮಧುಕರ ಶೆಟ್ಟರು ತಮ್ಮ ತಂದೆಯ ವ್ಯಕ್ತಿತ್ವ, ಕೊಡುಗೆ ಕೆಲಸಗಳ ಬಗ್ಗೆ ಅನೇಕ ವಿಚಾರಗಳನ್ನು ಹೇಳಿಕೊಂಡಿದ್ದಾರೆ. ಮಾತಿನ ನಡುವೆ ಲಹರಿ ಬಂದಹಾಗೆ ತನ್ನ ವೃತ್ತಿ, ಲೋಕಾಯುಕ್ತ ಸಂಸ್ಥೆಯ ಅನುಭವಗಳನ್ನು ಅಷ್ಟಿಷ್ಟು ಹೇಳಿಕೊಂಡಿದ್ದಾರೆ.

ಇದೂ ಕೂಡಾ ಲೋಕರೂಢಿಯ ಸಂಭಾಷಣೆಯಾಗಿತ್ತಷ್ಟೆ. ಇದೇನೇ ಇರಲಿ ಒಟ್ಟಿನಲ್ಲಿ ಕನ್ನಡಪ್ರಭ ಇದನ್ನು ಆಗಸ್ಟ್‌ನಲ್ಲಿ ಪ್ರಕಟಿಸಿಲಿಲ್ಲ. ಬದಲಾಗಿ ವಿ.ಭಟ್ಟರು ಸರಿಯಾದ ಟೈಮಿಗೆ ಕಾಯುತ್ತಿದ್ದರು. ಈಗ ಯಡ್ಡಿ ಜೈಲಿಂದ ಹೊರಬಂದು ಹೂಂಕರಿಸುತ್ತಿರುವಾಗ, ಲೋಕಾಯುಕ್ತ ಸಂಸ್ಥೆ ರಕ್ಷಕರಿಲ್ಲದೆ ತಬ್ಬಲಿಯಾಗಿರುವಾಗ, ಸ್ವತಃ ಪತ್ರಕರ್ತರನೇಕರು ಲಂಚ ತಿಂದ ಆರೋಪವೂ ಇರುವಾಗ,

ಸಂತೋಷ್ ಹೆಗ್ಡೆ ಮೇಲೆ ದಾಳಿಗೆ ಇದೇ ಸೂಕ್ತ ಸಮಯವಾಗಿ ಅವರಿಗೆ ಕಂಡಿದೆ.

ಮೊನ್ನೆ ನವೆಂಬರ್ 13 ರಂದು ಈ ವರದಿ ಪ್ರಕಟವಾಗುವ ಮುನ್ನ ಅಂದರೆ 12 ನೇ ತಾರೀಖಿನ ನಡುರಾತ್ರಿ ಎರಡು ಗಂಟೆ ಸುಮಾರಿನಲ್ಲಿ ಕನ್ನಡ ಪ್ರಭದಿಂದ ಮಧುಕರ ಶೆಟ್ಟಿಗೆ ಫೋನ್ ಮಾಡಿದ್ದಾರೆ.

ಆಗಸ್ಟ್‌ನಲ್ಲಿ ನೀವು ಹೇಳಿದ್ದನ್ನು ಪ್ರಿಂಟ್ ಮಾಡುತ್ತಿದ್ದೇವೆ ಅಂದಿದ್ದಾರೆ.

ಶೆಟ್ಟಿಗೆ ಅಸಲಿ ಪಿತೂರಿ ಏನೆಂಬುದೇ ಬಹುಶಃ ಅರ್ಥವಾಗಲಿಲ್ಲ. 'ಹೂಂ' ಎಂದು ಸುಮ್ಮನಾಗಿದ್ದಾರೆ. ವಿ.ಭಟ್ಟರು ಫಿಟ್ಟಿಂಗ್ ಇಟ್ಟೇಬಿಟ್ಟರು.

ವಡ್ಡರ್ಸೆ ರಘುರಾಮಶೆಟ್ಟರ ಕುರಿತು ಅರ್ಧ ಕಾಲಂ ಸುದ್ದಿ ಪ್ರಕಟಿಸಿ ಉಳಿದಂತೆ ಒಂದಿಡೀ ಪುಟವನ್ನು ಲೋಕಾಯುಕ್ತರ ವಿರುದ್ಧ ದಾಳಿಗೆ ಬಳಸಲಾಯಿತು.

ನಂತರ ಹೇಳಿಕೆ, ಪ್ರತಿಹೇಳಿಕೆಗೆ ಪ್ರಚೋದನೆ ನೀಡುತ್ತಾ ಈಗ ನೋಡಿದರೆ ಇಡೀ ವಿವಾದವೇ ಸಂತೋಷ್ ಹೆಗ್ಡೆ V/s ಮಧುಕರ ಶೆಟ್ಟಿ ನಡುವೆ ಎನ್ನುವಂತೆ ಬೆಳೆಸಿದ್ದಾರೆ. ಮಧುಕರ ಶೆಟ್ಟಿ ಹರಕೆಯ ಕುರಿಯಾಗಿದ್ದಾರೆ. ಹಾಗೂ ಯಡ್ಡಿ ಕುಮಾರಸ್ವಾಮಿ, ಈಶ್ವರಪ್ಪ, ಆರ್‌ಬಿ, ವಿ.ಭಟ್ಟರೆಲ್ಲಾ ಮಧುಕರ ಶೆಟ್ಟರ ಬೆನ್ನಹಿಂದೆ ನಿಂತು ಯುದ್ಧ ನಡೆಸುತ್ತಿದ್ದಾರೆ.

ಈ ಮಧುಕರ ಶೆಟ್ಟಿ ಅದಿನ್ನೆಂತಾ ಮುಗ್ಧನೆಂದರೆ 'ಕನ್ನಡ ಪ್ರಭ' ತನ್ನ ಅನಿಸಿಕೆಗಳನ್ನು ದುರುದ್ದೇಶಕ್ಕೆ ಬಳಸಿದ್ದು ಗೊತ್ತಾದ ಮೇಲೂ ಅದೇ ಪತ್ರಿಕೆಗೆ ಒಂದು ಸ್ಪಷ್ಟೀಕರಣ ಕಳಿಸಿದ್ದಾರೆ.

ವಿ.ಭಟ್ಟರು ಅದನ್ನು ಬಿಡದೆ 'ನನ್ನ ಮಾತಿಗೆ ಬದ್ಧ' ಎಂದು ಶೆಟ್ಟರು ಹೇಳಿದ್ದಾರೆಂಬಂತೆ ಮತ್ತೆ ಪ್ರಿಂಟಿಸಿ ನಗುತ್ತಿದ್ದಾರೆ.

ಕುಮಟಾ: ಎಮ್ಮೆಲ್ಲೆಗಿರಿಗಾಗಿ ಎಡವಟ್ಟು ಪುಢಾರಿಗಳ ದೊಂಬರಾಟ!

ಶೂದ್ರರ ಮೀನು ಮತ್ತು ಬ್ರಾಹ್ಮಣರ ಅಡಿಕೆ ಬೆಳೆಯಷ್ಟೇ ಹುಲುಸಾಗಿ ಕುಮಟೆಯಲ್ಲಿ ಎಮ್ಮೆಲ್ಲೆ ಚಟದಾರರ ತರತರದ ತಳಿ ತಯಾರಾಗಿದೆ. ಹಾಗೆ ನೋಡಿದರೆ ಒಂದು ವರ್ಷದ ಹಿಂದಿನಿಂದಲೇ ಪ್ರಮುಖ ಮೂರು ಪಕ್ಷಗಳಾದ ಕಾಂಗ್ರೆಸ್-ಬಿಜೆಪಿ ಮತ್ತು ಜೆಡಿಎಸ್‌ನ ಎಮ್ಮೆಲ್ಲೆ ಆಕಾಂಕ್ಷಿಗಳು ಛದ್ಮ ವೇಷ ತೊಟ್ಟುಕೊಂಡು ಜನರ ನಡುವೆ ಕುಣಿಯಲಾರಂಭಿಸಿದ್ದಾರೆ. ತಮ್ಮ ಕಪ್ಪು ಹಣ ಹರಿಸಿ ಸಭೆ-ಸಮಾರಂಭ-ಹಬ್ಬ-ಟೂರ್ನಮೆಂಟ್-ಮದುವೆ-ಸೋಬನ ಏರ್ಪಡಿಸಿಕೊಂಡು ತಾವೇ ಎಮ್ಮೆಲ್ಲೆ ಮೆಟೀರಿಯಲ್ ಎಂದು ತೋರಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿದ್ದಾರೆ.

• ನಹುಷ

ಉತ್ತರ ಕನ್ನಡದಲ್ಲಿರುವುದು ಆರು ಅಸೆಂಬ್ಲಿ ಕ್ಷೇತ್ರ. ಇದರಲ್ಲಿ ಕಾರವಳಿಯ ಕುಮಟೆಯಷ್ಟು ಕುತೂಹಲಕರ ಕ್ಷೇತ್ರ ಮತ್ತೊಂದಿಲ್ಲ. ಕುಮಟೆಯ ಅಷ್ಟೂ ಪಕ್ಷಗಳಲ್ಲಿ ಅರ್ಧ ಡಜನ್‌ನಿಂದ ಒಂದು ಡಜನ್‌ವರೆಗೆ ಶಾಸಕಗಿರಿಯ ಹಗಲು ಗನಸು ಕಾಣುತ್ತಿರುವ ಪುಢಾರಿಗಳಿದ್ದಾರೆ. ಜನಪರ ಬದ್ಧತೆ-ನಿಯತ್ತು-ಪ್ರಜಾಪ್ರಭುತ್ವದ ಕನಿಷ್ಠ ಆಶಯವೇ ಗೊತ್ತಿಲ್ಲದ ಗಂಡಾಗುಂಡಿ ಪುಂಡರು ಶಾಸಕನಾಗೇ ತೀರಬೇಕೆಂಬ ಜಿದ್ದಾಜಿದ್ದಿಗೆ ಬಿದ್ದಿದ್ದಾರೆ. ಇದು ಕುಮಟಾ-ಹೊನ್ನಾವರದಲ್ಲಿ ಕದನಕೌತುಕ ಮೂಡಿಸಿಬಿಟ್ಟಿದೆ. ಹೀಗಾಗಿ ರಾಜಕಾರಣದ ರಕ್ತದ ರುಚಿ ಹತ್ತಿರುವ ಹಳೆ ಹುಲಿ ದೇಶಪಾಂಡೆಯ ಹಳಿಯಾಳ ಮತ್ತು ಪುರೋಹಿತಶಾಹಿ ಮಸಲತ್ತಿನ ಗುಳ್ಳೇನರಿ ಕಾಗೇರಿ ಮಾಣಿಯ ಶಿರಸಿಗಿಂತಲೂ ಈ ಕುಮಟೆಯಲ್ಲೇ ರಗಳೆ ರಾಜಕೀಯ ಜೋರು.


ಶೂದ್ರರ ಮೀನು ಮತ್ತು ಬ್ರಾಹ್ಮಣರ ಅಡಿಕೆ ಬೆಳೆಯಷ್ಟೇ ಹುಲುಸಾಗಿ ಕುಮಟೆಯಲ್ಲಿ ಎಮ್ಮೆಲ್ಲೆ ಚಟದಾರರ ತರತರದ ತಳಿ ತಯಾರಾಗಿದೆ. ಹಾಗೆ ನೋಡಿದರೆ ಒಂದು ವರ್ಷದ ಹಿಂದಿನಿಂದಲೇ ಪ್ರಮುಖ ಮೂರು ಪಕ್ಷಗಳಾದ ಕಾಂಗ್ರೆಸ್-ಬಿಜೆಪಿ ಮತ್ತು ಜೆಡಿಎಸ್‌ನ ಎಮ್ಮೆಲ್ಲೆ ಆಕಾಂಕ್ಷಿಗಳು ಛದ್ಮ ವೇಷ ತೊಟ್ಟುಕೊಂಡು ಜನರ ನಡುವೆ ಕುಣಿಯಲಾರಂಭಿಸಿದ್ದಾರೆ. ತಮ್ಮ ಕಪ್ಪು ಹಣ ಹರಿಸಿ ಸಭೆ-ಸಮಾರಂಭ-ಹಬ್ಬ-ಟೂರ್ನಮೆಂಟ್-ಮದುವೆ-ಸೋಬನ ಏರ್ಪಡಿಸಿಕೊಂಡು ತಾವೇ ಎಮ್ಮೆಲ್ಲೆ ಮೆಟೀರಿಯಲ್ ಎಂದು ತೋರಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿದ್ದಾರೆ. ಸ್ವಪಕ್ಷದೊಳಗಿನ ಪ್ರತಿಸ್ಪರ್ಧಿಗಳಿಗೆ ಟಾಂಗ್ ಕೊಡಲು ಮತ್ತು ತಂತಮ್ಮ ಪಕ್ಷದ ದೇವಪಿತೃಗಳ ಒಲಿಸಿಕೊಳ್ಳಲು ಈ ಗಿಲ್ಮಿಟ್ ಗಿರಾಕಿಗಳು ಮಾಡುತ್ತಿರುವ ಗುದಮುರಿಗೆ ಕುಮಟಾ ಕ್ಷೇತ್ರದಲ್ಲೀಗಲೇ ಚುನಾವಣೆಯ ರಂಗು-ಗುಂಗೇರಿಸಿಬಿಟ್ಟಿದೆ!

ಎಮ್ಮೆಲ್ಲೆ ಆಗುವ ಆಸೆಬುರುಕರ ಈ ಹಿಂಡಲ್ಲಿ ಹೆಚ್ಚು ಅರ್ಭಟ ಮಾಡುತ್ತಿರುವ ಪ್ರಚಂಡರ ಪಾತ್ರ ಪರಿಚಯ ಇಲ್ಲಿದೆ.


ಹೊನ್ನಪ್ಪ ನಾಯಕ

ಕುಮಟಾ ಕ್ಷೇತ್ರವನ್ನು ಎರಡೆರಡು ಸಲ ಪ್ರತಿನಿಧಿಸಿದ್ದ ಮೂರನೇ ಬಾರಿ ಬರೀ 20 ಮತಾಂತರದಿಂದ ಸೋತಿದ್ದ ಮೋಹನ ಶೆಟ್ಟಿ ನಿಧನದ ನಂತರ ಕಾಂಗ್ರೆಸ್‌ನಲ್ಲಿ ಎರಡು ಡಜನ್ ಹಿರಿ-ಮರಿ-ಕಿರಿ ಪುಢಾರಿಗಳು ಟಿಕೆಟ್ ಕ್ಲೈಮು ಮಾಡುವ ತರಾತುರಿಗೆ ಬಿದ್ದಿದ್ದಾರೆ. ಲಾಲು ಸ್ಟೈಲಿನ ರಾಜಕಾರಣ ಮಾಡುತ್ತಿದ್ದ ಮೊದ್ಮಣಿ ಮೋಹನ ಶೆಟ್ಟಿಯನ್ನು ಸೋಲಿಸಿದ್ದ ಕಾಂಗ್ರೆಸ್ ಭಿನ್ನಮತೀಯರ ಗ್ಯಾಂಗಿಗೆ ಅಂದು ಮುಂದಾಳಾಗಿದ್ದ ಮಾಜಿ ಜಿಪಂ ಸದಸ್ಯ ಹೊನ್ನಪ್ಪ ನಾಯಕ್ ಇಂದು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾನೆ.

ಬೇನಾಮಿ ಜಲ್ಲಿಕ್ರಶರ್-ಕ್ವಾರಿ ನಡೆಸುತ್ತಿರುವ ಹೊನ್ನಪ್ಪ ನಾಯಕ್‌ಗೆ ಈ ಹಣ ಬಲವೇ ವಿಧಾನಸೌಧದ ಮೆಟ್ಟಿಲೇರುವ ಚಟ ಹತ್ತಿಸಿದೆ. ಈತ ಹೇಳಿಕೇಳಿ ಮ್ಯಾಗಿ ವಿರೋಧಿ ಬಳಗದ ಭೂಪ; ಅರ್ಥಾತ್ ದೇಶಪಾಂಡೆಯ ನಿಷ್ಠಾವಂತ ಚೇಲ. ಬಿಸಿಸಿ ಪ್ರೆಸಿಡೆಂಟ್ ಆಗಿದ್ದೇ ತಡ, ಸ್ವಿಫ್ಟ್ ಕಾರನ್ನು ಬೇನಾಮಿಯಾಗಿ ಖರೀದಿಸಿರುವ ಹೊನ್ನಪ್ಪಣ್ಣ ಇಡೀ ಕ್ಷೇತ್ರದಲ್ಲಿ ರೌಂಡು ಹಾಕುತ್ತಿದ್ದಾನೆ. ಗುರು ದೇಶಪಾಂಡೆಜೀ ತನಗೆ ಕಾಂಗ್ರೆಸ್ ಟಿಕೆಟ್ ಕೊಟ್ಟೇ ಕೊಡಿಸುತ್ತಾರೆಂಬುದು ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಹಿಂದೂ ಪಂಗಡದ 'ನಾಡವ' ಜಾತಿಗೆ ಸೇರಿದ ಹೊನ್ನಪ್ಪಣ್ಣ ಆಸೆ. ಆದರೆ ಈ ಹೊನ್ನಪ್ಪಣ್ಣನಿಗೆ ಬಹುಸಂಖ್ಯಾತ 'ನಾಮಧಾರಿ'ಗಳ ಓಟು ಸಿಗುವುದೇ ಅನುಮಾನವೆಂದು ಆತನ ಬಾಲಂಗೋಚಿಗಳೇ ಹೇಳುತ್ತಿದ್ದಾರೆ. ಜಿಲ್ಲೆಯಲ್ಲಿ ಪರಂಪರಾಗತವಾಗಿ ನಾಡವ V/s ನಾಮಧಾರಿ ವೈಷಮ್ಯ ಒಳಗೊಳಗೇ ಹೊಗೆಯಾಡುತ್ತಿದೆ.


ಹೊನ್ನಪ್ಪ ನಾಯಕ್

ಹೊನ್ನಪ್ಪಣ್ಣನ ಸುತ್ತ ಒಂದು ನಾಡವ ಪಾಳೇಗಾರರ ತಂಡವಿದೆ. ದೇಶಪಾಂಡೆಯ ಜಾತಿ ಬಂಧು ಎಲ್.ವಿ.ಶಾನಭಾಗ್ ಎಂಬ ಗೋಲ್‌ಮಾಲ್ ಗುದುಮುರಿಗೆ ಪುಂಡ ಈತನನ್ನು ನಿಯಂತ್ರಿಸುತ್ತಾನೆಂಬ ಪ್ರತೀತಿಯಿದೆ. ಈ ಎಲ್‌ವಿಯೂ ಎಮ್ಮೆಲ್ಲೆಗಿರಿಗೆ ಒಂದು ಕೈನೋಡುವ ಉಮೇದುದಾರನೇ. ಅಲ್ಲಿ ಹಳಿಯಾಳದಲ್ಲಿ 'ಬಾವಜಿ' ದೇಶಪಾಂಡೆಗೆ ಕಾಂಗ್ರೆಸ್ ಟಿಕೆಟ್ ಕೊಡುವುದರಿಂದ ಇಲ್ಲಿ ಕುಮಟೆಯಲ್ಲಿ ತನಗೆ ಚಾನ್ಸ್ ಸಿಗಲಾರದೆಂದು ಈತ ಹೊನ್ನಪ್ಪಣ್ಣನನ್ನು ಸಪೋರ್ಟ್ ಮಾಡುತ್ತಿದ್ದಾನೆ. ಆದರೆ ಈ ಎಲ್‌ವಿ ಫ್ಯೂಡಲ್ ನಾಡವರ ತಂಡವೇ ಹೊನ್ನಪ್ಪಣ್ಣನಿಗೆ ಟಿಕೆಟ್ ತರಲು, ಟಿಕೆಟ್ ತಂದರೂ ಗೆಲ್ಲಲು ತ್ರಾಸು ಕೊಡಲಿದೆ.



ಯಶೋಧರ ನಾಯಕ್

ಒಂದು ಮಾತ್ರ ಖರೆ. ಎರಡು ಬಾರಿ ಜಿಪಂ ಸದಸ್ಯನಾಗಿ ಅನುಭವ ಹೊಂದಿರುವ ಈ ಹೊನ್ನಪ್ಪಣ್ಣ ಕಾಂಗ್ರೆಸ್‌ನ ಟಿಕೆಟ್ ಬಯಸುವವರಲ್ಲಿ ಹೆಚ್ಚು ಅರ್ಹತೆ ಇರುವಾತ. ಡಿಗ್ರಿ ಮುಗಿಸಿರುವ ಈತ ಕ್ಷೇತ್ರದ ಆಗು-ಹೋಗುಗಳ ಅರಿವಿರುವ ಕೆಲಸಗಾರ. ದೇಶಪಾಂಡೆ ಜಾತಿ ಲೆಕ್ಕಾಚಾರ ಹಾಕಿದರೆ 'ನಾಡವ'ರ ಕುಲತಿಲಕ ಹೊನ್ನಪ್ಪಣ್ಣನಿಗೆ ಟಿಕೆಟ್ ಕೊಡುವುದು ಕಷ್ಟ. ಹಿಂದಿನ ಭಂಡಾಟ-ಮುಂಡಾಟ ಬಿಟ್ಟಂತೆ ಪೋಸು ಕೊಡುತ್ತಿರುವ ಹೊನ್ನಪ್ಪಣ್ಣ ಬಿಸಿಸಿ ಅಧ್ಯಕ್ಷತೆಗಷ್ಟೇ ಲಾಯಕ್ಕೆಂದು ದೇಶಪಾಂಡೆ ತನ್ನ ಆಪ್ತರಲ್ಲಿ ಹೇಳಿದ್ದಾರೆಂಬ ಸುದ್ದಿಯೂ ಇದೆ.

ಗಾಯತ್ರಿ ಗೌಡ

ಜಿಪಂ ಮಾಜಿ ಅಧ್ಯಕ್ಷೆ ಗಾಯತ್ರಿ ಗೌಡ ಕಾಂಗ್ರೆಸ್‌ನ ಗ್ಲಾಮರಸ್ ಮಹಿಳಾಮಣಿ ಬುಡಕಟ್ಟು ಜನಾಂಗದ 'ಹಾಲಕ್ಕಿ ಒಕ್ಕಲಿಗ' ಜಾತಿಗೆ ಸೇರಿದ ಗಾಯತ್ರಿ ರಾಜಕಾರಣದ ಅದೃಷ್ಟವಂತೆ. ಹೊನ್ನಾವರ ತಾಪಂ ಸದಸ್ಯೆಯಾಗಿ ಜನತಾದಳದ ಮೂಲಕ ರಾಜಕಾರಣಕ್ಕೆ ಬಂದಿದ್ದ ಈಯಮ್ಮ ಆ ನಂತರ ತಾಪಂ ಅಧ್ಯಕ್ಷೆ, ಜಿಪಂ ಸದಸ್ಯೆಯಾಗಿದ್ದರು. ಜಿಪಂ ಉಪಾಧ್ಯಕ್ಷತೆಯೂ 'ಹಾಲಕ್ಕಿ ಗೌಡತಿ' ಎಂಬ ಕಾರಣದಿಂದ ಒಲಿದು ಬಂದಿತ್ತು. ದೇಶಪಾಂಡೆ ಮತ್ತು ಮ್ಯಾಗಿ ಜತೆ ಸಮಾನಾಂತರ ಸ್ನೇಹ-ಸಲಿಗೆ ಸಂಪಾದಿಸಿದ್ದ ಈಕೆಗೆ ಜಿಪಂ ಅಧ್ಯಕ್ಷತೆಯೂ ಬೋನಸ್ ಆಗಿ ಸಿಕ್ಕಿತ್ತು.


ಆದರೆ ಸಿಕ್ಕ ಅವಕಾಶವನ್ನು ಗಾಯತ್ರಿ ಸಮರ್ಥವಾಗಿ ಬಳಸಿಕೊಳ್ಳದೆ ಬರೀ ಹಣದ ಹಪಾಹಪಿಗೆ ಬಿದ್ದು ಹೆಸರು ಕೆಡಿಸಿಕೊಂಡರು. ಅಧಿಕಾರದ ಅಮಲಿನಲ್ಲಿ ಸಂಸಾರವನ್ನು ಹಾಳುಮಾಡಿಕೊಂಡರು. ಅಧಿಕಾರ-ಹಣದ ಹಿಂದೆ ಬಿದ್ದ ಗಾಯತ್ರಿ ಗೌಡ ತನ್ನ ಅತೀ ಹಿಂದುಳಿದ ಹಾಲಕ್ಕಿ ಜನಾಂಗಕ್ಕೆ ಪೈಸೆ ಪ್ರಯೋಜನಕ್ಕೂ ಬೀಳಲಿಲ್ಲ. ಹಾಲಕ್ಕಿಗಳನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಅಥವಾ ಅವರಿಗೆ ಸಾಮಾಜಿಕ-ರಾಜಕೀಯ ನ್ಯಾಯ ಕೊಡಿಸಲು ಈಕೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಲಾಗಾಯ್ತಿನಿಂದಲೂ ಶೋಷಣೆ-ಅನ್ಯಾಯಕ್ಕೆ ತುತ್ತಾಗುತ್ತಲೇ ಬಂದಿರುವ ವಿಶಿಷ್ಟ ಸಂಸ್ಕೃತಿಯ ಮುಗ್ಧ ಹಾಲಕ್ಕಿ ಒಕ್ಕಲಿಗರ ನಾಯಕಿಯಾಗುವ ಎಲ್ಲ ಅವಕಾಶವಿದ್ದರೂ ಗಾಯತ್ರಿಗೆ ಅದನ್ನು ಬಳಸಿಕೊಳ್ಳಲಾಗಲೇ ಇಲ್ಲ. ಹೀಗಾಗಿ ಆಕೆಗೆ ಇತ್ತ ಸ್ವಜಾತಿ ಜನರ ಬೆಂಬಲವೂ ಇಲ್ಲ, ಅತ್ತ ಆಕೆಯನ್ನು ಬಳಸಿಕೊಂಡ ಪುಢಾರಿಗಳ ಬಲವೂ ಇಲ್ಲದಾಗಿದೆ.



ಆದರೆ ದೇಶಪಾಂಡೆಯ ಪಗಡೆ ಆಟದಲ್ಲಿ ಗಾಯತ್ರಿಗೆ ಕುಮಟಾ ಅಸೆಂಬ್ಲಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಜಾಕ್‌ಪಾಟ್ ಹೊಡೆಯಲಿದೆ ಎಂದು ರಾಜಕೀಯ ಪಂಡಿತರು ಗಣಿತ ಹಾಕಿದ್ದಾರೆ. ಈಗ ದೇಶಪಾಂಡೆ ಮತ್ತು ಮ್ಯಾಗಿ ಇಬ್ಬರಿಗೂ ಈಕೆ ಅಂದರೆ ಅಷ್ಟಕ್ಕಷ್ಟೆ. ಆದರೆ ತನ್ನ ಮಗನನ್ನು ಕೆನರಾದಿಂದ ಎಂಪಿ ಮಾಡುವ ದೂ(ದು)ರಾಲೋಚನೆಯಲ್ಲಿರುವ ದೇಶಪಾಂಡೆ ಬಹುಸಂಖ್ಯಾತ ಹಾಲಕ್ಕಿ ಒಕ್ಕಲಿಗರನ್ನು ಸೆಳೆಯಲು ಗಾಯತ್ರಿಯನ್ನು ಉಪಯೋಗಿಸುವ ಸಾಧ್ಯತೆಯಿದೆ. ಗಾಯತ್ರಿಯ ನಿಷ್ಠೆ ಬಗ್ಗೆ ಅನುಮಾನವಿರುವ ದೇಶಪಾಂಡೆ ಹಿಂದೊಮ್ಮೆ ಕುಮಟಾದ ಶಾಸಕನಾಗಿದ್ದ ಅಂಕೋಲಾದ ಕೆ.ಎಚ್. ಗೌಡರಿಗೆ ಚಾನ್ಸ್ ಕೊಟ್ಟರೆ ಹೇಗೆಂಬ ಚಿಂತನ-ಮಂಥನ ನಡೆಸಿದ್ದಾರೆ. ಪಾಪದ ಪ್ರಾಣಿ ಕೆ.ಎಚ್. ಗೌಡರ ಬಗ್ಗೆ ಹಾಲಕ್ಕಿ ಸಮಾಜದಲ್ಲಿ ಗೌರವ-ಸಿಂಪಥಿ ಇದೆ. ಗೌಡರ ನಿರುಪದ್ರವಿ ಗುಣಧರ್ಮವೇ ಗುಲಾಮಗಿರಿ ಬಯಸುವ ದೇಶಪಾಂಡೆಗೆ ಅಪ್ಯಾಯಮಾನ!


ಯಶೋಧರ ನಾಯ್ಕ

ಹೊನ್ನಾವರದ 'ಮೂಳ್ಕೋಡು' ಮೂಲದ ಟ್ರಾನ್ಸ್‌ಪೋರ್ಟ್ ಉದ್ಯಮಿ ಯಶೋಧರ ನಾಯ್ಕರ ಬೇರುಗಳಿರುವುದು ಮೈಸೂರು-ತಮಿಳುನಾಡಿನ ಹೊಸೂರಲ್ಲಿ. ಬಡತನ ತಾಳಲಾಗದೆ ಮನೆಬಿಟ್ಟು ಓಡಿಹೋಗಿ ಬೆಂಗಳೂರು ಸೇರಿದ್ದ ಈ ಥಳಕು ಬಳುಕಿನ ಪುಢಾರಿ ಇವತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ತಮಿಳುನಾಡು ಸಿಎಂ ಜಯಲಲಿತಾ, ಮೈಸೂರಿನ ರಾಜವಂಶಸ್ಥ ನರಸಿಂಹ ದತ್ತ ಒಡೆಯರ್ ತನ್ನ ಪರಮಾಪ್ತರೆಂದು ಹೇಳುತ್ತಾನೆ. ಒಡೆಯರ್ ಜತೆ ಬಿಸಿನೆಸ್ ಲಿಂಕುಗಳಿರುವ ಯಶೋಧರ್‌ಗೆ ಮೈಸೂರು-ಬೆಂಗಳೂರು ಕಡೆಯ ಹಲವು ಎಂಪಿ-ಎಮ್ಮೆಲ್ಲೆಗಳ ಜತೆ ನಿಗೂಢ ನಂಟಿದೆ!



ಹೊರಗಡೆ ನೋಡಿದರೆ ಈತ 'ಫ್ರೆಂಡ್ಲಿ ಟ್ರಾನ್ಸ್‌ಪೋರ್ಟ್'ನ ಉದ್ಯಮಿ. ಆದರೆ ರಹಸ್ಯವಾಗಿ ದಗಲ್ಬಾಜಿ ದಂಧೆಗಳು ಹಲವಿವೆ. ಹೀಗಾಗಿ ಈತ ಒಂದಿಷ್ಟು ಕಪ್ಪು-ಬಿಳುಪು ಹಣ ಕೂಡಿ ಹಾಕಿದ್ದಾನೆ. ಆ ದುಡ್ಡಿನ ಬಲದಿಂದ ಶಾಸಕನಾಗುವ ಕನಸು ಕಾಣುತ್ತಿದ್ದಾನೆ. ಸಿದ್ದರಾಮಯ್ಯನ ಗೆಳೆತನದಿಂದಾಗಿ ಹಿಂದೊಮ್ಮೆ ಸ್ವಂತ ಕ್ಷೇತ್ರ ಭಟ್ಕಳದಲ್ಲಿ ಜೆಡಿಎಸ್ ಕ್ಯಾಂಡಿಡೇಟಾಗಿದ್ದ ಈ ಯಶು. ಸಿದ್ದು ಕಾಂಗ್ರೆಸ್ ಸೇರಿದಾಗ ಈತನೂ ಬಂದಿದ್ದ. ಆದರೆ ಭಟ್ಕಳದಲ್ಲಿ ಕಾಂಗ್ರೆಸ್ ಟಿಕೆಟ್ ಮಾತ್ರ ಸಿಗಲಿಲ್ಲ. ಹೀಗಾಗಿ 'ಬಂ'ರ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಠೇವಣಿ ಕಳಕೊಂಡಿದ್ದ.

ಈಗ ಮತ್ತೆ ಕಾಂಗ್ರೆಸ್ ಸೇರಿಕೊಂಡಿರುವ ಯಶು ಪಕ್ಕದ ಕುಮಟಾ 'ಖಾಲಿ' ಎಂದು ವಲಸೆ ಬಂದಿದ್ದಾನೆ. ಸ್ಥಳೀಯ ಕಾಂಗ್ರೆಸ್ ಮೇಲೆ ಪ್ರಚಂಡ ಹಿಡಿತ ಸಾಧಿಸಿದ್ದ ಮೋಹನ ಶೆಟ್ಟಿ ನಿಧನರಾಗುತ್ತಲೇ ಯಶು ತನಗಿಲ್ಲಿ ಟಿಕೆಟ್ ಸಿಗುತ್ತದೆಂದು ಹೇಳುತ್ತ ವಕ್ಕರಿಸಿಬಿಟ್ಟಿದ್ದಾರೆ. ತನ್ನ ಕಪ್ಪು ಹಣದಿಂದ ಒಂದಿಷ್ಟು ಲೋಕಲ್ ಕಾಂಗ್ರೆಸ್ ಮುಂದಾಳುಗಳನ್ನು ಖರೀದಿಸಿರುವ ಈತ ಕುಮಟೆಯಲ್ಲೊಂದು ಮನೆಯನ್ನೂ ಕೊಂಡುಕೊಂಡಿದ್ದಾನೆ. ನೀರಂತೆ ಹಣ ಹರಿಸುತ್ತಿದ್ದಾನೆ. ಸತ್ತ ಮನೆಯ ಸೂತಕ ಕಳೆಯುವ ಮೊದಲೇ ಹೋಗಿ 'ಧನ ಸಹಾಯ' ಮಾಡಿ ಫೋಟೋ ಪೇಪರಿಗೆ-ಟಿವಿಗೆ ಹಾಕಿಸಿಕೊಳ್ಳುತ್ತಿದ್ದಾನೆ. ಮದುವೆ-ಮುಂಜಿ-ಶೋಭನ-ಗಾಂವಠಿ


ಗಾಯತ್ರಿ ಗೌಡ

ಸಾಂಸ್ಕೃತಿಕ-ಕ್ರೀಡಾ ಕಾರ್ಯಕ್ರಮಕ್ಕೆಲ್ಲ ಡೋನೇಷನ್ ಕ ತಾನೇ 'ಚೀಫ್'ಗೆಸ್ಟಾಗಿ ಕಳಾಯಿಸುತ್ತಿದ್ದಾನೆ. ತರಹೆ ಅಗ್ಗದ ಗಿಮಿಕ್ ಮಾಡುತ್ತಿರುವ ಯಶೋಧರ ನಾ ಟಿಕೆಟ್ ಕೊಡಿಸುವ ಭರವಸೆ ಸಿದ್ದರಾಮಯ್ಯ ಕೊಟ್ಟಿದ್ದಾ ಆ 'ವರ'ವೇ ಯಶುಗೆ ಕುಮಟೆಯಲ್ಲಿ ಕರಾಮತ್ತು ನ ನೆರವಾಗಿದೆ.

ಆದರೆ ಯಶುಗೆ ಕುಮಟಾ ಕಾಂಗ್ರೆಸ್ ಕ್ಯಾಂಡಿಡೇಟ ಸಾಧ್ಯವಾ? ಇಂಥದೊಂದು ಜಿಜ್ಞಾಸೆ ಜಿಲ್ಲೆಯ ರಾಜ ಪಡಸಾಲೆಯಲ್ಲಿ ನಡೆಯುತ್ತಿದೆ. ಏಕೆಂದರೆ ಪಕ್ಕದ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಜೆ.ಡಿ. ನಾಯ್ಕ ಶಾಸಕನಾಗಿದ್ದಾ ಸಿಟ್ಟಿಂಗ್ ಎಮ್ಮೆಲ್ಲೆಗೆ ಟಿಕೆಟ್ ಕೊಡಲೇ ಬೇಕು. ಈತನ ದೈತ್ಯ ದೇಶಪಾಂಡೆಯಿದ್ದಾರೆ. ಹಿ ಜೆ.ಡಿ. ನಾಯ್ಕರ ದೀವರು (ಈ ಜಾತಿಗೆ ಸೇರಿದ ಯಶುಗೆ ಕುಮಟ ಟಿಕೆಟ್ ಸಿಗುವುದು ಅನುಮಾನ ಕಾಂಗ್ರೆಸ್ ಟಿಕೆಟ್ ಹಂಚಿಕೆ ವಿಧಿ- ಬಲ್ಲವರು ಹೇಳುತ್ತಾರೆ. ಆದರೆ ಇ ದಕ್ಕೂ ತಲೆ ಕೆಡಿಸಿಕೊಳ್ಳದ ಕೈಯಲ್ಲಿ ಕಾಸಿನ ಚೀಲ ಹಿಡಿದುಕೊ ಕುಮಟಾ ಕ್ಷೇತ್ರಪರ್ಯಟನೆ ಮಾ ತ್ತಿದ್ದಾನೆ. ದುಡ್ಡಿನ ದರ್ಪದಿಂದ ಗು ಹಾಕುತ್ತಿದ್ದಾನೆ. ಅತ್ತ ದೇಶಪಾಂಡೆ 'ಆಟ' ನೋಡಿ ಹಲ್ಲು ಕಚ್ಚುತ್ತಿದಾ

ದೇಶಪಾಂಡೆ-ಮ್ಯಾಗಿ ಮಸ ನಡುವೆ ತನಗೆಲ್ಲಾದರೂ ಟಿಕೆಟ ಬಹುದೇ ಎಂದು ಸಿಜರಿನ್ ದ ಕುಖ್ಯಾತಿಯ ಜಿ.ಜಿ. ಹೆಗಡೆ ಜ ಸುರಿಸುತ್ತಿದ್ದಾರೆ. ಕಳೆದ ಬಾರಿ ಪಾರ್ಟಿಯಿಂದ ಸ್ಪರ್ಧಿಸಿ ಬಿಜೆ ಶಶಿಭೂಷಣ ಹೆಗಡೆ ಪಾಲಿಗೆ 'ಸ ಬಾಂಬ್' ಆಗಿದ್ದ ಹೆಗಡೆಗೆ ಮಾಜಿ ಅಧ್ಯಕ್ಷ ಶಾಂತರಾಮ ಹೆಗಡೆ ಹೇತ್ಲಾಂಡಿ ಸ್ವಜಾತಿ (ಬ್ರಾ ಪ್ರೀತಿಯಿಂದ ಟಿಕೆಟ್ ಕೊಡಿ ಆಶ್ವಾಸನೆ ಕೊಟ್ಟಿದ್ದಾರಂತೆ. ಆದ ಹಳಿಯಾಳದಲ್ಲಿ ಕೊಂಕಣಿ ಬ್ರಾಹ್ಮಣ ದೇಶಪಾಂಡೆಗೆ ಸಿಗುವುದರಿಂದ ಇಲ್ಲಿ ಮತ್ತೆ ಹವ್ಯಕ ಬ್ರಾಹ್ಮಣನಿಗೆ ಅ ಹೇಗಾದೀತು. ಅಲ್ಲದೆ ಸ್ವತಃ ಶಾಂತಾರಾಮ ಹೆಗ ಶಿರಸಿಯಿಂದ ಒಂದು ಕೈ ನೋಡುವ ಉಮೇದಿಯ ದರಿಂದ ಜಿ.ಜಿ. ಹೆಗಡೆಗೆ ಆಸ್ಪತ್ರೆಯೇ ಗತಿ ಆಗು ಗ್ಯಾರಂಟಿ! ಇವರೆಲ್ಲರ ಜೊತೆ ಮಾರ್ಗರೆಟ್ ಆಳ್ವರ ಎ ಮಗ ಬಾಬು ಯಾನೆ ನಿವೇದಿತ್ ಆಳ್ವ ಕೂಡ ಕುಮಟೆ ಕಣ್ಣಿಟ್ಟಿದ್ದಾನೆ. ಮ್ಯಾಗಿ ಮನಸ್ಸಿನಲ್ಲಿ ತನ್ನ ಸುಪುತ್ರನ ಬ ದಿವಂಗತ ಮೋಹನ ಶೆಟ್ಟಿಯ ಅನನುಭವಿ ಕು ಕಂಠೀರವ ರವಿಕುಮಾರನ ಹೆಸರಿದೆ ಎಂಬ ಗಾಳಿ ಹಬ್ಬಿದೆ. ಇವರಿಬ್ಬರೂ ಕಾಂಗ್ರೆಸ್‌ಗೆ ಡರ್‌ಗಳೇ.


ಶಶಿಭೂಷಣ ಹೆಗಡೆ

ಕಳೆದ ವಿಧಾನಸಭೆ ಇಲೆಕ್ಷ ಕೇವಲ 500 ಮತದಿಂದ ಸೋ ಬಿಜೆಪಿಯ ಸಂಭಾವಿತ ಹುಡು ಶಶಿಭೂಷಣ ಹೆಗಡೆ. ರಾಮಕೃಷ್ಣ ಹೆ ದಾಯಾದಿ ಅಣ್ಣ ಗಣೇಶ ಹೆಗ ಮೊಮ್ಮಗ ಈ ಶಶಿ. ಹೆಗಡೆಜೀ ಫ್ಯಾಮಿ ದೊಡ್ಡಸ್ಥನವಾಗಲಿ, ಅಹಂಕಾರ ಇಲ್ಲದ ಸರಳ-ಸಜ್ಜನ ಹುಡುಗ. ಬಾರಿ ಕುಮಟಾದಲ್ಲಿ ಸಣ್ಣ ಅಂತ ಸೋತಿರುವ ಶಶಿಯ ಮೂಲ ಮೇಲಿನ ಸಿದ್ದಾಪುರ. ದೊಡ್ಮನೆ ಹೆಗ್ಡೇರ ಈ ಕುಲೋ ಮತ್ತೊಂದು ಕೈನೋಡುವ ಹುಮ್ಮಸ್ಸಿನಲ್ಲಿದ್ದಾರೆ.

ಆದರೆ ಈ ಬಾರಿ ಆತನಿಗೆ ಬಿಜೆಪಿಯ ಆ ವಲಯದಲ್ಲಿ ಪ್ರಭಾವಿಯಾಗಿರುವ ಮಂತ್ರಿ ಕಾಗೇ ಮಗ್ಗಲು ಮುಳ್ಳಾಗಿದ್ದಾರೆ. ಶಶಿ ಕುಮಟೆಗೆ ತಂದು ನಿಲ್ಲಿಸಿದ್ದೇ ಕಾಗ ಕುತಂತ್ರಗಾರಿಕೆಯಾಗಿತ್ತು. ಅಂದು ಕು ಬಿಜೆಪಿಯಲ್ಲಿ ಶಕ್ತಿಶಾಲಿಯಾಗಿದ್ದ ಡಾ. ಕರ್ಕಿಯನ್ನು ಮುಗಿಸಲೆಂದೇ ಆದೇ (ಬ್ರಾಹ್ಮಣ)ಗೆ ಸೇರಿದ ಶಶಿಯನ್ನು ಕುಮಟೆಗೆ ತಂದು ನಿಲ್ಲಿಸಿದ್ದರು. ಸೀ ಕರ್ಕಿ ಮತ್ತೆ ಎಮ್ಮೆಲ್ಲೆಯಾದರೆ ಮಂತ್ರಿಗಿರಿ ಸಿಗದೆಂಬ ಹೊಟ್ಟೆ ರಾಜಕೀಯವನ್ನು ಕಾಗೇರಿ ಅಂದು ಸಕ್ಸಸ್ ಆಗಿದ್ದರು. ಆಗ ಬಿಜೆಪಿಯಲ್ಲಿ ಗುಂಪಾದ ಕರ್ಕಿ ಇವತ್ತಿಗೂ ಎದ್ದಿಲ್ಲ.

ಕರ್ಕಿಗೆ ಮಾಡಿದಂತೆಯೇ ಶಶಿಗೂ 'ಕ ತೋರಿಸಲು ಕಾಗೇರಿ ಸ್ಕೆಚ್ ಹಾಕಿದ್ದಾರೆ. ಕೆಸರಿನ ದಂತಿರುವ ಶಶಿ ಗೆದ್ದರೆ ಬಿಜೆಪಿಯಲ್ಲಿ ಅಥವಾ ರಾಜಕೀಯದಲ್ಲಿ ಬ್ರಾಹ್ಮಣ ಲೀಡರ್ ಆಗಿ ತನ್ನ

...ಕ್ಕೆಟ್ಟ ದಿನಕರ ಶೆಟ್ಟಿ



ಈತ ಕುಮಟಾ-ಹೊನ್ನಾವರ ಕ್ಷೇತ್ರದ ಜೆಡಿಎಸ್ ಶಾಸಕ. ಗೆದ್ದಿದ್ದು ಕೇವಲ 20 ...ಟ್ ಅಂತರದಿಂದ. ಅಂದರೆ ಹತ್ತೇ ಓಟು ಕಮ್ಮಿ ಬಿದ್ದಿದ್ದರೂ ಈತ ಸೋಲುತ್ತಿದ್ದ. ...ರೂವರೆ ವರ್ಷದಲ್ಲಿ ಒಂದಿಷ್ಟು ಬಜೆಟ್ ಕಾಮಗಾರಿ ತಂದು ಅದರಲ್ಲೇ ...ಟೇಜು ಹೊಡೆದದ್ದು ಬಿಟ್ಟರೆ ಈ ದಿನಕರ ಶೆಟ್ಟಿ ಕ್ಷೇತ್ರವನ್ನು ಉದ್ಧಾರ ಮಾಡಿದ್ದು ...ಕ್ಕಷ್ಟೆ. ದುಡ್ಡು ಕೂಡಿಸುವುದರಲ್ಲಿ ಶಾಸಕ ಶೆಟ್ಟಿ ಮೊದಲಿಂದಲೂ ಚಾಂಪಿಯನ್! ...ಸಾದ ಮೇಲಂತೂ ಆತನಿಗೆ ಪುಷ್ಕಳವಾದ ಇಲಾಖೆಯಿಂದ ಕಪ್ಪ ಪ್ರತಿ ತಿಂಗಳೂ ...ತ್ತಿದೆ. ಮಾಮೂಲಿ ಕೊಡದ ಅಧಿಕಾರಿ-ಕಂಟ್ರಾಕ್ಟರ್‌ಗಳಿಗೆ ಶಾಸಕ ಶೆಟ್ಟರು ...ಳದಂತೆ ಬೆನ್ನತ್ತುತ್ತಾರೆ.

...ಟಿಂಬರ್ ಮಿಲ್ ಉದ್ಯಮಿಯಾದ ಶೆಟ್ಟರ್‌ರ ದೋನಂಬರ್ ದಂಧೆ ಬಗ್ಗೆ ...ಮಟೆಯಲ್ಲಿ ರಂಗು-ರಂಗಿನ ಕತೆಗಳಿವೆ. ಈತನ ಸಾಮಿಲ್ ಬಳಿಯೇ ಕಳ್ಳ ನಾಟಾ ...ಡೊಂದು ಸಿಕ್ಕಿದ ಪ್ರಕರಣ ಅಲ್ಲೇ ಅವಸಾನ ಕಂಡಿತು. ದುಡ್ಡು ಮಾಡುವುದು-ಒಣಪ್ರತಿಷ್ಠೆ ಪ್ರದರ್ಶಿಸುವುದಷ್ಟೇ ...ಲ್ಲಿ ಡ್ಯೂಟಿ ಎಂದುಕೊಂಡಿರುವ ದಿನಕರ ಶೆಟ್ಟಿಗೆ ಮೊದಲಿನ ಹಿಡಿತ ಕ್ಷೇತ್ರದ ಮೇಲಿಲ್ಲ, ಆತನಿಗೆ ಜೆಡಿಎಸ್‌ನಿಂದ ...! ಗೆಲ್ಲುತ್ತೇನೆಂಬ ಧೈರ್ಯವೂ ಉಳಿದಿಲ್ಲ. ಹೀಗಾಗಿ ಆತ ದುಡ್ಡಾದರೂ ಸಿಗುತ್ತದೆಂದು ಆಪರೇಷನ್ ಕಮಲ ...ಡಿಸಿಕೊಳ್ಳಲು ಎರಡೆರಡು ಸಲ ಹವಣಿಸಿದ್ದರು. ಒಮ್ಮೆಯಂತೂ ಶೆಟ್ಟರ ಕಾರ್ಯಾಚರಣೆ ತಿಳಿದು ಸಾಕ್ಷಾತ್ ಜೆಡಿಎಸ್ ...ವರಾಜ ಕುಮಾರಸ್ವಾಮಿಯೇ 'ವಾರ್ನ್' ಮಾಡಿಕಳಿಸಿದ್ದರು.

...ಇಂಥ ದಿನಕರ ಶೆಟ್ಟಿಗೆ ಕಾಂಗ್ರೆಸ್ ಸರದಾರ ಆರ್.ವಿ. ದೇಶಪಾಂಡೆಯ ಸಖ್ಯವಿದೆ. ದೇಶಪಾಂಡೆ ದಳವಾಯಿ ಆಗಿದ್ದಾಗ ...ಆತನ ನಿಷ್ಠಾವಂತ ಅನುಯಾಯಿ ಆಗಿದ್ದ. ಹಳೇ ಸಖ್ಯದ ಎಳೆ ಹಿಡಿದುಕೊಂಡು ಕಾಂಗ್ರೆಸ್ ಸೇರಲು ದಿನಕರ ಶೆಟ್ಟಿ ...ತ್ನಿಸುತ್ತಿರುವ ಸುದ್ದಿ ಕುಮಟೆಯಾದ್ಯಾಂತ ಹರಿದಾಡುತ್ತಿದೆ. ಈತನದೇ ದಾಯಾದಿ ಅಣ್ಣನಾಗಿದ್ದ ಮೋಹನ ಶೆಟ್ಟಿ ...ರಾದ ನಂತರ ಕಾಂಗ್ರೆಸ್‌ಗೆ ಗಟ್ಟಿ ಹುರಿಯಾಳು ಇಲ್ಲದಾಗಿದೆ. ಕಾಂಗ್ರೆಸ್‌ನೊಳಗಿನ ಡಜನ್‌ಗಟ್ಟಲೆ ಟಿಕೆಟ್ ಆಕಾಂಕ್ಷಿಗಳನ್ನು ...ಂಧಿಗೆ ತರಲು ದೇಶಪಾಂಡೆ ಅಂತಿಮವಾಗಿ ಈ ದಿನಕರ ಶೆಟ್ಟಿಯನ್ನು ಕಾಂಗ್ರೆಸ್‌ಗೆ ತಂದು ಕ್ಯಾಂಡಿಡೇಟ್ ...ಸುತ್ತಾರೆಂಬುದು ದೇಶಪಾಂಡೆ-ದಿನಕರ ಶೆಟ್ಟಿ ಬಂಟರ ಅಭಿಪ್ರಾಯ.

...ಕ್ಷೇತ್ರದ ಉದ್ದಗಲದ ಪರಿಚಯವಿರುವ ದಿನಕರ ಶೆಟ್ಟಿ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಗೆಲ್ಲುವ ಸಾಧ್ಯತೆ ಹೆಚ್ಚು. ತೀರಾ ...ನ್ನೆ-ಮೊನ್ನೆ ಶೆಟ್ಟರು ತನ್ನ ಬೆಂಬಲಿಗರ ಸಭೆ ಕರೆದು 'ಕಾಂಗ್ರೆಸ್ ಸೇರಿದರೆ ಹೇಗೆ?' ಎಂದು ಕೇಳಿದ್ದಾರೆ. "ಸದ್ಯ ಬೇಡಾ ... ಕಾಂಗ್ರೆಸ್-ಜೆಡಿಎಸ್ ಮೈತ್ರಿಯಾದರೆ ನೀವು ಹಾದಿ ಮೇಲೆ ಬೀಳ್ತೀರಿ...." ಎಂದು ಅನುಯಾಯಿಗಳು ಹೇಳಿದ್ದಾರೆ. ...ಕ್ಷನ್ ಗೆಲ್ಲಲೆಂದೇ ಶಾಸಕಗಿರಿ ಬಲದಿಂದ ಕೊಪ್ಪರಿಗೆ ಕಾಸು ಮಾಡಿಕೊಂಡಿರುವ ಶೆಟ್ರು ಕಾಂಗ್ರೆಸ್ ...ಡೇಟಾಗುತ್ತಾರೋ? ಜೆಡಿಎಸ್ ಅಭ್ಯರ್ಥಿಯಾಗುತ್ತಾರೋ? ಇದು ಈಗ ಕುಮಟಾದ ರಾಜಕಾರಣದ ಪಡಸಾಲೆಯಲ್ಲಿ ...ರುವ ಕುತೂಹಲಕರ ಚರ್ಚೆ!

...ರೆ ತಂದಾನೆಂಬ ಆತಂಕ ಕಾಗೇರಿಯದು. ಈತನ ...ಬಿಜೆಪಿ ಎಂಪಿ ಅನಂತ್ಕುಮಾಣಿಯೂ ಸೇರಿಕೊಂಡಿದ್ದಾನೆ. ...ಅಂತ್ಮಾಣಿ ಗ್ಯಾಂಗೇ ಕಳೆದ ಚುನಾವಣೆಯಲ್ಲಿ ಷಡ್ಯಂತ್ರ ...ಶಶಿಯನ್ನು ಸೋಲಿಸಿತ್ತು. ಅನಂತ್ಮಾಣಿ ಅದ್ಯಾಕೋ ... ಫೋರ ಶಶಿ ಕಂಡರೆ ಜನ್ಮಜನ್ಮಾಂತರದ ದುಷ್ಮನಿ ...ತೆ ಕೆಂಡಾಮಂಡಲ ಆಗುತ್ತಾನೆ.

...ಗಂತ ಶಶಿ ದುರ್ಬಲನಲ್ಲ. ಈತನ ತಂದೆ ವಿನಾಯಕ್ ...ಹೆಗಡೆ ಎಂಬ ರಂಗೀಲಾ ರಾಜನಿಗೆ ನೇರ ಬಿಜೆಪಿಯ ...ಅಡ್ವಾಣಿ ಜೊತೆಯೇ ಮಾತಾಡುವಷ್ಟು ತಾಕತ್ತು-ಸಲಿಗೆ ...ದರೆ ಸ್ಥಳೀಯ ಅನಂತ್ಮಾಣಿ ಬೆಂಬಲಿಗರಾದ ಮಾಜಿ ...ಡಾ. ಕರ್ಕಿ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ...ದ್ ಪ್ರಭು ವಗೈರೆ ಜನ ಬೆಂಬಲವಿಲ್ಲದ ಪೊಕ್ಕು ...ಗಳೆಲ್ಲ ಸೇರಿ ಶಶಿ ಮೇಲೆ ಬಿದ್ದಿದ್ದಾರೆ. ಹೀಗಾಗಿ ಶಶಿ ... ತಂದೆ ಇಬ್ಬರೂ ರಾಮಕೃಷ್ಣ ಹೆಗಡೆ ನಾಮಬಲ ನಂಬಿ ...ದ್ದಾರೆ. ಹಾಗೆ ನೋಡಿದರೆ ಕ್ಷೇತ್ರದಲ್ಲಿ ...-ಅರ್ಹನೆಂಬ ಇಮೇಜು ಇರುವ ಶಶಿ ಬಿಟ್ಟರೆ ... ಬೆಟರ್ ಕ್ಯಾಂಡಿಡೇಟಿಲ್ಲ!

ಸೂರಜ್ ಸೋನಿ

...ಸೂರಜ್ ನಾಯ್ಕ ಸೋನಿ ಎಂಬ ದೀವರ ಪೋರ ತಾನೇ ...ಕ್ಯಾಂಡಿಡೇಟ್ ಎಂದು ಸ್ವಯಂ ಘೋಷಿಸಿಕೊಂಡು ...ಶುರು ಮಾಡಿಬಿಟ್ಟಿದ್ದಾನೆ. ಭ್ರಷ್ಟ ಆರ್‌ಎಫ್‌ಓ ಅನ್ನಿಸಿದ್ದ ... ನಾಯ್ಕನ ಮಗನೀತ. ಅಪ್ಪ 'ಬಂ' ಭಂಟನಾಗಿದ್ದ. ... ಈತ ಸಸ್ಪೆಂಡ್ ಆಗಿದ್ದಾಗೆಲ್ಲಾ ಇದೇ 'ಬಂ' ಬಚಾವ್ ...ತ್ತಿದ್ದರು. ಬೆಂಗಳೂರಲ್ಲಿ 'ಬಂ' ಬಲದಿಂದಲೇ ಈತ ...ಮ ಖರೀದಿಸಿದ್ದ. ಅದನ್ನು ಮಾರಿ 'ಬಂ'ಗೆ ಸಣ್ಣ ಪಾಲು ...ತಾನೂ ಕೋಟ್ಯಾಧೀಶನಾಗಿದ್ದಾನೆ. ಈ ದುಡ್ಡಿನ ದಮ್ ...ಗೆ ಎಮ್ಮೆಲ್ಲೆ ತಲುಬು ಹತ್ತಿಸಿಬಿಟ್ಟಿದೆ.

...ಗ ಕೈಲಾಗದ ಮಂದಿ 'ಬಂ'ಗೂ ಕೈಕೊಟ್ಟು ಬಿಜೆಪಿ ...ವ ಸೂರಜ್‌ನ ಬಗ್ಗೆ ದೀವರಲ್ಲೇ ಬೇಸರವಿದೆ. 'ಬಂ'ಗೇ ...-ಮೋಸ ಮಾಡಿದ ಧಗಾಕೋರನೆಂಬ ಭಾವನೆ ...ದೆ. ಈ ಸೂರಜ್‌ನಲ್ಲಿರುವ ಕಪ್ಪುಹಣ ಕಂಡೇ ಎಂಪಿ ...ಣಿ ಈತನನ್ನು ತನ್ನ ಗ್ಯಾಂಗಿಗೆ ಸೇರಿಸಿಕೊಂಡಿದ್ದಾನೆ. ...ಷಣ ಹೆಗಡೆ ಹಣಿಯಲು ಇದೇ ತಕ್ಕ ಅಸ್ತ್ರ ...ಸೂಂಡು ಅನ್ನಂತಾಣೆ ಶಿಖಂಡಿ ಯುದ್ಧ ನಡೆಸಿದ್ದಾನೆ. ...ಜೆಪಿ ಯುವ ಮೋರ್ಚಾದ ಅಧ್ಯಕ್ಷತೆಯನ್ನು ಸೂರಜ್ ... ಕೊಟ್ಟಿರುವ ಎಂಪಿ ಮಾಣಿ ಆತನನ್ನೇ ಕುಮಟಾ ...ಹುರಿಯಾಳಾಗಿಸುವ ತಂತ್ರಗಾರಿಕೆಯಲ್ಲಿದ್ದಾನೆ. ...ಣಿಯನ್ನು ನಂಬಿ ಸೂರಜ್ ಸೋನಿ ಅಪ್ಪ ಮಾಡಿಟ್ಟ ...ಬ್ಬ ಖರ್ಚು ಮಾಡುತ್ತಿದ್ದಾನೆ.

... ಟುಬ್ಬಾಬಂದ ಮರೆವ ಒಂದೇ ಒಂದು ಹಿಡನ್ ...ದ ಈ ಸೋನಿ ಸೂರಜ್ ಎಮ್ಮೆಲ್ಲೆ ಆಗುವ 'ಆಟ' ...ಗೆ. ಈತನಿಗೆ ಜನಪರ ಬದ್ಧತೆ-ಸಿದ್ಧಾಂತ ಯಾವುದೂ ...ತ್ರ ಜನರ ಸುಖ-ಸಂಕಟದ ಅರಿವಿಲ್ಲ, ಕೊನೆಗೆ ... ಭೌಗೋಳಿಕ ಪರಿಚಯವೂ ಇಲ್ಲ. ಈತ ಅದೆಂಥ ... ಪುಢಾರಿ ಎಂಬುದಕ್ಕೆ ಆತ ನಡೆಸುವ 'ಕುಮಟಾ ಹಬ್ಬ' ಎಂಬ ಗಬ್ಬು ಜಾತ್ರೆಯೇ ಸಾಕ್ಷಿಯಂತಿದೆ! ಲಕ್ಷಾಂತರ ರೂಪಾಯಿ ಒಟ್ಟುಗೂಡಿಸಿ ಪೋಲು ಮಾಡುವ ಸೋನಿ ಗ್ಯಾಂಗ್ ವೇದಿಕೆಯಲ್ಲಿ ಹುಚ್ಚುಚ್ಚಾಗಿ ಪೋಸು ಕೊಡುತ್ತದೆ. ಇದೇ ಲಕ್ಷಾಂತರ ಹಣವನ್ನು ಹಳ್ಳಿಗಾಡಿನ ಶಾಲೆ-ಆಸ್ಪತ್ರೆ-ಅಸಹಾಯಕರ ನೆರವಿಗೆ ಬಳಸಿದ್ದರೆ ಪುಣ್ಯವಾದರೂ ಬರುತ್ತಿತ್ತು. ಹೀರೋಗಳಾಗಿ ಮಿಂಚಿ ಎಮ್ಮೆಲ್ಲೆ ಕ್ಯಾಂಡಿಡೇಟ್ ಎಂದು ಬಿಂಬಿಸಿಕೊಳ್ಳಲು ಸೋನಿ-ಶಾಸಕ ದಿನಕರ ಶೆಟ್ಟಿ ಜಿದ್ದಿಗೆ ಬಿದ್ದು ಒದ್ದಾಡುವುದು ಅಸಹ್ಯಕರ ಆಗಿರುತ್ತದೆ.

ಇಂಥ ಸೋನಿ ಸೂರಜ್ ಈಚೆಗೆ ನಡೆದ ಜಿಪಂ ಇಲೆಕ್ಷನ್‌ನಲ್ಲಿ ಹೆಂಡತಿಯನ್ನು ಸದಸ್ಯೆಯಾಗಿ ಮಾಡಿಕೊಂಡಿದ್ದಾನೆ. ಹಣ ಹರಿಸಿ ಯುದ್ಧಗೆದ್ದಿರುವ ಸೋನಿ ಅದೆಂಥ ಅವಿವೇಕಿ ಎಂದರೆ, ಹೆಂಡತಿಗೆ ಪ್ರೋಟೋಕಾಲ್ ನಂತೆ ಕರೆವ ಫಂಕ್ಷನ್‌ಗಳಿಗೆಲ್ಲ ಒಂದಿಷ್ಟು ಡೊನೇಷನ್ ಕೊಟ್ಟು ತನ್ನನ್ನು ವೇದಿಕೆಯಲ್ಲಿ ಕೂದ್ರಿಸುವಂತೆ ಸಂಘಟಕರ ಗೋಳು ಹೊಯ್ದುಕೊಳ್ಳುತ್ತಾನೆ. ಹೆಂಡತಿ ವೇದಿಕೆಯಲ್ಲಿ-ತಾನು ಸಭಿಕರಲ್ಲಿ ಕುಳಿತುಕೊಳ್ಳುವುದೇ ಈತನಿಗೆ ದೊಡ್ಡ ಅವಮಾನದ ಸಂಗತಿ. ಇಂಥ ಚೀಫ್ ಮೆಂಟಾಲಿಟಿ ಪುಢಾರಿ ಶಾಸಕನಾದರೆ ಕುಮಟೆ ಹೇಗೆ ಉದ್ಧಾರವಾದೀತು?

ಈ ಸೋನಿ ಸೂರಜ್ ಥೇಟ್ ಕಾಂಗ್ರೆಸ್‌ನ ಎಮ್ಮೆಲ್ಲೆ ಟಿಕೆಟ್ ಆಕಾಂಕ್ಷಿ ಯಶೋಧರ ನಾಯ್ಕನಂತೆಯೇ ಜನರಿಗೆ ಮಂಕುಬೂದಿ ಎರಚುತ್ತಿದ್ದಾನೆ. ಹಳ್ಳಿಗಾಡಿನ ಕ್ರೀಡಾ-ಸಾಂಸ್ಕೃತಿಕ ಕಾರ್ಯಕ್ರಮಕ್ಕೆಲ್ಲ ಹಣ ಕೊಟ್ಟು ವೇದಿಕೆ ಏರಿ ಭಾಷಣ ಬಿಗಿಯುತ್ತಿದ್ದಾನೆ. ದುಡ್ಡಿನ ರಾಜಕೀಯ ಮಾಡುತ್ತಿರುವ ಮೂರ್ಖ ಸೋನಿಯನ್ನು ಬ್ರಾಹ್ಮಣಶಾಹಿ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸುತ್ತಿದೆ. ಶೂದ್ರ ಸೋನಿಗೆ ಅದು ಅರ್ಥವಾಗುತ್ತಿಲ್ಲ. ಎಮ್ಮೆಲ್ಲೆ ಆಗುವ ಅಮಲಲ್ಲಿರುವ ಸೋನಿಯ ಮುಂಗೈಗೆ ತುಪ್ಪ ಸವರಿರುವ ಎಂಪಿ ಅನಂತ್ಮಾಣಿ-ವಿನೋದ ಪ್ರಭು ಒಳಗೊಳಗೇ ತಾವೇ ಕುಮಟೆಯ ಶಾಸಕನಾಗುವ ಹವಣಿಕೆಯಲ್ಲಿದ್ದಾರೆ.

ಸೋನಿ-ಶಶಿ ಮಧ್ಯೆ ಟಿಕೆಟ್ ಕದನ ಏರ್ಪಡಿಸಿ ರಾಜಿ ಕ್ಯಾಂಡಿಡೇಟಾಗುವ ಯೋಚನೆ ಎಂಪಿ ಅನಂತ್ಮಾಣಿಯದು. ಕಳೆದ ಲೋಕಸಭಾ ಇಲೆಕ್ಷನ್‌ನಲ್ಲಿ ಬರೀ ಇಪ್ಪತ್ತೂ ಚಿಲ್ಲರೆ ಸಾವಿರ ಮತದಿಂದ ಗೆದ್ದಿರುವ ಅನಂತ್ಮಾಣಿಗೆ ಮತ್ತೆ ತಾನು ಕಾರವಾರ ಕ್ಷೇತ್ರದಿಂದ ಎಂಪಿ ಆಗುವ ಧೈರ್ಯವಿಲ್ಲ. ಹೀಗಾಗಿ ಕುಮಟೆಯ ಶಾಸಕನಾಗುವ ಆಸೆ ಆತನಿಗೆ. ಕೊನೆಗೆ ತನಗಲ್ಲದಿದ್ದರೂ ತನ್ನ ಆಜ್ಞಾನುಧಾರಿ ಬಂಟ ವಿನೋದ್ ಪ್ರಭು ಎಂಬ ಒರಿಜಿನಲ್ ಚಿಡ್ಡಿಗೆ ಟಿಕೆಟ್ ಕೊಡಿಸುವ ಪ್ಲಾನ್ ಅನಂತ್ಮಾಣಿ ಹಾಕಿದ್ದಾನೆಂದು ಆತನ ಆಪ್ತವಲಯವೇ ಪಿಸುಗುಡುತ್ತಿದೆ. ಬಿಜೆಪಿಯೊಳಗೆ ಬ್ರಾಹ್ಮಣಶಾಹಿ ಮಸಲತ್ತು ಸೂಕ್ಷ್ಮವಾಗಿ ಗಮನಿಸಿದರೆ ಶಶಿ-ಸೂರಜ್ ಬಲಿಯಾಗುವ ಸೂಚನೆ ಗೋಚರಿಸುತ್ತದೆ. ಹಾವು-ಮುಂಗುಸಿಯಂತಾಗಿರುವ ಮಂತ್ರಿ ಕಾಗೇರಿ ಮತ್ತು ಎಂಪಿ ಅನಂತ್ಮಾಣಿ ತಂತಮ್ಮ ಅಸ್ತಿತ್ವಕ್ಕಾಗಿ ಒಂದಾಗಿ ಪಾರ್ಟಿಯೊಳಗಿನ ಶೂದ್ರರನ್ನು ಆಹುತಿ ಮಾಡುತ್ತಲೇ ಬಂದಿದ್ದಾರೆ. ✿

...5

ವೈಭವದ ಬದುಕು ಪಂಕ್ಚರ್

ಇದೇ ಸೆಪ್ಟೆಂಬರ್‌ಗೂ ಮುನ್ನ ರೆಡ್ಡಿಯ ಮಗ ಕೀರುತಿ ತಾನು ಓದುತ್ತಿರುವ ಪೀಪುಲ್ ಟ್ರೀ ಸ್ಕೂಲ್‌ಗೆ ಹೊರಟನೆಂದರೆ ಅವನ ಕಾರಿನ ಹಿಂದೆ ಮುಂದೆ ಹತ್ತು ಕಾರುಗಳ, ಬಾಡಿಗಾರ್ಡುಗಳ ಪರೇಡೇ ಹೊರಡುತ್ತಿತ್ತು. ಆದರೀಗ ಒಬ್ಬ ಬೆಂಗಾವಲಿಗನ ಜೊತೆಗೆ ಆ ಹುಡುಗ ಒಂದು ಕಾರಿನಲ್ಲೆ ಅಪ್-ಅಂಡ್-ಡೌನ್ ಮಾಡುತ್ತಿದ್ದಾನೆ.

ರೆಡ್ಡಿ ಮನೆಯ ದಿನಸಿ ಖರ್ಚೂ ಏಕಾಏಕಿ ಇಳಿದು ಹೋಗಿದೆ. ರೆಡ್ಡಿ ದರ್ಬಾರು ಅಡೆತಡೆ ಇಲ್ಲದೆ ನಡೆಯುತ್ತಿದ್ದಾಗ ಆತನ ಮನೆಯಲ್ಲಿ ತುಂಬಿಕೊಂಡಿರುತ್ತಿದ್ದ ಅತಿಥಿಗಳಿಂದಾಗಿ ದಿನಸಿಯ ಲಿಸ್ಟೂ ವಿಪರೀತ ದೊಡ್ಡದಿರುತ್ತಿತ್ತು. ಆದರೀಗ ಮನೆಯತ್ತ ಯಾರೂ ಸುಳಿಯುತ್ತಿಲ್ಲ. ಹೆಚ್ಚೆಂದರೆ ರೆಡ್ಡಿ ಹೆಂಡತಿಗೆ ಸಾಂತ್ವನ ಹೇಳಲು ಕರುಣಾ, ಸೋಮು, ಶ್ರೀರಾಮು ಫ್ಯಾಮಿಲಿ ಮಾತ್ರ ಆಗಿಂದಾಗ್ಗೆ ಬಂದು ಹೋಗುತ್ತಿರುತ್ತದೆ. ಹಾಗಾಗಿ ದಿನಸಿ ಲಿಸ್ಟೂ ಕೆಲವೇ ಕೆಲವು ಐಟಮ್ಮುಗಳ ಸಣ್ಣ ಚೀಟಿಯಾಗಿದೆ.

ಆರಕ್ಷಕ, ಅಂಗರಕ್ಷಕರೇ ಅದೃಶ್ಯ

ರೆಡ್ಡಿ ಅದಿರು ಗಣಿಗಳನ್ನು ಲೂಟಿ ಮಾಡುತ್ತಿದ್ದಾಗ ತನ್ನ ಪ್ರಾಣಕ್ಕೆ ಅಪಾಯ ಇದೆ ಎಂದು ಅರಿತಿದ್ದ. ಹೇಗಿದ್ದರೂ ಆತ ಮಂತ್ರಿ ಕೂಡ ಆಗಿದ್ದನಲ್ಲ ಆಗ ತನ್ನ ಪ್ರಭಾವ ಬೀರಿ ತಮಗೊಂದು ರಕ್ಷಣಾ ಪಡೆಯ ಅಗತ್ಯವಿದೆ ಎಂದಿದ್ದ. ಆಗ ರಾಜ್ಯ ಸರ್ಕಾರ ನಲವತ್ತು ಪೊಲೀಸರನ್ನು ರೆಡ್ಡಿಯ ಮನೆ ಕಾಯಲೆಂದೇ ನೇಮಿಸಿತ್ತು.

ರೆಡ್ಡಿಯ ಗಣಿ ಕೊಳ್ಳೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ಆಂಧ್ರದ ರಾಯಲಸೀಮೆಯಂತ ಪಕ್ಕಾ ಒರಟು ನೆಲದಲ್ಲೂ ಅವ್ಯಾಹತವಾಗಿತ್ತು. ಅಲ್ಲಿ ಆಂಧ್ರದ ಮಾಜಿ ಸಿಎಂ ರಾಜಶೇಖರ ರೆಡ್ಡಿ ಕುಟುಂಬದ ಸಾಥ್ ಇದೆಯಾದರೂ ಫ್ಯಾಕ್ಷನಿಸಮ್ ಹಿನ್ನೆಲೆಯ ಅಲ್ಲಿನ ನೆತ್ತರು ದಾಹದ ಅರಿವಿದ್ದ ರೆಡ್ಡಿಗೆ ಸರ್ಕಾರಿ ರೈಫಲ್‌ಗಳು ಪ್ರಯೋಜನಕ್ಕೆ ಬಾರದು ಎಂಬುದೂ ತಿಳಿದಿತ್ತು. ಹಾಗಾಗಿ ಬಿಹಾರ್, ಉತ್ತರಪ್ರದೇಶ ಮತ್ತು ಹರ್ಯಾಣದಿಂದ ಕಟ್ಟುಮಸ್ತಾದ, ತರಬೇತಿ ಪಡೆದ 25 ಖಾಸಗಿ ಗನ್‌ಮ್ಯಾನ್ ಕಮ್ ಬಾಡಿಗಾರ್ಡ್‌ಗಳನ್ನು ಕರೆತಂದು ತನ್ನದೇ ಆದ ರಕ್ಷಣಾ ಕೋಟೆಯನ್ನೇ ನಿರ್ಮಿಸಿಕೊಂಡಿದ್ದ.



ತಿಮ್ಮಪ್ಪನಿಗೆ ಕಿರೀಟ...



ಐಭೋಗದ ಓಡಾಟ...

ಸಾಮರ್ಥ್ಯ ಹಾಗೂ ಅನುಭವದ ಆಧಾರದ ಮೇಲೆ ಒಬ್ಬೊಬ್ಬರಿಗೆ ತಿಂಗಳಿಗೆ 30 ರಿಂದ 50 ಸಾವಿರಗಳ ಸಂಬಳವನ್ನು ಫಿಕ್ಸ್ ಮಾಡಿದ್ದ. ಈ ಬಾಡಿಗಾರ್ಡ್‌ಗಳಿಗೆ ತಿಂಗಳಿಗೆ ಏಳರಿಂದ ಹನ್ನೆರಡು ಲಕ್ಷವನ್ನು ರೆಡ್ಡಿ ಖರ್ಚು ಮಾಡುತ್ತಿದ್ದ.

ಈಗ ಅಷ್ಟೆಲ್ಲಾ ಖರ್ಚು ಮಾಡುವ ತಾಕತ್ತು ರೆಡ್ಡಿ ಕುಟುಂಬಕ್ಕುಳಿದಿಲ್ಲ. ಪರಿಣಾಮವಾಗಿ ಒಬ್ಬಿಬ್ಬರನ್ನು ಬಿಟ್ಟು ಎಲ್ಲರನ್ನೂ ವಾಪಸ್ ಕಳುಹಿಸಲಾಗಿದೆ. ಇನ್ನು ಆತನ ಮನೆಯ ಸುತ್ತ ರೈಫಲ್ ಹೊತ್ತು ನಿಂತಿದ್ದ ಪೊಲೀಸರ ಸಂಖ್ಯೆಯನ್ನು ರೆಡ್ಡಿ ಅರೆಸ್ಟಾಗುತ್ತಿದ್ದಂತೆ 40 ರಿಂದ ಐದಕ್ಕೆ ಇಳಿಸಲಾಗಿತ್ತು. ಈಗ ಉಪಚುನಾವಣೆ ಎದುರಾಗಿದ್ದನ್ನೇ ನೆಪ ಮಾಡಿಕೊಂಡು ಜಿಲ್ಲಾಡಳಿತ ಎಲೆಕ್ಷನ್ ಬಂದೋಬಸ್ತಿಗೆಂದು ಆ ಐವರು ಪೇದೆಗಳನ್ನೂ ವಾಪಸ್ ಕರೆಸಿಕೊಂಡಿದೆ.

ದುಬಾರಿ ಜೇಪಿ ರೆಡ್ಡಿ ಈ ಮೊದಲು ಬಾಲಿವುಡ್ ನಟ ಸಲ್ಮಾನ್‌ಖಾನ್ ಮನೆಯಲ್ಲಿ ಬೇಳೆ ಬೇಯಿಸಿಕೊಂಡಿದ್ದ ಷೆಫ್ ಅನ್ನು ಕೇವಲ ಪ್ರೆಸ್ಟೀಜ್‌ಗೆಂದು ತನ್ನ ಮನೆಗೆ ಕರೆಸಿಕೊಂಡಿದ್ದ. ಅಡುಗೆ ಕೆಲಸಕ್ಕೆಂದು ನೇಮಿಸಿಕೊಂಡಿದ್ದ ಈ ಬಾಣಸಿಗನ ತಿಂಗಳ ಸಂಬಳ ಬರೋಬ್ಬರಿ ಐವತ್ತು ಸಾವಿರ! ಆದರೀಗ ಆತನೂ ಕಾಣಿಸುತ್ತಿಲ್ಲ. ಕೆಲವರ ಪ್ರಕಾರ ಹೊಸಪೇಟೆಯಲ್ಲಿರುವ ರೆಡ್ಡಿ ಒಡೆತನದ ಫೈವ್‌ಸ್ಟಾರ್ ಹೋಟೆಲಿನಲ್ಲಿ ಆತ ಕೆಲಸ ಮಾಡುತ್ತಿದ್ದಾನಂತೆ. ಆದರೆ ಬಾಡಿಗಾರ್ಡ್‌ಗಳಿಗಾದ ಗತಿ ಅವನಿಗೂ ಆಗಿರಬಹುದು.

ದೇವರಿಗೂ ದಿಕ್ಕಿಲ್ಲ

ಜನಾರ್ದನ ರೆಡ್ಡಿ ಅದೆಂತ ದೈವ ಭಕ್ತ ಎಂಬುದು 2009ರಲ್ಲಿ ತಿರುಪತಿ ತಿಮ್ಮಪ್ಪನಿಗೆ 42 ಕೋಟಿಯ ವಜ್ರಖಚಿತ ಟೋಪಿ (ಕಿರೀಟ) ತೊಡಿಸಿ ಬಂದಾಗಲೇ ಗೊತ್ತಾಗಿತ್ತು. ಯಾರದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ಮಾಡುವ ರೆಡ್ಡಿ ಮತ್ತೆರಡು ಸ್ಕೀಮುಗಳನ್ನು ಕೈಗೆತ್ತಿಕೊಂಡಿದ್ದ. ತಾನು ಪ್ರವಾಸೋದ್ಯಮ ಸಚಿವನಾಗಿದ್ದಾಗ ಓಬಳಾಪುರಮ್‌ನ ಸುಗ್ಗಲಮ್ಮದೇವಿ ಹಾಗೂ ಬಳ್ಳಾರಿಯ ಕನಕದುರ್ಗ-ದೇವಸ್ಥಾನಗಳ ನವೀಕರಣಕ್ಕೆ ಇಲಾಖೆಯಿಂದ ಹಣ ಮಂಜೂರು ಮಾಡಿಸಿ ಅದರ ಸಂಪೂರ್ಣ ಉಸ್ತುವಾರಿಯನ್ನು ತಾನೇ ವಹಿಸಿಕೊಂಡಿದ್ದ.

ತನ್ನ ಪ್ರತಿ ಹುಟ್ಟು ಹಬ್ಬಕ್ಕೂ ನಾಲ್ಕು ಕೋಟಿಯ ರಾಲ್ಸ್‌ರಾಯ್ಸ್ ಕಾರನ್ನು ತಾನೇ ಸ್ವತಃ ಡ್ರೈವ್ ಮಾಡಿಕೊಂಡು ದೇವಸ್ಥಾನಕ್ಕೆ ಬಂದು ಕ್ಷೀರಾಭಿಷೇಕ ಮಾಡಿಸುವುದನ್ನು ರೆಡ್ಡಿ ಮರೆಯುತ್ತಿರಲಿಲ್ಲ. ಈ ದೇವತೆಗಳಿಂದಾಗಿಯೇ ತನಗೆ ಈ ಪರಿ ದುಡ್ಡು ಬಂದಿದೆ ಎಂಬ ನಂಬಿಕೆ ಆತನಿಗಿತ್ತು. ಅದಕ್ಕೆಂದೇ ಅವುಗಳ ನವೀಕರಣದ ಮುಂದಾಳತ್ವಕ್ಕೆ ತಾನೇ ನಿಂತು ತಮಿಳುನಾಡಿನ ಒಬ್ಬ ಆಸಾಮಿಗೆ ಕಾಂಟ್ರಾಕ್ಟ್ ನೀಡಿದ್ದ.

ಆದರೆ ರೆಡ್ಡಿ ಚಂಚಲಗುಡ ಜೈಲು ಸೇರುತ್ತಿದ್ದಂತೆ ದೇವಸ್ಥಾನಗಳ ರಿಪೇರಿಗೆ ಬಾಕಿ ಹಣ ಪಾವತಿಯಾಗದೆ ಕಾಂಟ್ರಾಕ್ಟರ್ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿದ್ದಾನೆ. ಗೋಪುರಗಳಿಲ್ಲದ ಗುಡಿಗಳಲ್ಲಿ ಸದ್ಯ ದೇವರೂ ರೆಡ್ಡಿಯ ಜಾಮೀನಿಗೆ ಕಾಯುತ್ತಿರಬಹುದೇನೋ?

ಪ್ರತೀ ವರ್ಷ ಗಣೇಶ ಚತುರ್ಥಿ ಹಾಗೂ ದೀಪಾವಳಿ ಸಂದರ್ಭದಲ್ಲಿ ಮನೆಗೆ ಬಂದವರಿಗೆಲ್ಲ ರೆಡ್ಡಿ ಫ್ಯಾಮಿಲಿ ಹಣವನ್ನೋ, ಗಿಫ್ಟನ್ನೋ ಕೊಡುತ್ತಿತ್ತು. ಆಗ 'ಕುಟೀರ'ದ ಮುಂದೆ ಜನ ಸಾಲು ಗಟ್ಟಿ ನಿಲ್ಲುತ್ತಿದರು. ಆದರೆ ಈ ವರ್ಷ ಅಂತ ದೃಶ್ಯವೇ ಕಂಡುಬರಲಿಲ್ಲ. ಆದರೂ ಕೆಲ ಜನ ಏನಾದರೂ ಸಿಗಬಹುದೆಂಬ ನಿರೀಕ್ಷೆ ಇಟ್ಟು 'ಕುಟೀರ'ಕ್ಕೆ ಹೋದರಾದರೂ ಅವರೆಲ್ಲ ಖಾಲಿ ಕೈಯಲ್ಲಿ ಬರಬೇಕಾಯಿತು.

ಅಂದ ಹಾಗೆ ಬಳ್ಳಾರಿ ಗಣಿಧಣಿಗಳಿಗೆ ಈ ದುಸ್ಥಿತಿ ಎದುರಾಗಿರುವುದು ಆಂಧ್ರದ ಅಕ್ರಮ ಗಣಿಗಾರಿಕೆ ಕುರಿತ ಸಿಬಿಐ ತನಿಖೆಯಿಂದಾಗಿ. ಒಂದೊಮ್ಮೆ ಕರ್ನಾಟಕದ ಗಣಿ ಕರ್ಮದ ಕುರಿತು ಸಿಬಿಐ ಮೈಕೊಡವಿಕೊಂಡು ಎದ್ದಿದ್ದೇ ಆದಲ್ಲಿ ರೆಡ್ಡಿಗಳ ಗತಿ ಇನ್ನೂ ಏನೇನಾಗಬೇಡ... ✿

ಸಿಬಿಐನವನೇ ಸೆಕ್ಯುರಿಟಿ ಗಾರ್ಡ್ ಆಗಿದ್ದ!

ಜನಾರ್ದನ ರೆಡ್ಡಿ ಬಲು ಚಾಣಾಕ್ಷ. ಅಂತವನನ್ನೂ ಸಿಬಿಐ ಟ್ರ್ಯಾಪ್ ಮಾಡಿ ಕಂಬಿ ಕೌಂಟ್ ಮಾಡಲು ಕಳಿಸುತ್ತೆಂದರೆ ಅದರ ಗೇಮ್ ಪ್ಲ್ಯಾನ್ ಇನ್ನೆಂತದ್ದಿರಲಿಕ್ಕಿಲ್ಲ.

2009ರಲ್ಲೇ ಸಿಬಿಐ ಅಕ್ರಮ ಗಣಿಗಾರಿಕೆ ಕುರಿತು ರೆಡ್ಡಿಗಳನ್ನು ತಡವಿಕೊಳ್ಳಬೇಕಿತ್ತಾದರೂ ಆಂಧ್ರ ಹೈಕೋರ್ಟ್‌ನಲ್ಲಿ ರೆಡ್ಡಿ ಪಡೆದ ತಡೆಯಾಜ್ಞೆಯಿಂದ ಸುಮ್ಮನಿತ್ತು. ಆದರೆ 2010ರ ಡಿಸೆಂಬರ್‌ನಲ್ಲಿ ಅದೇ ಹೈಕೋರ್ಟ್ ತಡೆಯಾಜ್ಞೆಗೆ ಬ್ರೇಕ್ ನೀಡಿದ ಪರಿಣಾಮ ಸಿಬಿಐ ಗಣಿಧಣಿಗಳ ಮೇಲೆರಗಲು ಸಿದ್ಧತೆ ನಡೆಸಿಕೊಂಡಿತ್ತು.

ಸಿಬಿಐ ರೇಡೆಂದರೆ ವಾರೆಂಟ್ ಹಿಡಿದು ಮನೆ-ಮನೆ ತಡಕಾಡಿದ ಹಾಗಲ್ಲ. ಮುಗಿಬಿದ್ದರೆ ಎಲ್ಲಾ ಮುಗಿಸಿ ಹೋಗುವುದೇ ಅದರ ಸ್ಪೆಷಾಲಿಟಿ. ಹಾಗಾಗಿ ರೆಡ್ಡಿಯ ಆಳ-ಅಗಲಗಳನ್ನು ತಿಳಿದುಕೊಳ್ಳಲು ಒಂದು ಮಾಸ್ಟರ್ ಪ್ಲ್ಯಾನ್ ರೂಪಿಸಿ, ರೇಡ್ ನಡೆಯುವ ಮೂರು ತಿಂಗಳು ಮುಂಚೆ ತನ್ನೊಬ್ಬ ಆಫೀಸರ್‌ನನ್ನು ಸೆಕ್ಯುರಿಟಿ ಗಾರ್ಡ್ ರೂಪದಲ್ಲಿ ರೆಡ್ಡಿ ಪಡೆಯನ್ನು ಸೇರುವಂತೆ ನೋಡಿಕೊಂಡಿತ್ತು. ಆತ ರೆಡ್ಡಿಯ ವಿಶ್ವಾಸವನ್ನು ಗೆದ್ದು ಆತನ ಪಡೆ ಸೇರಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ ಮಾತ್ರವಲ್ಲ, ರೆಡ್ಡಿಯ ಚಲನ ವಲನ, ಆತನ ಅಕ್ರಮ ದಂಧೆ, ಖಾಸಗಿ ವಲಯದ ಮಾಹಿತಿಗಳನ್ನೆಲ್ಲ ಸಿಬಿಐಗೆ ರವಾನಿಸುತ್ತಿದ್ದ.

ಸೆಪ್ಟೆಂಬರ್ 5 ರಂದು ರೇಡ್ ನಡೆಯುವುದಕ್ಕೆ ಮೂರು ದಿನ ಮುಂಚೆ ಫ್ಯಾಮಿಲಿ ಪ್ರಾಬ್ಲಮ್‌ನ ನೆಪ ನೀಡಿ ಆತ ಗಾರ್ಡ್ ಕೆಲಸ ಬಿಟ್ಟು ಹೋಗಿದ್ದ. ಈ ಬಗ್ಗೆ ಹೆಚ್ಚೇನು ತಲೆ ಕೆಡಿಸಿಕೊಂಡಿರದಿದ್ದ ರೆಡ್ಡಿಗೆ ರೇಡ್ ದಿನ ಸಿಬಿಐ ತಂಡದಲ್ಲಿ ತನ್ನ ಸೆಕ್ಯುರಿಟಿ ಗಾರ್ಡ್ ಕೂಡಾ ನುಗ್ಗಿ ಬಂದಾಗಲೇ ತಾನು ಯಾಮಾರಿರುವುದರ ಕುರಿತು ಖಾತ್ರಿಯಾದದ್ದು.

ಅದಕ್ಕೇ ಹೇಳೋದು ಸಿಬಿಐ ಅಂದ್ರೆ ಸುಮ್ನೇನಾ......? ✿

ಸಾಂಪ್ರದಾಯಿಕ ಕ್ರಿಕೆಟ್‌ಅನ್ನು ತನ್ನ ಅಣು ಅಣುವಿನಲ್ಲೂ ಪ್ರೀತಿಸುವ, ತನ್ನ ಅಂಕಣ ಬರವಣಿಗೆಗೆ ತೀವ್ರತೆಯನ್ನು, ಹೊಸ ಕಾವನ್ನು ತಂದುಕೊಟ್ಟ ಖ್ಯಾತ ಬರಹಗಾರ ಪೀಟರ್ ರೋಬಕ್ ಇನ್ನಿಲ್ಲ ಎಂಬ ಸುದ್ದಿ ಕ್ರೀಡಾಪ್ರೇಮಿಗಳಲ್ಲಿ ದಿಗ್ಭ್ರಮೆ ಮೂಡಿಸಿದೆ. ವಿಚಿತ್ರ ತಿರುವುಗಳನ್ನು ಪಡೆದ ಆಸ್ಟ್ರೇಲಿಯಾ-ಆಫ್ರಿಕಾ ನಡುವೆ ನಡೆದ ನ್ಯೂಲೆಂಡ್ಸ್‌ನ ಪ್ರಥಮ ಟೆಸ್ಟನ್ನು 'ಸಿಡ್ನಿ ಮಾರ್ನಿಂಗ್ ಹೆರಾಲ್ಡ್' ಪತ್ರಿಕೆಗೆ ವರದಿ ಮಾಡಿದ ಕೆಲವೇ ಗಂಟೆಗಳಲ್ಲಿ ರೋಬಕ್ ಸಂಶಯಾಸ್ಪದ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು ತೀರಾ ವಿಷಾದನೀಯ ಸಂಗತಿ. ಇಂಗ್ಲೆಂಡ್, ಆಸ್ಟ್ರೇಲಿಯಾ ಹಾಗೂ ಭಾರತ ಉಪಖಂಡದಲ್ಲಿ ತನ್ನ ವಿನೂತನ ಶೈಲಿಯ ಬರವಣಿಗೆಯಿಂದ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡ ಈತನ ನಿಧನದಿಂದ ನಿಜ ಅರ್ಥದಲ್ಲಿ ಕ್ರಿಕೆಟ್ ಬಡವಾಗಿದೆ. ಹಾಗಿದ್ದರಿಂದಲೇ, ಕ್ರಿಕೆಟ್‌ನ ಖ್ಯಾತನಾಮರುಗಳು ತಮ್ಮ ಶ್ರದ್ಧಾಂಜಲಿಯಲ್ಲಿ 'Roebuck is Roebuck. He cannot be substituted' ಎಂದು ಸರಿಯಾಗಿಯೇ ಪ್ರತಿಕ್ರಿಯಿಸಿದ್ದಾರೆ.

ನೂರಾರು ಮಾಜಿ-ಹಾಲಿ ಕ್ರಿಕೆಟಿಗರು ಅಂಕಣ ಬರೆಯುತ್ತಿದ್ದರೂ, ರೋಬಕ್‌ನ ಅಂಕಣಕ್ಕಾಗಿ ಜನ ಕಾದು ಕುಳಿತು ಓದುತಿದ್ದುದು ಈತನ ಬರಹದ ಶಕ್ತಿಯನ್ನು ತೋರಿಸುತ್ತದೆ. ಈತನ ಅಂಕಣಬರಹಕ್ಕಿರುವ ಮಾಂತ್ರಿಕ ಶಕ್ತಿಯೇ ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿತ್ತು. ಇವನ ಬರಹ ಕಾಟಾಚಾರಕ್ಕೆ ಏನೋ ನಾಲ್ಕು ಲೈನು ಗೀಚುವ ಅಥವಾ ಬಜಾರು ಗೈಡುಗಳಂತೆ ದಿನದ ಆಟವನ್ನು ಸವಕಳಿ ಭಾಷೆಯಲ್ಲಿ ಸಾರಾಂಶ ಕೊಡುವ ಅನೇಕ ಬರಹಗಾರರಂತಿರಲಿಲ್ಲ. ಭಾಷೆಯ ಮೇಲಿನ ಅದ್ಭುತ ನಿಯಂತ್ರಣ, ಕಾವ್ಯಾತ್ಮಕ ಭಾಷೆಯ ಬಳಕೆ, ನೇರವಾದ ನಿಖರವಾದ ವಿಶ್ಲೇಷಣೆ ಈತನ ಅಂಕಣದಲ್ಲಿ ಎದ್ದು ಕಾಣುತಿತ್ತು. ಕ್ರಿಕೆಟ್ ಕುರಿತು ಫ್ಯಾಶನೇಟ್ ಆಗಿ ಬರೆಯುವ ಅಪರೂಪದ ಬರಹಗಾರನಾದ ಈತನ ಬರವಣಿಗೆಯಲ್ಲಿ ಚಿಕಿತ್ಸಕ ಒಳನೋಟ, ಅಪರೂಪದ ಖಾಚಿತ್ಯ ಆಟ ಮತ್ತು ಆಟಗಾರರ ಹಲವು ಮಜಲುಗಳನ್ನು ಒಮ್ಮೆಗೆ ದರ್ಶನ ಮಾಡಿಸುವ ಕಸುವು ಕಾಣಿಸುತ್ತಿತ್ತು. ಈತನ ಬರಹದಲ್ಲಿ ಕಾಣುವ ಸೌಂದರ್ಯದ ಹಿಂದೆ ಅಪಾರ ತಿಳುವಳಿಕೆಯ ನೆಲಗಟ್ಟಿತ್ತು. ಪಂದ್ಯದ ಗತಿಯನ್ನು ಗ್ರಹಿಸಿ ವ್ಯಾಖ್ಯಾನಿಸುವ ಕಲೆ ಈತನಿಗೆ ದಕ್ಕಿತ್ತು.

ರೋಬಕ್ ಬರಹಕ್ಕೆ ಮೋಸದಾಟವನ್ನು ಒಪ್ಪದ ನೈತಿಕತೆಯ ಒಂದು ಭದ್ರ ಬುನಾದಿ ಇತ್ತು. ಆದ್ದರಿಂದಲೆ ಹ್ಯಾನ್ಸಿ ಕ್ರೋನಿಯೇ ಮೋಸದಾಟದಲ್ಲಿ ಸಿಕ್ಕಿಬಿದ್ದಾಗ ಮತ್ತು ಸಿಡ್ನಿ ಟೆಸ್ಟ್‌ನಲ್ಲಿ ಆಸ್ಟ್ರೇಲಿಯನ್ನರು ಅಗತ್ಯಕ್ಕಿಂತ ಹೆಚ್ಚು ಎದುರಾಳಿಗಳ ಮೇಲೆ ಬಯ್ಗುಳ ಉಪಯೋಗಿಸಿದಾಗ ರೋಬಕ್ ಅದನ್ನು ತೀವ್ರವಾಗಿ ಖಂಡಿಸಿದ್ದ. ಅನೇಕ ಬಾರಿ ಇವನಿಂದ ತೀವ್ರವಾಗಿ ಟೀಕಿಸಿಕೊಂಡ ಆಟಗಾರರೂ ಕೂಡಾ ಇವನನ್ನು ಗೌರವಿಸುತಿದ್ದರು ಎಂದರೆ ಅದು ಅವನ ಬರವಣಿಗೆಗೆ ಸಂದ ಗೌರವ. ಆದ್ದರಿಂದಲೇ ರಿಕಿ ಪಾಟಿಂಗ್ ಈತನ ಮರಣದ ಸುದ್ದಿ ತಿಳಿದ ಕೂಡಲೇ ತೀರಾ ಆಘಾತಗೊಂಡು ಪ್ರತಿಕ್ರಿಯೆ ನೀಡಿದ. (2008 ರ ಸಿಡ್ನಿ ಟೆಸ್ಟ್‌ನ ಮಂಕಿಗೇಟ್ ಪ್ರಕರಣದಲ್ಲಿ ರೋಬಕ್ ರಿಕಿ ಪಾಂಟಿಂಗ್‌ನನ್ನು ಲೆಫ್ಟ್ ರೈಟ್ ಆಗಿ ತರಾಟೆಗೆ ತೆಗೆದುಕೊಂಡಿದ್ದ) ಅದೇ ರೀತಿ ಶೇನ್ ವ್ಯಾಟ್ಸನ್ ಹಾಗೂ ಮೈಕೆಲ್ ಕ್ಲಾರ್ಕ್ ಕಣ್ಣಾಲಿ ತುಂಬಿಕೊಂಡು ಪ್ರತಿಕ್ರಿಯಿಸಿದರು. ಅಂದರೆ ಇವನಿಂದ ತೀವ್ರ ಟೀಕೆಗೆ ಒಳಗಾದವರೂ ಇವನ ದೃಷ್ಟಿಕೋನಕ್ಕಿರುವ ಬಹು ಆಯಾಮವನ್ನು ಗೌರವಿಸುತ್ತಿದ್ದರು.


ರೋಬಕ್ ಕೇವಲ ಕ್ರೀಡಾ ಅಂಕಣಕಾರನಲ್ಲ, ಈತ ಬಹಳ ಜನಪ್ರಿಯ ರೇಡಿಯೋ ಕಾಮೆಂಟೇಟರ್ ಕೂಡಾ ಹೌದು. ಆಸ್ಟ್ರೇಲಿಯಾ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಎಬಿಸಿ)ಗೆ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ವೀಕ್ಷಕ ವಿವರಣಕಾರನಾಗಿ ಕೆಲಸ ಮಾಡುತ್ತಲೇ ಬಂದಿದ್ದಾನೆ. ಬರಹದಂತೆ ಈತನ ಕಂಠಕ್ಕೂ ಒಂದು ಮಾಂತ್ರಿಕ ಸ್ಪರ್ಶವಿದೆ. ಈತ ನೀಡುವ ಮುನ್ನೋಟ - ರೇಡಿಯೋದಲ್ಲಾಗಲಿ/ಪತ್ರಿಕೆಗಳಲ್ಲಾಗಲಿ - ಮಾಡುವ ವಿಶ್ಲೇಷಣೆ ಬಹಳಷ್ಟು ಬಾರಿ ಸರಿಯಾಗಿರುತ್ತಿತ್ತು. ಇದು ಒಬ್ಬ ಶ್ರೇಷ್ಠ ಕ್ರೀಡಾ ಬರಹಗಾರನ ಲಕ್ಷಣ. 1991 ರ ಟೆಸ್ಟ್ ಪಂದ್ಯವೊಂದರಲ್ಲಿ ವೀಕ್ಷಕ ವಿವರಣೆ ನೀಡಲು ನಮ್ಮದೇ ದೇಶದ ಹರ್ಷ ಬೋಗ್ಲೆ ಸ್ಟುಡಿಯೋದಲ್ಲಿ ಕುಳಿತಾಗ ಇವನ ಖ್ಯಾತಿಗೆ ಹೆದರಿ ಬಹಳ ನರ್ವಸ್ ಆಗಿ ಕುಳಿತಿದ್ದನಂತೆ. ಈತನ ಆತ್ಮಚರಿತ್ರೆಗೆ ಮುನ್ನುಡಿ ಬರೆಯುತ್ತಾ ಹರ್ಷ ಬೋಗ್ಲೆ 'ತೆಂಡೂಲ್ಕರ್ ಮೈದಾನದಲ್ಲಿ ಆಟವಾಡಲೇ ಹುಟ್ಟಿದಂತೆ ರೋಬಕ್ ಬರೆಯಲೇ ಹುಟ್ಟಿದ್ದಾನೆ' ಎಂದು ಬೆರಗಿನಿಂದ ಪ್ರತಿಕ್ರಿಯಿಸಿದ್ದಾನೆ. ಎಬಿಸಿಯ ಮತ್ತೊಬ್ಬ



ನಂದಿ ಹೋದ ಕ್ರಿಕೆಟ್‌ನ ಮಾಂತ್ರಿಕ ಬರಹಗಾ

ಪೀಟರ್ ರೋಬಕ

ಅಮೋಘ ವಿಶ್ಲೇಷಕ ಜಿಮ್ ಮ್ಯಾಕ್ಸ್‌ವೆಲ್ ಈತನ ಆತ್ಮೀಯ ಜೊತೆಗಾರನಾಗಿದ್ದ. ಜಿಮ್ ಮ್ಯಾಕ್ಸ್‌ವೆಲ್, ರೋಬಕ್, ಟ್ರೆವರ್ ಬೈಲಿ, ಕ್ರಿಸ್ ಮಾರ್ಟಿನ್ ಜೆಂಕಿನ್ಸ್, ಡಾನ್ ಮೋಸಿ, ಬ್ರಿಯಾನ್ ಜಾನ್‌ಸ್ಟನ್‌ನಂತವರನ್ನು ಬಿ.ಬಿ.ಸಿ-ಎಬಿಸಿ ರೇಡಿಯೋದಲ್ಲಿ ಕೇಳುವುದು 80-90 ರ ದಶಕದಲ್ಲಿ ನಮ್ಮಂತವರ ಸಾರ್ಥಕ ಕ್ಷಣಗಳಾಗಿತ್ತು. ರೋಬಕ್‌ನ ಬರವಣಿಗೆಯನ್ನು ಆಸ್ವಾದಿಸು



ವುದು ಒಬ್ಬ ಪಂಡಿತ ಪರಂಪರೆಯ ಗುರುವನ್ನು ಆಸ್ವಾದಿಸಿದಂತೆ ಅನಿಸುತಿತ್ತು. ಮೀಡಿಯೋಕ್ರಿಟಿ ಈತನ ಶಬ್ದಕೋಶದಲ್ಲೇ ಇರಲಿಲ್ಲ. ಯಾವಾಗಲೂ ಅಕ್ಷರ ಹಾದರ ಮಾಡದ ಲೇಖಕ ಅವನಾಗಿದ್ದ.

ಈತ ನೈತಿಕತೆಯ ಪರಿಕಾರನಾದರೂ ಇವನ ವ್ಯಕ್ತಿತ್ವ ಸ್ವಲ್ಪ ವಿಕ್ಷಿಪ್ತವೇ. ಈತನ ಆತ್ಮೀಯ ಗೆಳೆಯರ ಸಂಖ್ಯೆ ತೀರಾ ಕಡಿಮೆ. ತನ್ನದೇ ದ್ವಂದ್ವ ಗುಣಗಳಿಂದಾಗಿ ಯಾರನ್ನೂ ಹತ್ತಿರವಾಗಿಸಿಕೊಳ್ಳುತ್ತಿರಲಿಲ್ಲ. ಏಕಾಂಗಿತನವನ್ನೇ ಪ್ರೀತಿಸಿದ ರೋಬಕ್ ಒಬ್ಬ ಲೋನರ್. ಹಾಗೆಯೇ ಲೈಂಗಿಕ ದೌರ್ಜನ್ಯದ ಆರೋಪಗಳೂ ಈತನ ಮೇಲಿದ್ದವು. ಸಾಮರ್‌ಸೆಟ್ ಕೌಂಟಿಗೆ ಸುದೀರ್ಘ ಕಾಲ ಆಡಿ ಅದರ ನಾಯಕನೂ ಆಗಿದ್ದ ರೋಬಕ್, ಇಯಾನ್ ಬಾಥಮ್ ಹಾಗೂ ವಿವ್ ರಿಚರ್ಡ್ಸ್‌ರಂತಹ ಆಟಗಾರರನ್ನು ಎದುರು ಹಾಕಿಕೊಂಡಿದ್ದ. ತನ್ನ ಅಂಕಣದಲ್ಲಿ ಮ್ಯಾನ್ ಮ್ಯಾನೇಜ್‌ಮೆಂಟ್ ಬಗ್ಗೆ ಬರೆದನಾದರೂ ಸ್ವತಃ ಈತನಿಗೆ ಅದು ಸಾಧ್ಯವಾಗಿರಲಿಲ್ಲ. ಮೊದಲೇ ನಯ ನಾಜೂಕಿನ ಇಂಗ್ಲಿಷರಿಗೆ ಈತನ ನೇರ ನಡೆ-ನುಡಿ ರುಚಿಸಲಿಲ್ಲ. ಹಾಗಾಗಿ ತೀವ್ರ ಅಸಮಾಧಾನದಿಂದಲೇ ಇಂಗ್ಲೆಂಡ್ ತೊರೆದ ಈತ ಆಸ್ಟ್ರೇಲಿಯಾದಲ್ಲಿ ಮನೆ ಮಾಡಿ ಅಲ್ಲಿ ಮನೆಮಗನಾದ. ಹೀಗಿದ್ದೂ ಆಫ್ರಿಕಾ ಅಥವಾ ಭಾರತದಲ್ಲಿ ನೆಲೆ ನಿಲ್ಲಲು ಯೋಚಿಸತೊಡಗಿದ್ದ. ಇತ್ತೀಚಿನ ಅಂಕಣ ಬರಹದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಹೆಚ್ಚು ಕಪ್ಪು ಆಟಗಾರರು ಇನ್ನೂ ಯಶಸ್ಸು ಕಾಣದಿದ್ದರ ಬಗೆಗೊಂದು ಅದ್ಭುತ ಲೇಖನ ಬರೆದಿದ್ದ. ನಮ್ಮ 'ದಿ ಹಿಂದೂ' ಪತ್ರಿಕೆಗೆ ನಿಯಮಿತ ಅಂಕಣಕಾರನಾಗಿದ್ದ ರೋಬಕ್‌ನನ್ನು ಸಿಡ್ನಿ ಟೆಸ್ಟ್‌ನಲ್ಲಿ ಭಾರತದ ಪರ ನಿಂತಿದ್ದನ್ನೇ ಉದಾಹರಿಸಿ ಕೆಲವರು ಈತ ಭಾರತದ ಕ್ರಿಕೆಟ್ ಪರವಾಗಿದ್ದ ಎನ್ನುವಂತಹ ಮಾತನ್ನು ಆಡುತ್ತಾರೆ. ಆದರೆ ಇದು ಅರ್ಧಸತ್ಯ ಮಾತ್ರ. ಏಕೆಂದರೆ ಇದರ ಜೊತೆಗೆ ಈತ ಬಿಸಿಸಿಐನ ಹಣದಾಹ, ಭ್ರಷ್ಟಾಚಾರ ಹಾಗೂ ಅದರ ಅಯೋಗ್ಯತನವನ್ನು ಪದೇ ಪದೇ ಟೀಕಿಸಿದ್ದ. ಒಟ್ಟನಲ್ಲಿ ರೋಬಕ್ ಕ್ರಿಕೆಟ್ ಆಟದ ಪರವಾಗಿದ್ದ.

ಕ್ರೀಡಾವಾಹಿನಿಯಲ್ಲಿ ಬರುವ ಗವಾಸ್ಕರ್, ಶಾಸ್ತ್ರಿ ತರಹದವರು ಬಿಸಿಸಿಐನಿಂದ ಪ್ರಾಯೋಜಕತ್ವದ ಹಣ ಪಡೆದು ಏನೂ ಮಾಡದಿದ್ದವರಂತೆ ನಟಿಸುತಿದ್ದಾಗ ರೋಬಕ್ 'ಭಾರತದಲ್ಲಿ ಸ್ವತಂತ್ರವಾದ ಪತ್ರಿಕೋದ್ಯಮ ಇದೆಯೇ?' ಎಂದು ಕಟುವಾಗಿ ಟೀಕಿಸಿದ್ದ. ಖ್ಯಾತನಾಮರನ್ನು
ಧನದಾಹಿ ಕ್ರಿಕೆಟ್ ಸಂಸ್ಥೆಯನ್ನು ಎದಿರು ಹಾಕಿಕೊಳ್ಳ
ಎಂದೂ ಹಿಂಜರಿಯಲಿಲ್ಲ. ಗ್ರೆಗ್ ಚಾಪೆಲ್, ಗಂ
ತೆಂಡೂಲ್ಕರ್ ಮತ್ತಿತರರ ಹಿರಿತನದ ಶ್ರೇಣೀಕರ
ಮುರಿಯುತ್ತಿದ್ದಾಗ ರೋಬಕ್ 'ಉಪಖಂಡದಲ್ಲಿ
ಮುರಿಯುವ ಕ್ರಮ ಬೇರೆ ಇದೆ. ಆದರೆ ಹಿರಿ
ಕಿರಿಯರನ್ನು ಬೆಳೆಯಲು ಬಿಡಲೇಬೇಕು' ಎಂದು ವ
ಐಪಿಎಲ್ ಕ್ರಿಕೆಟ್‌ನ ಕಾರ್ಪೋರೇಟ್ ಹಿತಾಸಕ್ತಿ
ರೋಬಕ್ ಎಂದೂ ಒಪ್ಪಿರಲಿಲ್ಲ. ಟೆಸ್ಟ್ ಕ್ರಿಕೆಟ್‌ನ ಸೌಂ
ವನ್ನು ಈತ ಯಾವತ್ತೂ ಎತ್ತಿ ಹಿಡಿದಿದ್ದ. ಏನೇ ಬ
ಅದು ಶುಷ್ಕ ಪಾಂಡಿತ್ಯವೋ ಅಥವಾ ಭಾವನ
ಉದ್ರೇಕಿಸುವ ಬರವಣಿಗೆಯೋ ಆಗಿರುತ್ತಿರಲಿಲ್ಲ. ಈತ
ಅಥವಾ ಪ್ರೋತ್ಸಾಹದ ಮಾತುಗಳ ಹಿಂದೆ ಸುಭ
ತಾತ್ವಿಕ ನೆಲೆಗಟ್ಟಿತ್ತು.

ಹೀಗೆ ಪ್ರತಿಭಾವಂತ ಹಿರಿ-ಕಿರಿಯರನ್ನು ಪ್ರೋ
ಸುವ, ಅಗತ್ಯವಿದ್ದಾಗ ನಿಷ್ಠುರವಾಗಿ ಖಂಡಿಸುವ, ಜನಾ
ತಾರತಮ್ಯದ ವಿರೋಧಿಯಾಗಿದ್ದ, ಸ್ವತಃ ಕೋಚ್
ಕೊಡುಗೈ ದಾನಿ ಕೂಡಾ ಆದ ಪೀಟರ್ ರೋಬಕ
ವಣಿಗೆಗೆ ಹಿಂಸಾತ್ಮಕ ತೆರೆ ಬಿದ್ದಿದೆ. ಎಂಥಾ ದುರಂತ ನ
ರೋಬಕ್ ತನ್ನ ಕೊನೆಯ ಅಂಕಣದಲ್ಲಿ ಆಸ್ಟ್ರೇಲಿಯಾ
47 ರನ್‌ಗಳಿಗೆ ಕುಸಿದರೂ ಅವರ ಸೋಲನ್ನು ಸಹಾನ
ಯಿಂದಲೇ ಪರಿಶೀಲಿಸಿ ಆ ಲೇಖನವನ್ನು ಈ ರೀ
ಗೊಳಿಸಿದ್ದ 'A lot can happen in a w
time. And it did'.

ಇದು ತನ್ನ ಬದುಕಿಗೇ ಅನ್ವಯಿಸುತ್ತದೆ ಎಂ
ರೋಬಕ್ ಕೂಡಾ ಊಹಿಸಿರಲಿಲ್ಲವೇನೋ?

• ಟಿ. ಅವಿ

...2

ಏನೋ ಮಾಡಲು ಹೋಗಿ...

ಕಣ್ಣೆಟ್ಟುಕೊಂಡು ಅಪವಾದ ಹೊರಿಸಿದ್ದಾರೆ ಎಂಬ ವಾದಕ್ಕೆ ಸಮರ್ಥನೆಯಾಗಿ ಬಳಸಿಕೊಳ್ಳುತ್ತಿದ್ದಾರೆ. "ಪ್ರಾಮಾಣಿಕತೆ ಯೆಂಬುದು ಪ್ರತಿಯೊಬ್ಬ ವ್ಯಕ್ತಿ ಮತ್ತು ಸಂಸ್ಥೆಯಲ್ಲಿ ಇರಬೇಕಾದ ನೈತಿಕ ಮೌಲ್ಯ. ಅದರ ಗುತ್ತಿಗೆಯನ್ನು ಯಾವುದಾದರೂ ಒಂದು ಸಂಸ್ಥೆಗೆ ಹೇಗೆ ವಹಿಸಲು ಸಾಧ್ಯ?" ಎಂಬ ನಿಮ್ಮ ತಾತ್ವಿಕ ಪ್ರಶ್ನೆಯನ್ನು ಈಗ ಎಲ್ಲಾ ಪಕ್ಷಗಳ ಭ್ರಷ್ಟರು "ಲೋಕಾಯುಕ್ತ" ಸಂಸ್ಥೆಯನ್ನೇ ಮುಚ್ಚಿಹಾಕಬೇಕೆಂಬ ಕುತಂತ್ರಕ್ಕೆ ಸಮರ್ಥನೆಯನ್ನಾಗಿ ಬಳಸಿಕೊಳ್ಳುತ್ತಿದ್ದಾರೆ.

ಇದನ್ನೆಲ್ಲಾ ನೀವು ನಿರೀಕ್ಷಿಸದೇ ಇದ್ದಿರಬಹುದು. ನಿಮ್ಮ ಪ್ರಶ್ನೆಗಳಲ್ಲಿ ಸತ್ವವೇ ಇರಬಹುದು. ಆದರೆ ಈ ಸಂದರ್ಶನ ಕೊಡಬೇಕಾದರೆ - ಅದೂ ಈ ಸಂದರ್ಭದಲ್ಲಿ ವಿಶ್ವೇಶ್ವರ ಭಟ್ಟರ ಕನ್ನಡಪ್ರಭಕ್ಕೆ ಕೊಡಬೇಕಾದರೆ - ಇವನ್ನೆಲ್ಲಾ ಯಾಕೆ ನೀವು ಯೋಚಿಸಲಿಲ್ಲ ಎಂಬ ಬಗ್ಗೆ ನನಗೆ ಪ್ರಶ್ನೆಗಳಿವೆ. ಈ ಪ್ರಶ್ನೆಗಳನ್ನು ಎತ್ತಬಾರದು ಎಂಬುದು ನನ್ನ ವಾದವಲ್ಲ. ಆದರೂ ನೈತಿಕವಾಗಿ ಹಿನ್ನಡೆ ಅನುಭವಿಸುತ್ತಿದ್ದ ಭ್ರಷ್ಟರು ಈಗ ಸಾರ್ವಜನಿಕ ಕ್ಷೇತ್ರದಲ್ಲಿ ತಲೆ ಎತ್ತಿ ತಿರುಗಲು ತಮ್ಮ ತರ್ಕ ಮತ್ತು ಸಂದರ್ಶನವನ್ನು ಬಳಸುತ್ತಿರುವುದು ಸತ್ಯ. ಅದಕ್ಕೆ ನೀವು ನೇರವಾಗಿಯಲ್ಲದಿದ್ದರೂ ಪರೋಕ್ಷವಾಗಿ ಹೊಣೆಗಾರರು ಎಂಬುದರಲ್ಲಿ ಎರಡು ಮಾತಿಲ್ಲ.

ನೀವು ಎತ್ತಿರುವ ಪ್ರಶ್ನೆಗಳ ಬಗ್ಗೆಯೂ ನನಗೆ ತಕರಾರಿದೆ. ಲೋಕಾಯುಕ್ತದಲ್ಲಿ ಭ್ರಷ್ಟರಿದ್ದಾರೆ. ಖಂಡಿತಾ. ಸಂತೋಷ್ ಹೆಗ್ಡೆ ಪ್ರಚಾರ ಪ್ರಿಯರು. ನಿಜ. ಪ್ರಾಮಾಣಿಕತೆ ವ್ಯಕ್ತಿ ನಿಷ್ಠ ನೈತಿಕ ಪ್ರಶ್ನೆ. ನಿಜ. ಇದೆಲ್ಲವೂ ಸತ್ಯ ಆದರೆ ಅರ್ಧ ಸತ್ಯ. ಭ್ರಷ್ಟತೆಯ ನಿರ್ದಿಷ್ಟ ಪ್ರಕರಣದ ಸುತ್ತಾ ನ್ಯಾಯ ಪ್ರಕ್ರಿಯೆ ಪ್ರಾರಂಭವಾಗಿರುವಾಗ ನೀವು ಸಾರ್ವತ್ರಿಕ ಸಾಧ್ಯತೆಗಳನ್ನು ಅದರ ಎದುರಾಗಿ ನಿಲ್ಲಿಸಿ ನಿರ್ದಿಷ್ಟ ಪ್ರಕರಣದ ಆರೋಪಿಗಳಿಗೆ ನೈತಿಕ ಶಕ್ತಿ ತಂದುಕೊಟ್ಟದ್ದೀರಿ.

ನಿಜ. ಈ ಕೇಸುಗಳಿಗೆ ಗಟ್ಟಿಯಾದ ಸಾಕ್ಷಿ ಪುರಾವೆಗಳನ್ನು ಒದಗಿಸುವ ಹಿಂದೆ, ಪ್ರಭಾವಿಗಳ ಮೇಲೆ ಕೇಸು ಫೈಲಾಗುವ ಹಿಂದೆ ಖಂಡಿತಾ ಆಳುವ ಪಕ್ಷಗಳ ನಡುವಿನ ಜಿದ್ದಾಜಿದ್ದಿ ಕಾರಣವೇ ಹೊರತು ಜನಪರ ಕಾಳಜಿಗಳಲ್ಲ. "ಎಲ್ಲೋ ಒಂದು ಕಡೆ" ಒಂದು ಪಕ್ಷ ಮತ್ತೊಂದು ಪಕ್ಷವನ್ನು ಸದೆ ಬಡಿಯಲು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಲೋಕಾಯುಕ್ತ ನಡೆಸಿದ ಪ್ರಾಮಾಣಿಕ ಕ್ರಮಗಳು ಬಳಕೆಯಾಗುತ್ತಿರಬಹುದು. ನೀವೇ ಹೇಳಿದಂತೆ ಲೋಕಾಯುಕ್ತದಲ್ಲಿಯೂ ಭ್ರಷ್ಟ ಅಧಿಕಾರಿಗಳು ದುಡ್ಡಿಗೋ, ವಶೀಲಿಗೋ, ಜಾತಿಗೋ ಒಬ್ಬರ ಪರವಾದ ಅಥವಾ ಇನ್ನೊಬ್ಬರ ವಿರೋಧವಾದ ಕೆಲಸ ಮಾಡುತ್ತಿರಬಹುದು.


ಆದರೂ ಆಳುವ ವರ್ಗಗಳ ನಡುವಿನ ಸಂಘರ್ಷ ಈ ಪ್ರಜಾತಂತ್ರದ ಮಿತಿಗಳನ್ನು ಮುನ್ನೆಲೆಗೆ ತರುತ್ತಿರುವುದು ನಿಜ. ಇದರಲ್ಲಿ ತಮ್ಮ ಪಾಲೂ ಇದೆ. ಈಗ ಬೇಕಿರುವುದು ಆ ಮಿತಿಗಳನ್ನು ಮೀರುವ ದಾರಿಯ ಹುಡುಕಾಟ. ಅದು ಸಕ್ರಿಯ ಮತ್ತು ಸಾರಾಂಶದಲ್ಲಿ ಜನರನ್ನು ಸಬಲೀಕರಿಸುವ ಸಾರಭೂತ ಪ್ರಜಾತಾಂತ್ರಿಕ ಪ್ರಕ್ರಿಯೆಯಿಂದ ಮಾತ್ರ ಸಾಧ್ಯ. ಹಳೆಯದರ ನಾಶ ಹೊಸದರ ನಿರ್ಮಾಣಕ್ಕೆ ಮುಂದಾಗದಿದ್ದರೆ ಅದು ವಿನಾಶಕಾರಿ ಪರಿಣಾಮವನ್ನು ಮಾತ್ರ ಹೊಂದಿರುತ್ತದೆ.

ನಿಜ ಇದು ಹೀಗೇ ಮುಂದುವರೆದರೆ ಈ ಸಮಾಜ ಮತ್ತೊಂದು ದೊಡ್ಡ ಭ್ರಮನಿರಸನಕ್ಕೆ ಮತ್ತು ಆತ್ಮಘಾತುಕ ಸಿನಿಕತನಕ್ಕೆ ಈಡಾಗುತ್ತದೆ. ಹಾಗಾಗದಿರಬೇಕೆಂದರೆ ಜನ ಹೊಸ ದೇವರುಗಳನ್ನಲ್ಲದೆ ತಮ್ಮ ಸಕ್ರಿಯ ರಾಜಕೀಯ ಕ್ರಿಯಾಶೀಲತೆಯಲ್ಲಿ ನಂಬಿಕೆಯನ್ನಿಟ್ಟುಕೊಳ್ಳುವಂತೆ ಮಾಡುವುದು ಅತ್ಯಗತ್ಯ. ಅದಕ್ಕೆ ಬೇಕಾಗಿರುವುದು ಪೊಳ್ಳನ್ನು ಬಹಿರಂಗಗೊಳಿಸುವ ಕ್ರಿಯೆಯ ಜೊತೆಗೆ ಜನತಂತ್ರವನ್ನು ಗಟ್ಟಿಗೊಳಿಸುವ, ಜನರ ಕ್ರಿಯಾಶೀಲತೆಯನ್ನು ಗಟ್ಟಿಗೊಳಿಸುವ ರಾಜಕೀಯ ಪ್ರಕ್ರಿಯೆ. ಅದು ವ್ಯಕ್ತಿನಿಷ್ಠ ನೆಲೆಯ ಪ್ರಾಮಾಣಿಕತೆ ಮತ್ತು ನಿಷ್ಠೂರತೆಯ ಜೊತೆಜೊತೆಗೆ ಸಾಮಾಜಿಕ ಮತ್ತು ಸಾಂಸ್ಥಿಕ ಕ್ರಿಯಾಶೀಲತೆಯಿಂದ ಮಾತ್ರ

ಆದರೆ ನಿಮ್ಮದು ಮೊದಲಿಂದಲೂ ಪರಮ ವ್ಯಕ್ತಿನಿಷ್ಠ ಚಿಂತನೆ. ಹೀಗ
ಪ್ರಜಾತಂತ್ರದ ಮತ್ತು ಲೋಕಾಯುಕ್ತದ ಸಾಂಸ್ಥಿಕ ವೈಫಲ್ಯಗಳು ನಿಮ್ಮ
ಭ್ರಮನಿರಸನ ಹುಟ್ಟಿಸುತ್ತದೆಯೇ ವಿನಃ ಅದರ ನಡುವಿನಿಂದಲೇ ಜನತ
ಪುನಶ್ಚೇತನಗೊಳಿಸಬಲ್ಲ ಸಾಧ್ಯತೆಗಳು ಗೋಚರಿಸುವುದಿಲ್ಲ. ಹೀಗಾಗಿ ನಿಮ
ಗೊಂದಲದ ತಾರ್ಕಿಕ ಅಂತ್ಯ ಸಿನಿಕತನವೇ ಆಗಿಬಿಡುವ ಅಪಾಯವಿದೆ. ಸಿನಿ
ಪ್ರಧಾನ ಫಲಾನುಭವಿಗಳು ಈ ವ್ಯವಸ್ಥೆಯ ರಖವಾಲಾಗಳೇ! ಹೀಗಾ
ಕೇಳುವ ಸ್ವಾತಂತ್ರ್ಯವನ್ನು ಬಯಸುವವರು ಉತ್ತರವನ್ನು ಹುಡುಕುವ ಪ್ರಕ್ರಿ
ಒಂದಾಗಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಮರೆಯಲಾದೀತೇ?

ನೀವು ಪ್ರಜಾತಾಂತ್ರಿಕ ಸಂಸ್ಥೆಗಳ ಬಗ್ಗೆ ಎತ್ತುತ್ತಿರುವ ಪ್ರಶ್ನೆ ಪ್ರಜಾ
ಕ್ಷಿತಿಜವನ್ನು ಇನ್ನಷ್ಟು ವಿಸ್ತರಿಸಲು ಸಹಾಯವಾಗದೆ ಈವರೆಗೆ ಆದ ಗಳಿಕೆ
ಕಸಿದುಕೊಳ್ಳಲು ಭ್ರಷ್ಟರಿಗೆ ಸಹಾಯ ಮಾಡುವಂತಾದರೆ ನೀವು ಇನ್ನಷ
ಗ್ಲಾನಿಗೆ ಗುರಿಯಾಗುತ್ತೀರಿ, ಅಲ್ಲವೇ?

ಸಂದರ್ಭ ನಿಮ್ಮಿಂದ ಸ್ಪಷ್ಟೀಕರಣ ಕೇಳುತ್ತಿದೆ. ಇಲ್ಲದಿದ್ದರೆ ಏನೋ ಮ
ಹೋಗಿ ಏನೋ ಮಾಡಿದಂತೆ ಆಗುತ್ತದೆ. ನೀವು ಎತ್ತಿರುವ ಪ್ರಶ್ನೆಗಳು ವ
ಹುಳುಕನ್ನು ನಿರ್ಮೂಲನೆ ಮಾಡಲು ಜನತಂತ್ರವನ್ನು ಗಟ್ಟಿಗೊಳಿಸಲು
ಪ್ರಕ್ರಿಯೆಗೆ ಚಾಲನೆ ನೀಡಬೇಕೇ ವಿನಃ ಸಮಾಜದಲ್ಲಿ ಸಿನಿಕತೆಗೆ ಮತ್ತು
ಪುನರುಜ್ಜೀವನಕ್ಕೆ ಇಂಬುಗೊಡದಂತೆ ನೋಡಿಕೊಳ್ಳುವ ಜವಾಬ್ದಾರಿ
ಮೇಲಿದೆಯಲ್ಲವೇ? ಯಾರೋ ಒಬ್ಬ ಆರೋಪಿ ಅಧಿಕಾರಿ ನಿಮ್ಮ ದಾಳಿಯ
ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಲೋಕಾಯುಕ್ತವನ್ನೇ ಬಿಡಬೇಕಾದ ತೀ
ತೆಗೆದುಕೊಂಡವರು ನೀವು. ಏನಿಲ್ಲದಿದ್ದರೂ, ಈಗ ನಿಮ್ಮ ಸಂದರ್ಶನದ ಪ
ಭ್ರಷ್ಟರ ಪುನರುಜ್ಜೀವನಕ್ಕೆ ದಾರಿ ಮಾಡಿಕೊಡುತ್ತಿರುವುದನ್ನು ಅದಕ್ಕಿಂತಲ
ಗಂಭೀರವಾಗಿ ತೆಗೆದುಕೊಳ್ಳುತ್ತೀರಿ ಎಂಬ ನಿರೀಕ್ಷೆಯನ್ನಂತೂ ನನ್ನಲ್ಲಿ
ಹಾಕಿದೆ...




ಒಕ್ಕುಂದ ಅವರಿಗೆ ಪ್ರತಿಕ್ರಿಯೆ: ವಿಮರ್ಶೆಯ ವೇಷ ತೊಟ್ಟ ಹಠವಾದ

'ಮತ್ತೆ ಮೊಳಗಲಿ...' ಕವಿತೆಯನ್ನು ಒಕ್ಕುಂದ ಅರ್ಥೈಸಿದ ಬಗ್ಗೆ ನನ್ನ ಆಕ್ಷೇಪವಿಲ್ಲ. ಆದರೆ ಆ ಕವಿತೆಯ ಬಗ್ಗೆ ಅವರು ಸುದೀರ್ಘವಾಗಿ ಬರೆದಿದ್ದರೂ ಅಡಿಗರ ಕವಿತೆಗಳ ಪೈಕಿ ಅದೇ ಯಾಕೆ ಅತ್ಯಂತ ಕಳಪೆ ಎಂಬ ಬಗ್ಗೆ ಅವರ ಗಮನ ಹರಿದಿಲ್ಲ. ಅಡಿಗರ ಉತ್ತಮ ಕವಿತೆಗಳು ಹಲವು ಓದುಗಳನ್ನು ಬಯಸುವ ಹಾಗೂ ತಾಳಿಕೊಳ್ಳುವ ಧಾರಣ ಶಕ್ತಿ ಉಳ್ಳವು; ವಿಭಿನ್ನ ಬಗೆಯ ಅರ್ಥೈಸುವಿಕೆಗಳಿಗೂ ಆ ಕವಿತೆಗಳು ಅನುವು ಮಾಡಿಕೊಡುತ್ತವೆ.

ಅಡಿಗರ ನೂರಾರು ಕವಿತೆಗಳ ಪೈಕಿ 'ಮತ್ತೆ ಮೊಳಗಲಿ ...ಜನ್ಯ' ಎಂಬ ಒಂದು ಕವಿತೆಯನ್ನು ಮಾತ್ರ ಕೂಲಂಕ...ಷ ವಿಮರ್ಶೆಗೆ ಒಳಪಡಿಸುತ್ತ ಅವರ ಸಮಗ್ರಕಾವ್ಯವೇ (...ವು ಅಪವಾದಗಳೊಂದಿಗೆ) ಹಿಂದೂತ್ವದ ಒಂದು ವಿಸ್ತೃತ ...ಳಿಕೆ ಎಂದು ಒಕ್ಕುಂದ ಪತ್ರಿಕೆಯ ಹಿಂದಿನ ಮೂರು ...ಕೆಗಳಲ್ಲಿ ಪ್ರತಿಪಾದಿಸಿದ್ದರು. ಇದೀಗ ಪತ್ರಿಕೆಯ ...ಬರ್ 23ರ ಸಂಚಿಕೆಯಲ್ಲೂ ಶ್ರೀಯುತರು ತಮ್ಮ ...ವನ್ನು ಮುಂದುವರಿಸಿದ್ದಾರೆ; ಅಥವಾ ಇನ್ನೂ ಸರಿಯಾಗಿ ...ಬೇಕು ಎಂದರೆ ತಮ್ಮ ಮೊದಲಿನ ವಾದವನ್ನೇ ಬೇರೆ ...ಗಳಲ್ಲಿ ನಮಗೆ ಉಣಬಡಿಸಿದ್ದಾರೆ. ತಮ್ಮ ಇತ್ತೀಚಿಗಿನ ...ದಲ್ಲಿ ಒಕ್ಕುಂದ ನನ್ನ ಬಗ್ಗೆ ಮಾಡಿರುವ ಟೀಕೆಗಳಿಗೆ, ...ಲೇಖನದಲ್ಲಿಯೇ ಉತ್ತರಗಳು ಇರುವುದರಿಂದ ...ತಾಗಿ ಆ ಕುರಿತು ನನಗೆ ಹೇಳುವಂತಹದ್ದು ಏನೂ ...ಹಾಗಾಗಿ ಈ ವಾದವನ್ನು ಬೆಳೆಸುವುದು ಎಂದರೆ, ...ದಕ್ಕೆ ಚಲಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿ ನಿಂತಲ್ಲಿಯೇ ...ಹೊಡೆಯುವುದಷ್ಟೇ ಆಗುತ್ತದೆ. ಆಡಿದ್ದನ್ನೇ ಆಡುವ ...ಳು ದಾಸಯ್ಯನಾಗುವ ಜರೂರು ನನಗಿಲ್ಲವಾದ್ದರಿಂದ ...ದ ನನ್ನ ಮೇಲೆ ಹೊರಿಸಿರುವ ಆರೋಪಗಳಿಗೆ ಉತ್ತರಿ... ಉತ್ಸಾಹವಿಲ್ಲ. ಆದರೆ ಕವಿತೆಗೆ, ಯಾವುದೇ ಕವಿತೆಗೆ ...ಗೂ, ಎಲ್ಲ ಕಾಲಕ್ಕೂ, ಎಲ್ಲ ಓದುಗಳ ಮಟ್ಟಿಗೂ ...ಪ್ರುದು ಒಂದೇ ಅರ್ಥ ಎಂಬ ಥೇಟು ಮತೀಯ ...ಭೂತವಾದದ ಥರಹ ಇರುವ ಹಠ ನನಗೆ ಒಕ್ಕುಂದ ...ವಿಮರ್ಶೆಯಲ್ಲಿ ಕಾಣಿಸುತ್ತಿದೆ. ಈ ಬಗೆಯ ವಿಮರ್ಶೆ ...ವಾದದಲ್ಲಿ ಎಡ-ಬಲ ಎಂಬ ವ್ಯತ್ಯಾಸವೂ ಈಗ ...ಲ್ಲ ಎಂಬುದು ನನ್ನ ಆತಂಕ. ಇಷ್ಟನ್ನು ಹೇಳಿದ ಮಾತ್ರಕ್ಕೆ ...ಸಮಾಜವಾದಿ ನಿಷ್ಠೆಯೇ ಸಂದೇಹಕ್ಕೆ ಒಳಗಾಗು...ದರೆ ಹಾಗೆಯೇ ಆಗಲಿ. ಅದು ನನ್ನ ಆರೋಗ್ಯಕ್ಕೆ ...ಒದು.

...ಮತ್ತೆ ಮೊಳಗಲಿ...' ಕವಿತೆಯನ್ನು ಒಕ್ಕುಂದ ಅರ್ಥೈಸಿದ ...ನನ್ನ ಆಕ್ಷೇಪವಿಲ್ಲ. ಆದರೆ ಆ ಕವಿತೆಯ ಬಗ್ಗೆ ಅವರು ...ರ್ಘವಾಗಿ ಬರೆದಿದ್ದರೂ ಅಡಿಗರ ಕವಿತೆಗಳ ಪೈಕಿ ಅದೇ ...ಅತ್ಯಂತ ಕಳಪೆ ಎಂಬ ಬಗ್ಗೆ ಅವರ ಗಮನ ಹರಿದಿಲ್ಲ. ...ರ ಉತ್ತಮ ಕವಿತೆಗಳು ಹಲವು ಓದುಗಳನ್ನು ಬಯ...ಹಾಗೂ ತಾಳಿಕೊಳ್ಳುವ ಧಾರಣ ಶಕ್ತಿ ಉಳ್ಳವು; ವಿಭಿನ್ನ ...ಯ ಅರ್ಥೈಸುವಿಕೆಗಳಿಗೂ ಆ ಕವಿತೆಗಳು ಅನುವು ಮಾಡಿಕೊಡುತ್ತವೆ. 'ಮತ್ತೆ ಮೊಳಗಲಿ...' ಕವಿತೆಯಲ್ಲಿ ಈ ಓದು ಮತ್ತು ಅರ್ಥೈಸುವಿಕೆಗಳ ಬಹುವಚನ ಸಾಧ್ಯವೇ ಇಲ್ಲ. ಒಕ್ಕುಂದ ಈ ಸಂಗತಿಯನ್ನು ಗೊತ್ತಿದ್ದೂ ಮರೆಮಾಚುತ್ತಿದ್ದಾರೆ; ಯಾಕೆಂದರೆ 'ಮತ್ತೆ ಮೊಳಗಲಿ...' ಮತ್ತು ಅಡಿಗರ ಇತರ ಕವಿತೆಗಳ ನಡುವೆ ಹೇಳಿಕೊಳ್ಳುವ ವ್ಯತ್ಯಾಸವಿಲ್ಲ; ಎಲ್ಲವೂ ಹಿಂದೂತ್ವದ ಪ್ರಣಾಳಿಕೆಗಳು ಎಂಬ ಅವರ ವಾದವನ್ನು ಇದು ಅಲ್ಲಗಳೆಯುತ್ತದೆ.

ಅಡಿಗರು ಒಂದು ತೀರಾತೀರಾ ಕೆಟ್ಟ ಕವಿತೆ ಬರೆದಿದ್ದಾರೆ; ಆದರೆ ಅವರು ಹಲವು ಒಳ್ಳೆಯ ಕವಿತೆಗಳನ್ನೂ ಬರೆದಿದ್ದಾರೆ ಎಂಬ ನಮ್ಮಂತಹವರು ತೀರಾತೀರಾ ಕಾಮನ್ ಸೆನ್ಸ್‌ನ ಮಾತನ್ನು ಕೂಡ ಒಕ್ಕುಂದ ಒಪ್ಪಿಕೊಳ್ಳಲು ತಯಾರಿಲ್ಲ. "ಕವಿಗೂ ಕವಿತೆಗೂ ಇರುವ ಸಂಬಂಧವೇನು?" ಎಂದು ಅವರು ತಮ್ಮ ಲೇಖನದಲ್ಲಿ ಒಂದೆಡೆ ಗಂಭೀರವಾಗಿ ಪ್ರಶ್ನಿಸಿದ್ದಾರೆ. ಅವರ ಪ್ರಶ್ನೆಯ ಗತ್ತು ನೋಡಿದರೆ ಕವಿಗೂ ಕವಿತೆಗೂ ಅವಿನಾಭಾವ ಸಂಬಂಧವಿದೆ ಎಂಬುದು ಶತಸಿದ್ಧವಾದ ಸತ್ಯ ಎಂದು ಅವರು ದೃಢವಾಗಿ ನಂಬಿರುವ ಹಾಗೆ ಭಾಸವಾಗುತ್ತದೆ. ಅವರ ಈ ಪ್ರಶ್ನೆಗೆ ಉತ್ತರವಾಗಿ ನಾನು ಒಕ್ಕುಂದ ಅವರಿಗೆ 'ಕೃತಿಯನ್ನು ನಂಬು; ಕೃತಿಕಾರನನ್ನಲ್ಲ' ಎಂಬ ಮಾತನ್ನು ನೆನಪಿಸಬಯಸುತ್ತೇನೆ. ಒಕ್ಕುಂದ ಅವರ ತರ್ಕವನ್ನು ಒಪ್ಪುವುದಾದರೆ ಒಬ್ಬನೇ ಲೇಖಕ ವಿಭಿನ್ನ ಮನೋಧರ್ಮದ ಎರಡು ಕೃತಿಗಳನ್ನು ಬರೆಯಲು ಸಾಧ್ಯವೇ ಇಲ್ಲ. ಆದರೆ ದುರದೃಷ್ಟವಶಾತ್ ಕನ್ನಡ ಕವಿಗಳು ಈ ಸೈದ್ಧಾಂತಿಕ ಶಿಸ್ತನ್ನು ಪಾಲಿಸುವುದೇ ಇಲ್ಲ. ಉದಾಹರಣೆಗೆ ತಮ್ಮ ಮಾತಿನ ಹದ ಮತ್ತು ಲಾಲಿತ್ಯಗಳಿಗೆ ಹೆಸರಾದ ಕವಿ ಸು.ರಂ.ಎಕ್ಕುಂಡಿ ತಮ್ಮನ್ನು ಮಾಧ್ವ ಮತ್ತು ಮಾರ್ಕ್ಸ್‌ವಾದಿ ಎಂದು ಕರೆದುಕೊಂಡಿದ್ದರು. ಈ ಕವಿಯ ಮಾರ್ಕ್ಸ್‌ವಾದದ ಬಗ್ಗೆ ಮಾಧ್ವರು ಮತ್ತು ಮಾಧ್ವ ನಿಷ್ಠೆಯ ಬಗ್ಗೆ ಮಾರ್ಕ್ಸ್ ವಾದಿಗಳು ಏನೇ ಭಾವಿಸಲಿ ಅವರು ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರು ಎಂಬ ಬಗ್ಗೆ ಕಾವ್ಯ ಪ್ರೇಮಿಗಳಿಗೆ ಸಂದೇಹವಿರಲಿಲ್ಲ. ಎಕ್ಕುಂಡಿ ಸಂಸ್ಕೃತದ ಅಭಿಜಾತ ಸಾಹಿತ್ಯ ತನ್ನ ಕಾಲದ ಉತ್ತರ ಕನ್ನಡ ಜಿಲ್ಲೆಯ ಜನಜೀವನ, ಕಾರ್ಲ್ ಮಾರ್ಕ್ಸ್‌ನಂಥ ಧೀಮಂತ ಕ್ರಾಂತಿಕಾರಿಗಳ ಬದುಕು-ಮುಂತಾದ ವಸ್ತುಗಳನ್ನು ಇಟ್ಟುಕೊಂಡು ತಮ್ಮ ಕವಿತೆಗಳನ್ನು ರಚಿಸಿದ್ದಾರೆ. ಈ ಕವಿತೆಗಳ ಪೈಕಿ ಯಾವುದು ಅಸಲಿ ಎಕ್ಕುಂಡಿ ಕವಿತೆ? ಒಕ್ಕುಂದ ಅವರ ತರ್ಕವನ್ನು ಒಪ್ಪಿಕೊಂಡರೆ ಎಕ್ಕುಂಡಿಯವರ ಪ್ರತಿಯೊಂದು ಕವಿತೆಯೂ ಉಳಿದ ಕವಿತೆಗಳನ್ನು ಹೊಡೆದುಹಾಕುತ್ತದೆ. ಆದರೆ ಯಾವ ಕವಿತೆಯೂ ಪೂರ್ತಾ ಕವಿಯ ಸ್ವಂತ ಒಡವೆಯಲ್ಲ. ಕವಿಯ ವ್ಯಕ್ತಿತ್ವವೂ ಪೂರ್ತಾ ಅವನ ಸ್ವಂತದ್ದಲ್ಲ. ಕವಿ ತನ್ನ ಕಾಲ ಮತ್ತು ಪರಿಸರದ ಪ್ರಜ್ಞೆಯನ್ನು ರೂಪಿಸುವವನೋ? ಅಥವಾ ಕಾಲ ಮತ್ತು ಪರಿಸರಗಳೇ ಕವಿಯ ಪ್ರಜ್ಞೆಯನ್ನು ರೂಪಿಸುತ್ತದೋ? ಈ ಪ್ರಶ್ನೆಗಳಿಗೆ ಹೀಗೆ ಅಥವಾ ಹಾಗೆ ಎಂಬ ಸರಳ ಉತ್ತರವಿಲ್ಲ. 'ಮತ್ತೆ ಮೊಳಗಲಿ...' ಕವಿತೆಯನ್ನು ಬರೆದು ಅಡಿಗರು ಸಮಾಜದ ಮತೀಯ ವಾತಾವರಣವನ್ನು ದ್ವೇಷಮಯಗೊಳಿಸಿದರೋ? ಅಥವಾ ಮತೀಯ ದ್ವೇಷವನ್ನು ಹೊಸತಾಗಿ ಮೈಗೂಡಿಸಿಕೊಂಡ ಸಮಾಜವೇ ಆ ಕವಿತೆಯ ಹುಟ್ಟಿಗೆ ಕಾರಣವಾಯಿತೋ? 'ಮತ್ತೆ ಮೊಳಗಲಿ...' ಒಂದು ಕೆಟ್ಟ ಕರಪತ್ರದಂತಹ ಕವಿತೆ ಎಂಬುದನ್ನು ಒಪ್ಪಿಕೊಂಡ ಮೇಲೂ ಕವಿ, ಕವಿತೆ ಮತ್ತು ಸಮಾಜಗಳ ನಡುವೆ ಇರುವ ದ್ವಂದ್ವಾತ್ಮಕ ಸಂಬಂಧವನ್ನು ನಾವು ನಿರಾಕರಿಸುವಂತಿಲ್ಲ. 'ಕವಿಗೂ ಕವಿತೆಗೂ ಇರುವ ಸಂಬಂಧ ವೇನು?' ಎಂಬ ಒಕ್ಕುಂದ ಅವರ ಪ್ರಶ್ನೆ ಅವರು ಭಾವಿಸಿದಷ್ಟು ಸರಳವಲ್ಲ.



ಅಡಿಗರ ಕೋಮುವಾದಿ ಕವನ ಪ್ರತಿಕ್ರಿಯೆ

ಈ ಹಿಂದೆ ಮಾಡಿದಂತೆ ತನ್ನ ಇತ್ತೀಚಿಗಿನ ಬರಹದಲ್ಲೂ ಒಕ್ಕುಂದ ತಮ್ಮ ವಾದದ ಸಮರ್ಥನೆಗಾಗಿ ಲಂಕೇಶ್‌ರ ಮಾತುಗಳನ್ನು 'ದುರುಪಯೋಗ'ಪಡಿಸಿಕೊಂಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಲಂಕೇಶ್, ಅಡಿಗರ ಕಾವ್ಯವನ್ನು ಮೆಚ್ಚಿಕೊಂಡು ಬರೆದಿದ್ದರೂ ಕೊನೆಗೆ ಅಡಿಗರನ್ನು ಟೀಕಿಸಿ ಅವರು ಬರೆದದ್ದೇ ಅವರ ನೈಜ ಅಭಿಪ್ರಾಯ ಎಂಬುದು ಒಕ್ಕುಂದ ಅವರ ವಾದ. ಇದರ ಹಿಂದೆ ಇರುವ ತರ್ಕವೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಲಂಕೇಶ್, ಅಡಿಗರ ಬಗ್ಗೆ ಮಾತ್ರವಲ್ಲ, ಮಾಸ್ತಿ, ಕಾರಂತ, ಕುವೆಂಪು, ಬೇಂದ್ರೆ, ಅನಂತಮೂರ್ತಿ, ರಾಮಚಂದ್ರ ಶರ್ಮ, ಕಂಬಾರ ಮುಂತಾದವರ ಬಗ್ಗೆ ಕೂಡ ಹೊಗಳಿಕೆ-ತೆಗಳಿಕೆ ಎರಡನ್ನೂ ಸಾಕಷ್ಟು ಮಾಡಿದ್ದಾರೆ. ಈ ಹೊಗಳಿಕೆ, ತೆಗಳಿಕೆ, ಟೀಕೆ, ಪ್ರೀತಿ, ಸಿಟ್ಟು, ಆದರ, ತಿರಸ್ಕಾರ ಇವೆಲ್ಲವೂ ಒಟ್ಟಿಗಿದ್ದರೆ ಮಾತ್ರ ಲಂಕೇಶ್ ಎನ್ನುವಷ್ಟರ ಮಟ್ಟಿಗೆ ಅವರ ಭಾವನೆಗಳು ಸಂಕೀರ್ಣವಾಗಿದ್ದವು; ಪ್ರಾಮಾಣಿಕವಾಗಿದ್ದವು; ಎಲ್ಲಕ್ಕಿಂತ ಹೆಚ್ಚಾಗಿ ಜೀವಂತವಾಗಿದ್ದವು. ನನ್ನ ಹಿಂದಿನ ಲೇಖನದಲ್ಲಿ ನಾನು ಹೇಳಿದ ಮಾತನ್ನೇ ಮತ್ತೆ ಇಲ್ಲಿ ಹೇಳಬಯಸುತ್ತೇನೆ. ಅಡಿಗರ ಬಗ್ಗೆ ಲಂಕೇಶ್ ತನ್ನ ಜೀವಿತ ಕಾಲದಲ್ಲಿ ವ್ಯಕ್ತಪಡಿಸಿದ ಪ್ರೀತಿ; ಅಭಿಮಾನ, ಮೆಚ್ಚುಗೆ, ತಿರಸ್ಕಾರ, ಸಿಟ್ಟು, ಕಟುವಿಮರ್ಶೆ- ಹೀಗೆ ನಾನಾ ಬಗೆಯ ಭಾವಗಳಲ್ಲಿ ಒಕ್ಕುಂದ ಮಾಡುವ ಆಯ್ಕೆ, ಅಡಿಗ, ಲಂಕೇಶ್ ಇಬ್ಬರನ್ನೂ ಕುಬ್ಜಗೊಳಿಸುತ್ತದೆ. ಲಂಕೇಶ್ ಕೊನೆಕೊನೆಗೆ ಅಡಿಗರ ಕಾವ್ಯವನ್ನು ಕೇವಲ ತಿರಸ್ಕಾರದಿಂದ ನೋಡಿದ್ದು ನಿಜ. ಆದರೆ ಈ ಅಂಶವನ್ನು ಮಾತ್ರ ಎತ್ತಿಹಿಡಿದು ಇದೇ ಲಂಕೇಶ್ ಅವರ ಧೀಮಂತಿಕೆಯ ಅತ್ಯಂತ ಸಾರರೂಪಿ ವಿವರ; ಇದೇ ಅವರ ಆತ್ಯಂತಿಕವೂ, ಅತ್ಯಂತ ನೈಜವೂ ಆದ ನಿಲುವು ಎಂದು ಘೋಷಿಸುವುದಕ್ಕೆ ಅರ್ಥವಿದೆಯೇ? ಲಂಕೇಶರಂತಹವರ ರಂಗುರಂಗಿನ ಜೀವನವನ್ನು ಹೀಗೂ ಸಂಕ್ಷಿಪ್ತಗೊಳಿಸಬಹುದೇ? ಅಡಿಗರನ್ನು ಅವರ ಪೀಠದಿಂದ ಕೆಳಗೆ ಇಳಿಸಲೇಬೇಕು ಎಂದು ಒಕ್ಕುಂದ ಹಠ ತೊಟ್ಟಹಾಗಿದೆ. ಕರ್ನಾಟಕದ ಮಠಮಾನ್ಯಗಳೋ, ಸರ್ಕಾರವೋ ಈ ಕವಿ ಪೀಠವನ್ನು ಕಟ್ಟಿಸಿದ್ದರೆ, ಅದನ್ನು ಕೆಡಹುವ ಒಕ್ಕುಂದ ಅವರ ಕಾಯಕಕ್ಕೆ ಒಂದಷ್ಟು ಘನತೆಯಾದರೂ ಇರುತ್ತಿತ್ತು. ಅಡಿಗರನ್ನು ಶ್ರೇಷ್ಠ ಕವಿ ಎಂದು ಗೌರವಿಸುತ್ತಿರುವವರು ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ಜನ. ಒಕ್ಕುಂದ ಇಂಥಹವರ ಮೇಲೆ ಬರಿದೇ ಹರಿಹಾಯುತ್ತಿದ್ದಾರೆ.

• ಜಿ.ರಾಜಶೇಖರ

...ಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

...ಎಪ್ಪತ್ತರ ದಶಕದಲ್ಲಿ ಕುಡಿಯೊಡೆದು ಹಬ್ಬಿದ ದಲಿತ ಚಳವಳಿಯ ಸ್ಥಾಪಕ...ರಲ್ಲೊಬ್ಬರಾದ ಕೋಟಿಗಾನಹಳ್ಳಿ ರಾಮಯ್ಯನವರು ತಮ್ಮದೇ ವಿಶಿಷ್ಟ ..., ಪ್ರಯೋಗಗಳಿಗೆ ಹೆಸರಾದವರು. ...ರದ ಜಿಂಕೆ ರಾಮಯ್ಯ ಜೀವತಾಣದಲ್ಲಿರುವ ...' ರಾಮಯ್ಯನವರು ಕನಸು ಮತ್ತು ಬೆರಗನ್ನು ...ಕಟ್ಟಿಕೊಂಡು ನಿಂತಿರುವ ನೆಲ ಸಂಸ್ಕೃತಿಯ 'ತಲಪರಿಗೆ'ಯಂತಹ ವಿಶಿಷ್ಟ ಕೃತಿಯನ್ನು ...ರಿಗೆ ಸಂಪಾದಿಸಿ ಕೊಡುವ ಮೂಲಕ ...ಮ್ಮ ಅಸ್ಪೃಶ್ಯರ ಕತ್ತಲ ಜಗತ್ತಿಗೊಂದು ರಹ...ಸ್ಯವನ್ನು ನಿರ್ಮಿಸಿದವರು. ತಮ್ಮ ಚೂಪು ...ಗೆ ಕಾವ್ಯ ಕಟ್ಟುವಿಕೆಯಿಂದಲೂ ರಾಮಯ್ಯ ...ದಲ್ಲಿ ಗಮನ ಸೆಳೆದಿದ್ದಾರೆ. 'ಹಣದ ಹಿಂದೆ ...ಪ ಇವತ್ತಿನ ಸಿದ್ಧಪಠ್ಯಗಳಿಗಿಂತ ಉಳಿವಿನ ಪಠ್ಯ ... ಬೇಕಿದೆ, ಮುಂದಿನ ತಲೆಮಾರಿಗೆ ನಾವು ...ಬೇಕಾದದ್ದು ಈ ಉಳಿವಿನ ಪಠ್ಯವನ್ನೇ' ಎಂದು ... ರಾಮಯ್ಯ ತಳವರ್ಗಗಳ ಉಳಿವಿನ ಪಠ್ಯದ ...ಈಚೆಗೆ ಹೆಚ್ಚು ಒತ್ತಾಸೆಯಿಟ್ಟುಕೊಂಡು ...ಸುತ್ತಿದ್ದಾರೆ. ಅದಕ್ಕೊಂದೇ ಅವರು 'ಮರಿ...ನ್ನು ತಿನ್ನದೆ ಮುರಳಿ ಸೀರಿಗೆ ಬಿಡುವ' ...ಯಂಬು ಪಾಠಗಳನ್ನು ದೃಷ್ಟಾಂತಗಳಾಗಿ ...ಡಬಲ್ಲರು. ರಾಮಯ್ಯನವರು ಈಚೆಗೆ ...ಸಿದ ಹೊಸ ನಾಟಕ 'ಏಕಲವ್ಯ ಉವಾಚ' ...ಹೊಸದು ಮಾಡಿ ಕೊಲಂಬಿಯಾಗೂ ತೆರಳಿತು. ಕಳೆದ ವರ್ಷವಷ್ಟೇ ...ಸ್ತಪರಿಗೆ ತಮ್ಮ ಜೀವಮಾನದ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.



ಪ್ರಾಯೋಗಿಕ ಸಂಚಿಕೆ

ಹುಣ್ಣಿಮೆಯಿಂದ ಹುಣ್ಣಿಮೆಗೆ..

ಆದಿಮ ನೆಲ ಸಂಸ್ಕೃತಿಯ ನಡೆ

ಲಿವಿಂಗ್ ಟೈಮ್ಸ್

...ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು

ಭಾರತವೇ ನೀನು ಮಲದ ಗುಂಡಿ ಆಗದಿರು...

'ಆದಿಮ ಲಿವಿಂಗ್ ಟೈಮ್ಸ್' ರಾಮಯ್ಯನವರು ತೀರಾ ಈಚೆಗೆ ಹೊರತಂದಿರುವ ಹೊಸ ಪತ್ರಿಕೆ. 'ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು' ಎಂಬ ಅಡಿಟಿಪ್ಪಣಿಯೊಂದಿಗೆ ಹೊರಬಂದಿರುವ 'ಲಿವಿಂಗ್ ಟೈಮ್ಸ್'ನ 16 ಪುಟಗಳ ಮೊದಲ ಸಂಚಿಕೆ ನೆಲ ಸಂಸ್ಕೃತಿಯ ನಡೆಗಳ ನೆನಪುಗಳನ್ನು ಬಿಚ್ಚಿಡುತ್ತದೆ. ಇದುವರೆಗೂ 65 ಹುಣ್ಣಿಮೆಗಳನ್ನು ಪೂರೈಸಿರುವ ಆದಿಮ, ಪ್ರತಿ ತಿಂಗಳೂ ಅಲ್ಲಿ ತಪ್ಪದೇ ನಡೆಯುವ ಹುಣ್ಣಿಮೆ ಹಾಡುಗಳ ಮೂಲಕ ಪುಟ್ಟದೊಂದು ಪ್ರೇಕ್ಷಕ ಸಮೂಹವನ್ನು ಸೃಷ್ಟಿಸಿಕೊಂಡಿದೆ. 'ಪದ್ಮ ಪಾಣಿ'?, 'ಧರೆಗೆ ದೊಡ್ಡವರು' ನಾಟಕಗಳ ವಿಮರ್ಶೆಯ ಜೊತೆಗೆ 'ಆದಿಮ'ವನ್ನು ಮೊದಲು ಮುಟ್ಟಿದವರ ಅನುಭವದ ಕಥನಗಳಿವೆ. ಜಿಂಕೆ ರಾಮಯ್ಯನವರ ಕುರಿತ ಅಪರೂಪದ ಲೇಖನವೊಂದನ್ನು ವಿ.ಎಸ್.ಎಸ್.ಶಾಸ್ತ್ರಿ ಬರೆದಿದ್ದಾರೆ. ಮುನಿಯಪ್ಪಜ್ಜನ ಮೊಮ್ಮಗ ಅಶೋಕ ತಮ್ಮ ತಾತನ 105 ವರ್ಷಗಳ ಬದುಕಿನ ದುಃಖ ಸಂಕಟಗಳನ್ನು 'ಹುಲಿ ಕೊಂದ ಅಜ್ಜನ ಹೆಜ್ಜೆಗಳ'ಲ್ಲಿ ನವಿರಾಗಿ ಬಿಡಿಸಿಟ್ಟಿದ್ದಾರೆ. ಆದಿಮ ಲಿವಿಂಗ್ ಟೈಮ್ಸ್ ನೆನಪಿನ ಶಾಲೆಯೂ ಹೌದು.

'ನಾವು ಇಡುವ ಪ್ರತಿ ಹೆಜ್ಜೆಯಡಿಯ ಮಣ್ಣಲ್ಲಿರಬಹುದಾದ ಮೊಳೆವ ಬೀಜಗಳೂ, ಹುಲ್ಲುಗರಿಕೆ, ಬಗ್ಗಿದರೂ ಬಾಗದ ಬಿದಿರ ವಿಕಾಸದ ಬೆರಗನ್ನ... ಬಂಡೆಯ ಬಿರುಕಿನ ಪಯಣದ ಸುಖದುಃಖಗಳನ್ನ ಕಟ್ಟಿಕೊಡುವುದೇ ಈ ಪತ್ರಿಕೆಯ ಆಶಯ. ಇಷ್ಟು ವರ್ಷಗಳ ಕಾಲ ಇದೀಗ ಸಾಧ್ಯವಾದಷ್ಟು ಈ ನೆಲಕ್ಕೆ ಈ ಹೊತ್ತಿಗೆ ಬೇಕಾದ್ದನ್ನು ನಮ್ಮೊಳಗಿನ ಜೀವಂತ ಪಠ್ಯಗಳಿಂದಲೇ ತುಂಬಿಕೊಳ್ಳುವುದು ಈ ಪತ್ರಿಕೆಯ ಆಶಯ. ನಾವು ಬದುಕುವ ಪರಿಸರದ ಪಾಠಗಳು ಮುಂತಾಗಿ ಜೀವಂತ ಪಠ್ಯಗಳಿಂದ ರೂಪಿಸಬೇಕೆಂಬುದು ನಮ್ಮ ಇಂಗಿತವಾಗಿದೆ' ಎಂದು ಸಂಪಾದಕೀಯದಲ್ಲಿ ಹೇಳಿಕೊಂಡಿರುವ ರಾಮಯ್ಯನವರ ಮಾತುಗಳು ಜಾಗತೀಕರಣದ ಹೆಸರಿನಲ್ಲಿ ಎಲ್ಲವನ್ನೂ Price tagನಿಂದಲೇ ಅಳೆಯುತ್ತಿರುವ ಈ ಕಾಲಘಟ್ಟದಲ್ಲಿ ಉಳಿವಿನ ಪಠ್ಯಗಳನ್ನು ಉಳಿಸಿಕೊಳ್ಳಲೇಬೇಕಾದ ತುರ್ತನ್ನು ಹೇಳುತ್ತವೆ. ಹುಣ್ಣಿಮೆಯಿಂದ ಹುಣ್ಣಿಮೆಗೆ ಕಾಣಿಸಿಕೊಳ್ಳುವ ರಾಮಯ್ಯನವರ 'ಲಿವಿಂಗ್ ಟೈಮ್ಸ್' ಅನ್ನು ಕನ್ನಡಿಗರು ಸಂಭ್ರಮದಿಂದ ಬರಮಾಡಿಕೊಳ್ಳಲಿ.

ಆದಿಮ ಲಿವಿಂಗ್ ಟೈಮ್ಸ್

ಸಂಪಾದಕರು: ಕೋಟಿಗಾನಹಳ್ಳಿ ರಾಮಯ್ಯ

ಪ್ರಕಾಶಕರು: ಆದಿಮ ಲಿವಿಂಗ್ ಸ್ಕೂಲ್, ಉಸ್ಮಾನ್ ತಾತಾನ ದರ್ಗಾದ ಎದುರು, ಪಾಪರಾಜನಹಳ್ಳಿ (ಗ್ರಾಮ), ತೇರಹಳ್ಳಿ ಬೆಟ್ಟ, ಮಡೇರಹಳ್ಳಿ (ಅಂಚೆ), ಕೋಲಾರ (ತಾಲೂಕು ಮತ್ತು ಜಿಲ್ಲೆ)

ಪುಟಗಳು: 16, ಬಿಡಿಪ್ರತಿ ಬೆಲೆ: ರೂ.10



ಒಂದು ದಿನ ನನ್ನ ಮಗಳು ಗೌರಿ ಸೌತ್ ಎಂಡ್ ಸರ್ಕಲ್‌ನಲ್ಲಿ ಪಾನಿಪುರಿ ತಿಂದು ಮನೆಗೆ ಬಂದಳು. ಅವತ್ತು ರಾತ್ರಿ ಅವಳಿಗೆ ತುಂಬಾ ಜ್ವರ. ಆಕೆಯ ಮೈಮುಟ್ಟಿದರೆ ಕೆಂಡದಂತೆ ಸುಡುತ್ತಿತ್ತು. ಆಕೆ ಏನೇನೋ ಮಾತಾಡಲು ಶುರು ಮಾಡಿದಳು. ಒಂದೂ ಅರ್ಥವಾಗುತ್ತಿರಲಿಲ್ಲ. ಇದು ಸಾಮಾನ್ಯ ಜ್ವರ ಅಲ್ಲ ಎಂದು ಗೊತ್ತಾಗಿ ರಾತ್ರಿ 11ರ ಹೊತ್ತಿಗೆ ಗಾಂಧಿ ಬಜಾರಿನಲ್ಲಿದ್ದ ಪಾಂಡು ನರ್ಸಿಂಗ್ ಹೋಂಗೆ ಅವಳನ್ನು ನಾನು ಮತ್ತು ಲಂಕೇಶರು ಕರೆದುಕೊಂಡು ಹೋದೆವು.

ಅಷ್ಟು ಹೊತ್ತಿಗೆ ಗೌರಿಗೆ ಪ್ರಜ್ಞೆ ತಪ್ಪಿತ್ತು. ಆದರೂ ಆಗೀಗ ಎಚ್ಚರಗೊಂಡು ಕಿರುಚಾಡುತ್ತಿದ್ದಳು. ಆಕೆಯನ್ನು ನೋಡಿದ ಡಾಕ್ಟರ್ "ನಿಮ್ಮ ಮಗುವನ್ನು ನೀವು ಸರಿಯಾಗಿ ಬೆಳೆಸಿಲ್ಲ, ಆಮೇಲೆ ಬಂದು ಅವಳನ್ನು ನೋಡುತ್ತೇನೆ'' ಎಂದು ಹೇಳಿ ಹೋದವರು 12 ಗಂಟೆಯಾದರೂ ವಾಪಸ್ ಬರಲಿಲ್ಲ. ನರ್ಸಿಂಗ್ ಹೋಂನಲ್ಲಿದ್ದ ನರ್ಸ್‌ಗಳನ್ನು ಕೇಳಿದರೆ ಆಕೆ "ಡಾಕ್ಟರ್ ಮತ್ತೆ ಬೆಳಗ್ಗೆ ಬರುತ್ತಾರೆ'' ಎಂದಳು.

ಅದನ್ನು ಕೇಳಿ ಲಂಕೇಶರಿಗೆ ತುಂಬಾ ಸಿಟ್ಟು ಬಂತು. ಮಗಳನ್ನು ಎತ್ತಿಕೊಂಡು ಅಲ್ಲಿಂದ ಹೊರಟರು. ಅವರನ್ನು ತಡೆಯಲು ನರ್ಸ್ ಪ್ರಯತ್ನಿಸಿದಳು, "ಡಾಕ್ಟರ್ ಅನುಮತಿ ಇಲ್ಲದೆ ಮಗುವನ್ನು ತೆಗೆದುಕೊಂಡು ಹೋಗುವಂತಿಲ್ಲ'' ಎಂದಳು. ಆಗ ಲಂಕೇಶರು "ನಿಮ್ಮ ನರ್ಸಿಂಗ್ ಹೋಂನ ಗಾಜುಗಳಲ್ಲಿ ಒಂದೂ ಇರದಂತೆ ಎಲ್ಲವನ್ನು ಚಿಂದಿ ಮಾಡುತ್ತೇನೆ. ನಮ್ಮ ಮಗುಗೆ ಜ್ವರ ಬಂದು ನರಳಾಡುತ್ತಿದ್ದರೆ ನಾವು ನಮ್ಮ ಮಗಳನ್ನು ಸರಿಯಾಗಿ ಸಾಕಿಲ್ಲ ಎನ್ನುತ್ತೀರಾ? ನಿಮ್ಮನ್ನು ನೋಡಿಕೊಳ್ಳುತ್ತೇನೆ'' ಎಂದು ರೇಗಿದರು.

ನಾವಿಬ್ಬರು ಗೌರಿಯನ್ನು ಎತ್ತಿಕೊಂಡು ಆಟೋದಲ್ಲಿ ಮಾರ್ಥಾಸ್ ಆಸ್ಪತ್ರೆಗೆ ಹೋದೆವು. ಮಳೆ ಜೋರಾಗಿ ಸುರಿಯುತ್ತಿತ್ತು. ಅಷ್ಟು ಹೊತ್ತಿಗೆ ಮರುಳಸಿದ್ದಪ್ಪ ಅವರಿಗೆ ಲಂಕೇಶ್ ಫೋನ್ ಮಾಡಿದ್ದರಿಂದ ಅವರೂ ಮಾರ್ಥಾಸ್ ಆಸ್ಪತ್ರೆಗೆ ಬಂದರು. ನಮ್ಮ ಮಗಳ ಸ್ಥಿತಿಯನ್ನು ನೋಡಿದ ಆ ಆಸ್ಪತ್ರೆಯ ಡಾಕ್ಟರ್‌ಗಳು ಆಕೆಯನ್ನು ಕೂಡಲೇ ಅಡ್ಮಿಟ್ ಮಾಡಿಕೊಂಡರು.

ಗೌರಿಗೆ ಮೆದುಳಿನ ಜ್ವರ ಆಗಿದೆ ಎಂದು ಹೇಳಿ ಆಕೆಗೆ ಟ್ರೀಟ್‌ಮೆಂಟ್ ಶುರು ಮಾಡಿದರು. ಆಕೆಯ ಬೆನ್ನಿನ ಮೂಳೆಯ ರಕ್ತನಾಳದಿಂದ ದ್ರವ ತೆಗೆಯಬೇಕೆಂದು ವೈದ್ಯರು ಹೇಳಿದರು. ಗೌರಿಗೆ ತಾನೆಲ್ಲಿದ್ದೇನೆ, ತನಗೆ ಏನಾಗುತ್ತಿದೆ ಎಂಬುದರ ಅರಿವೇ ಇರಲಿಲ್ಲ. ಆಕೆಗೆ ಪ್ರಜ್ಞೆ ಇಲ್ಲದಿದ್ದರೂ ಚೀರಾಡುತ್ತಿದ್ದಳು, ಆಕೆಯನ್ನು ಹಿಡಿದುಕೊಂಡಿದ್ದವರ ಕೈಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಳು. ಆಗ ಆಕೆಯನ್ನು ನಾಲ್ಕು ಜನ ಬಿಗಿಯಾಗಿ ಹಿಡಿದ ನಂತರವೇ ಆಕೆಯ ಬೆನ್ನು ಮೂಳೆಗೆ ಇಂಜೆಕ್ಷನ್ನಿನ ಸೂಜಿ ಚುಚ್ಚಿ ದ್ರವವನ್ನು ತೆಗೆಯಬೇಕಾಯಿತು.

ಗೌರಿಯನ್ನು ಪರೀಕ್ಷಿಸಿದ ನಂತರ ವೈದ್ಯರು "ನಿಮ್ಮ ಮಗಳಿಗೆ 42 ಗಂಟೆಯ ಒಳಗೆ ಪ್ರಜ್ಞೆ ಬರಬೇಕು. ಇಲ್ಲವೆಂದರೆ ಆಕೆ ಬದುಕುತ್ತಾಳೆ ಎಂದು ಗ್ಯಾರಂಟಿ ಕೊಡಲಾಗುವುದಿಲ್ಲ. ಆಕೆಗೆ ಅಕಸ್ಮಾತ್ ಪ್ರಜ್ಞೆ ಬಂದರೂ ಆಕೆ ಕುರುಡಿ ಆದರೂ ಆಗಬಹುದು'' ಎಂದರು. ಅದನ್ನು ಕೇಳಿ ನಾವಿಬ್ಬರು ದಂಗಾಗಿ ಹೋದೆವು. ನನ್ನ ಮಗಳ ಕಣ್ಣುಗಳು ಅವಳ ಅಪ್ಪನಷ್ಟೇ ಚೆನ್ನ. "ನನ್ನ ಮಗಳ ಕಣ್ಣುಗಳ ಮುಂದೆ ಹೇಮಾಮಾಲಿನಿಯ ಕಣ್ಣು ಯಾವ ಲೆಕ್ಕಕ್ಕೂ ಇಲ್ಲ'' ಎನ್ನುತ್ತಿದ್ದೆ ನಾನು. ಅಂತಹ ಮಗಳು ಕುರುಡಿಯಾದರೆ ಎಂಬ ಚಿಂತೆ ಆಯಿತು. ಆಕೆ ಕಣ್ಣು ಕಳೆದುಕೊಂಡು ಕುರುಡಿಯಾಗಿ ಜೀವಿಸುವುದಕ್ಕಿಂತ ಆಕೆ ಬದುಕಿರದಿದ್ದರೇ ವಾಸಿ ಅನ್ನಿಸುತ್ತಿತ್ತು ಕೆಲವೊಮ್ಮೆ.


ನನ್ನ ಕಷ್ಟದ ದಿನಗಳು ಶುರುವಾದವು. ನನ್ನ ತಲೆ ಸಂಪೂರ್ಣ ಖಾಲಿ ಆಗಿತ್ತು. ಆಸ್ಪತ್ರೆಯಲ್ಲಿ ನನ್ನ ಮಗಳನ್ನೇ ನೋಡುತ್ತಾ ಕುಳಿತೆ. ಐದು ನಿಮಿಷಕ್ಕೊಮ್ಮೆ ಗಡಿಯಾರ ನೋಡುತ್ತಾ ಆಕೆ ಆದಷ್ಟು ಬೇಗ ಪ್ರಜ್ಞೆ ಪಡೆಯಲಿ ಎಂದು ಆಶಿಸುತ್ತಿದ್ದೆ. ಹಾಸಿಗೆಯ ಮೇಲೆ ಕಣ್ಣುಮುಚ್ಚಿ ಮಲಗಿದ್ದ ಗೌರಿ ಯಾವುದೇ ರೀತಿಯ ಚಲನೆ ಇಲ್ಲದೆ ಹಾಗೇ ಮಲಗಿದ್ದಳು. ಆಕೆ ಪ್ರಜ್ಞೆ ಕಳೆದುಕೊಂಡ 36 ಗಂಟೆಗಳ ನಂತರ ಸಣ್ಣಗೆ ಕೈ ಕಾಲು ಆಡಿಸಿದಳು. ಆದರೂ ಕಣ್ಣು ಬಿಡಲಿಲ್ಲ, ಕೊನೆಗೆ 38 ಗಂಟೆಗೆ ಕಣ್ಣುಬಿಟ್ಟಳು.

ನನಗೆ ಹೋದ ಜೀವ ಬಂದಂತಾಯಿತು. ಆಕೆಗೆ ಕಣ್ಣು ಕಾಣಿಸುತ್ತಿತ್ತು. ಜ್ವರ ಬಂದ ಎರಡು ದಿನಗಳಲ್ಲಿ ಗೌರಿಯ ಕೈಕಾಲು ಬತ್ತಿ ಹೋಗಿದ್ದವು. ಆಕೆಗೆ ನಿಲ್ಲಲೂ ಇರಲಿಲ್ಲ. ಆಕೆಯನ್ನು ಹಿಡಿದು ನಿಲ್ಲಿಸಿದರೆ ಬೀಳುತ್ತಿದ್ದಳು. ಅವಳನ್ನು ಕೆಲವು ದಿನಗಳ ಕಾಲ ಐಸಿಯುನಲ್ಲೇ ಇಟ್ಟಿದ್ದರು.

ನನ್ನ ಕಷ್ಟದ ದಿನಗಳು ಶುರುವಾದವು. ನನ್ನ ತಲೆ ಸಂಪೂರ್ಣ ಖಾಲಿ ಆಗಿತ್ತು. ಆಸ್ಪತ್ರೆಯಲ್ಲಿ ನನ್ನ ಮಗಳನ್ನೇ ನೋಡುತ್ತಾ ಕುಳಿತೆ. ಐದು ನಿಮಿಷಕ್ಕೊಮ್ಮೆ ಗಡಿಯಾರ ನೋಡುತ್ತಾ ಆಕೆ ಆದಷ್ಟು ಬೇಗ ಪ್ರಜ್ಞೆ ಪಡೆಯಲಿ ಎಂದು ಆಶಿಸುತ್ತಿದ್ದೆ. ಹಾಸಿಗೆಯ ಮೇಲೆ ಕಣ್ಣುಮುಚ್ಚಿ ಮಲಗಿದ್ದ ಗೌರಿ ಯಾವುದೇ ರೀತಿಯ ಚಲನೆ ಇಲ್ಲದೆ ಹಾಗೇ ಮಲಗಿದ್ದಳು. ಆಕೆ ಪ್ರಜ್ಞೆ ಕಳೆದುಕೊಂಡ 36 ಗಂಟೆಗಳ ನಂತರ ಸಣ್ಣಗೆ ಕೈ ಕಾಲು ಆಡಿಸಿದಳು. ಆದರೂ ಕಣ್ಣು ಬಿಡಲಿಲ್ಲ.



ಸಾವಿನ ದವಡೆಯಿಂದ ವಾಪಸ್ ಬಂದ ಗೌ



ಆ ದಿನಗಳಲ್ಲಿ ಲಂಕೇಶರ ಶಿಷ್ಯರಲ್ಲಿ ಒಬ್ಬರಾಗಿದ್ದ ಹರಿಹರಪ್ರಿಯ ನಮ್ಮ ಮನೆಗೆ ಬರುತ್ತಿದ್ದರು. ಅವರು ಮತ್ತು ನಾನು, ಇಬ್ಬರೂ ಆಸ್ಪತ್ರೆಯಲ್ಲಿ ಒಬ್ಬರನಂತರ ಒಬ್ಬರಂತೆ ಸರದಿಯಲ್ಲಿ ಗೌರಿಯ ಹತ್ತಿರ ಕೂತಿರುತ್ತಿದ್ದೆವು.


ಶಾಂತಾಳ ಮಗ ವಿವೇಕ್ ಮತು ಇಂದ್ರೆಜಿತ್

ದಿನಾ ಶಾಂತಾ ಆಸ್ಪತ್ರೆಗೆ ಊಟ ತಂದು ಕೊಡುತ್ತಿದ್ದಳು. ಅಷ್ಟು ಹೊತ್ತಿಗೆ ಆಕೆಗೆ ಒಬ್ಬ ಗಂಡು ಮಗ ಹುಟ್ಟಿದ್ದ. ಅವರ ಮನೆ ಜಯನಗರದಲ್ಲಿತ್ತು.

ಕೆಲದಿನಗಳ ನಂತರ ಗೌರಿಯನ್ನು ಜನರಲ್ ವಾರ್ಡ್‌ಗೆ ಶಿಫ್ಟ್ ಮಾಡಿದರು. ಆದರೂ ಆಕೆ ಚೇತರಿಸಿಕೊಳ್ಳಲು ಬಹಳ ದಿನಗಳೇ ಬೇಕಾದವು. ಅವತ್ತು ನಾವು ಗೌರಿಯನ್ನು ಮಾರ್ಥಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರದಿದ್ದರೆ ಅವಳು ಖಂಡಿತಾ ಬದುಕುಳಿಯುತ್ತಿರಲಿಲ್ಲ.

ಆಗ ನಮ್ಮ ಮನೆಯ ಎದುರು ಒಂದು ಕೊಂಕಣಿ ಬ್ರಾಹ್ಮಣ ಕುಟುಂಬ ವಾಸಿಸುತ್ತಿತ್ತು. ಅವರ ಮನೆಯಲ್ಲಿ ತಂದೆ, ತಾಯಿ, ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣು ಮಕ್ಕಳಿದ್ದರು. ಒಂದು ದಿನ ಅವರು ಗೌರಿ ಹೇಗಿದ್ದಾಳೆಂದು ವಿಚಾರಿಸಿಕೊಂಡು ಹೋಗಲು ಆಸ್ಪತ್ರೆಗೆ ಬಂದರು. ಅಷ್ಟೇ ಅಲ್ಲ, ಅವರು ನಮ್ಮ ಮನೆಯ ಬಾಗಿಲ ಕೀ ತೆಗೆದುಕೊಂಡು ಹೋಗಿ ಮಾರನೆಯ ದಿನ ನಮ್ಮ ಮನೆಯನ್ನು ಕ್ಲೀನ್ ಮಾಡಿ ನನಗೆ ಊಟ ತೆಗೆದುಕೊಂಡು ಬಂದರು. ಒಂದು ದಿನ ಅವರ ಮನೆಯ ಹುಡುಗ 33 ವರ್ಷದ ದಿನಕರ್ ಎಂಬಾತ ಆಸ್ಪತ್ರೆಗೆ ಬಂದಿದ್ದಾಗ ಗೌರಿ ವಾಂತಿ ಮಾಡಿದಳು. ಆಕೆಯ ಮುಂದೆ ನಿಂತಿದ್ದ ದಿನಕರ್ ಕೈ ಚಾಚಿ ಆಕೆ ಮಾಡಿದ್ದ ವಾಂತಿಯನ್ನು ಕೈಯಲ್ಲಿ ಹಿಡಿದುಕೊಂಡ. ಅಂತೂ ಆ ಕುಟುಂಬದವರು ನಾನು ಕಷ್ಟದಲ್ಲಿದ್ದಾಗ ತುಂಬಾ ಸಹಾಯ ಮಾಡಿದರು.

ಗೌರಿ ಹಬ್ಬದ ದಿನದಂದು ನಮ್ಮ ಮಗಳು ಗೌರಿಯನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದೆವು. ಒಂದು ವರ್ಷದಲ್ಲಿ ಇಷ್ಟೆಲ್ಲ ನಡೆಯಿತು.

****


ಗೌರಿಗೆ ಬ್ರೈನ್ ಫೀವರ್ ಆದಾಗ ಆಕೆ ಏಳನೇ ತರಗತಿಯಲ್ಲಿ ಓದುತ್ತಿದ್ದಳು. ಆಕೆ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸಮಯ ಹಿಡಿದಿದ್ದರಿಂದ ಆಕೆ ಬಹಳಷ್ಟು ದಿನ ಶಾಲೆಯಿಂದ ಹೊರಗೆ ಉಳಿದಿದ್ದಳು. ಎಲ್ಲಾ ವಿದ್ಯಾರ್ಥಿಗಳ ಜೀವನದಲ್ಲಿ ಏಳನೇ ತರಗತಿಯ ಪರೀಕ್ಷೆಗಳು ಒಂದು ಮುಖ್ಯ ಘಟ್ಟ. ಅದರಲ್ಲಿ ಚೆನ್ನಾಗಿ ಮಾರ್ಕ್ಸ್ ತೆಗೆದುಕೊಂಡರೆ ಉತ್ತಮ ಹೈಸ್ಕೂಲಿನಲ್ಲಿ ಪ್ರವೇಶ ಸಿಗುತ್ತದೆ. ಆದರೆ ಬಹಳಷ್ಟು ಕ್ಲಾಸ್‌ಗಳನ್ನು ಗೌರಿ ಮಿಸ್ ಮಾಡಿಕೊಂಡಿದ್ದರಿಂದ ಆಕೆಯನ್ನು ಆ ವರ್ಷ ಪರೀಕ್ಷೆಗಳಿಗೆ ಕಳುಹಿಸುವುದು ಬೇಡವೆಂದು ನಾನು ಮತ್ತು ಲಂಕೇಶರು ನಿರ್ಧರಿಸಿದೆವು. ಆದರೆ ಗೌರಿ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತೇನೆ ಎಂದು ನಿರ್ಧರಿಸಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಕೂಡ ಆದಳು.

ನಿಧಾನವಾಗಿ ನಮ್ಮ ಮನೆ ಮುಂದಿದ್ದ ಕೊಂಕಣಿ ಕುಟುಂಬದ ಮಕ್ಕಳು ಮತ್ತು ನಮ್ಮ ಮಕ್ಕಳು ಸ್ನೇಹಿತರಾದರು. ಆ ಕುಟುಂಬ ಬಹಳ ಕಷ್ಟದಲ್ಲಿತ್ತು. ಅವರಿಗೆ ಯಾವ ಮೂಲದಿಂದಲೂ ಆದಾಯ ಇರಲಿಲ್ಲ. ನಾನೂ ಮನೆಗೆ ಹೋಗುತ್ತಿದ್ದೆ. ಅವರ ಮಕ್ಕಳೂ ನಮ್ಮ ಬರುತ್ತಿದ್ದರು.

****

ಇದಾದ ಒಂದು ವರ್ಷದ ನಂತರ ಲಂಕೇಶರು ಸಿನಿಮಾ ತೆಗೆಯಲು ಹೊರಟರು. ಆಗ ಅವರ ಕೈಜೋಡಿಸಲು ಮುಂದಾಗಿದ್ದು ಶಿವಮೊಗ್ಗೆಯ ಬಾಬ ಗೌಡ ಎಂಬುವವರು. ಇವರು ಮೂಲತಃ ತಾಲೂಕಿನವರಾಗಿದ್ದು ಅವರ ತಂದೆ ಸುತ್ತಲ ಪಟೇಲರಾಗಿದ್ದರು.

ಬಾಬುರಾಜು ಗೌಡ ನನ್ನ ತಮ್ಮ ಶಿವಕು ಸ್ನೇಹಿತರು. ಇವರಿಬ್ಬರಿಗೆ ಇನ್ನೊಬ್ಬ ಸ್ನೇಹಿತರಿದ್ದರು ಹೆಸರು ಸಿ.ಎಂ.ಇಬ್ರಾಹಿಂ. ಆಗಿನ ಜೆಪಿ ಚಳವಳಿಯ ಗುರುತಿಸಿಕೊಂಡಿದ್ದ ಇಬ್ರಾಹಿಂ ಅಂದಿನ ಪ್ರಧಾನಿ ಗಾಂಧಿಯ ವಿರುದ್ಧ ಚುರುಕಾದ ಭಾಷಣ ಮಾಡುತ್ತಿ ಬಹಳ ಜನಪ್ರಿಯರಾಗಿದ್ದರು. ಆಗ, ಬಾಬುರಾಜು ನಿರ್ಮಾಪಕರಾಗಿಯೂ, ಇಬ್ರಾಹಿಂ ಹೀರೋ ಆ


ಶಿವಕುಮಾರ್, ಇಂದಿರಾ, ಚಿಕ್ಕಮ್ಮ
ದೇವೀರಮ್ಮ, ಶಾಂತಾ ಮತ್ತು ಚಂದ್ರಶೇಖರ್.
ಹಿಂಬದಿಯಲ್ಲಿ ಗೌರಿ ಮತ್ತು ಕವಿತಾ

ಲಂಕೇಶರು ನಿರ್ದೇಶಕರಾಗಿಯೂ ಒಂದು ಮಾಡುವುದೆಂದು ಎಲ್ಲರೂ ನಿರ್ಧರಿಸಿದರು.

ಲಂಕೇಶರು ಒಂದು ಚಿತ್ರಕತೆಯನ್ನು ಸಿದ್ಧ ಮಾಡಿಕೊಂಡರು. ಅದು ಕನ್ನೇಶ್ವರ ರಾಮನನ್ನು ಕು ಕತೆ. ಆದರೆ ಏನಾಗಿತ್ತೆಂದರೆ ಕನ್ನೇಶ್ವರ ರಾಮನನ್ನು ಬ್ರಿಟಿಷರು ಬಂಧಿಸಿದಾಗ ಆತನನ್ನು ಮಹಜರ್ ಮ ಬಾಬುರಾಜು ಗೌಡರ ತಂದೆ. ಹೀಗಾಗಿ ತಮ್ಮ ಕುಟುಂಬದ ಹೆಸರು ಸಿನಿಮಾದಲ್ಲಿ ಬರುವುದರಿಂದ ಅದನ್ನು ನಿರ್ಮಿಸುವ ನಿರ್ಧಾರದಿಂದ ಬಾಬುರಾಜು ಹಿಂದೆ ಸರಿದರು. ಅದೇ ಹೊತ್ತಿಗೆ ಲಂಕೇಶರ ಮಿತ್ರ ಎಂ. ಭಕ್ತವತ್ಸಲ (ಆಗಿನ ಮಿನರ್ವ ಥೀಯೇಟರ್‌ನ ಮಾಲೀಕರು) ಕೂಡ "ಕನ್ನೇಶ್ವರ ರಾಮನ ಕತೆಯನು ಸಿನಿಮಾ ಮಾಡಲು ಹೆಚ್ಚು ಹಣ ಬೇಕಾಗುತ್ತದೆ. ಅ ಸಮಕಾಲೀನ ಕಥಾವಸ್ತುವನ್ನು ಆಯ್ಕೆ ಮಾಡುಕೊ ಎಂದು ಲಂಕೇಶರಿಗೆ ಸೂಚಿಸಿದರು. ಆಗ ಲಂಕೇಶ ತಮ್ಮ 'ಬಿರುಕು' ಕಾದಂಬರಿಯನ್ನೇ ಚಿತ್ರಕತೆಯಾಗಿ ಮಾರ್ಪಾಡು ಮಾಡಿದರು. ಆದರೆ ಇದನ್ನು ನಿರ್ಮಿ ಯಾರೂ ಮುಂದೆ ಬರಲಿಲ್ಲವಾದ್ದರಿಂದ ಲಂಕೇಶರ ಅದನ್ನು ನಿರ್ಮಿಸಲು ಮುಂದಾದರು.

(ಮುಂದುವರೆಯ



ಶಬ್ದ ನನ್ನೊಳಗೆ
ನಿಶ್ಶಬ್ದ ಸಂತೆಯಲ್ಲಿ
ಹೂವ ಹಾಳೆ
ತೆರೆದಷ್ಟೆ
ಕೋಣೆ ಬೆಳಕು
ಹಾವು ಹಾವರಾಣಿ
ನವಿಲ ಕಾಲ ನೆಲ
ಬಂಗಾರ ಅವ್ವತ ಚೀಲ
ಕಣ್ಣೆರಡು ಕಾಡಿಗೆ
ಎದೆ ತಾಪ ಕೊರಡು ಬೆಂಕಿ
ಈ ಡಬ್ಬ ಕನ್ನಡಿ ಸೊಕ್ಕಿನಲಿ
ಸಿನೆಮಾ ತಾರೆಯರ ಭಂಗಿಯಲಿ
ಸೆಂಟು ಪೌಡರು ಪಿನ್ನು ಲಿಪ್‌ಸ್ಟಿಕ್ಕು
ಎಲ್ಲಾ ಘಾರಿನ್ನು ಪೆಟ್ಟಿಗೆ
ಶಬ್ದ ನನ್ನೊಳಗೆ
ನಿಶ್ಶಬ್ದ ಸಂತೆಯಲ್ಲಿ


-ತಾಜುಮಾ

...ಳ್ರು ಸಂತೋಷ್ಯಗಡೆ ಬೈದೆ ಹೊಗಳಕ್ಯಾದತೇನ್ಲ!

...ಲೋಕಾಯುಕ್ತರಾಗಿದ್ದ ಸಂತೋಷ್ ಹೆಗಡೆಯವ ...ಭ್ರಷ್ಟ ರಾಜಕಾರಣಿಗಳು ಟೀಕಿಸುತ್ತಿರುವುದು ಸೀರನಿಗೆ ...ೋದ್ಯವಾಗಿ ಕಂಡು ವ್ಯಂಗ್ಯವಾಗಿ ನಗುತ್ತಾ,

"...ಈ ಎಡೂರ, ಕುಮಾರಸ್ವಾಮಿ ಯಲ್ಲ ಸಂತೋಸ್ಯಗಡೆ ...ಬಿದ್ದವುರಂತಲ್ಲಾ ಉಗ್ರಿ" ಎಂದ.

"ಅವುರೇಟೆ ಹರಕಂಡ್ರೂ ಸಂತೋಸ್ಯಗಡೆದೊಂದು



...ಕೀಳಕ್ಯಾಗದಿಲ್ಲ ಕಣೊ. ಆನೆ ಹೋಯ್ತಾಯಿದ್ರೆ ನಾಯಿ ...ಳತವಲ್ಲ ಅಂಗಾಯ್ತದೆ ಸುಮ್ಮನಿರು."

"...ಯುಗಡೇರೀಗ ಏನು ಮಾಡ್ತ ಅವುರ್ಲ?" ಎಂದ ...ವ.

"...ಲಂಚ ವಡಿಯುಕ್ಯಾಗದೆಯಿರೊ ಲೋಕಪಾಲ್ ...ಗಲಿ ಅಂತ ಹೋರಾಟ ಮಾಡ್ತ ಅವುರೆ."

"...ರಿ, ಅವುರನ್ಯಾಕೆ ಇವುರ್ಯಲ್ಲ ದೂಸಣೆ ಮಾಡ್ಯರು?"

"...ಮಾಡದಿಲವೆ ಮಾವ, ಆ ಎಡೂರಪ್ಪನ್ನ ದಳದೋರಾಗ್ಲಿ, ...ಸ್ಸಿನೋರಾಗ್ಲಿ ಏಟೇ ಹೋರಾಟ ಮಾಡಿದ್ರು ...ಗಿರಲಿಲ್ಲ. ಅಂತದ್ರಲ್ಲಿ ಯುಗಡೇರು ಮಾಲು ಸಮೇತ ...ನ್ನ ಹಿಡದಂಗೆ ಎಡೂರಪ್ಪನ್ನ ಹಿಡದಾಕಿದ್ರು. ...ಪೈಲನಂಗೆ ಮ್ಯರಿತ್ತಿದ್ದ ಎಡೂರಪ್ಪ ಅಧಿಕಾರ ಕಳಕಂಡು ...ರ ಜೈಲು ಸೇರಿದ. ಅವುನು ಸಂತೋಷ್ಯಗಡೆ ಟೀಕೆ ...ದೆ ಇನ್ನಾರು ಮಾಡ್ಯರು?"

"...ಕುಮಾರಸ್ವಾಮಿನೂ ಏನೋ ಅಂದವುನಂತಲ್ಲಾ?" ...ಸು ಜುಮ್ಮಿ.

"...ಅವುನು ಏನಾರ ಅಂತಾಯಿರತನೆ ಕಣೆ. ಅವುನ್ಯಾಕೊ ...ಬುತ್ತಾ ನಮ್ಮ ಶಿವರಾಮೇಗೌಡನಂಗಾಯ್ತಾ ಅವುನೆ. ...ನಗೌಡಾ, ಹೊರಟ್ಟಿ ಅಂಥೋರ್ಯಲ್ಲ ಅದ್ಯಂಗೆ ಇವುನ್ನ ...ಅಂತ ಒಪ್ಪಿಗಂಡಿದ್ದರೋ ಏನೊ. ಅಂತು ರಾಜಕಾರಣಿ ಒಂಥರಾ ಗತಿಗೆಟ್ಟ ಜೀವನ ಕಣೆ. ನಿಂದೆ ಸುಖ. ಲೀಡ್ರು ಇಲ್ಲ ನಿನಿಗೆ."

"...ಅಯ್ಯೋ ನನ್ನ ಕತೆ ಬ್ಯಾಡ. ಮೂರು ಜನ ಲೀಡ್ರು

...ಹೋ ಮೂರು ಪಾರ್ಟಿ ಯಲವೆ ಇರದೀಗ. ...ಸಿಕ್ಕಿದ್ರೆ ದ್ರೌಪತಿಯಂಗಾಯ್ತಿನೀನು" ಎಂದು ಉಗ್ರಿ ...ದ.

"...ದ್ರು ಈ ಹಾಳು ರಾಜಕಾರಣ ರೋಸು ಕಂಡ್ಯ. ನಮಿಗೆ ...ಯ್ತಾ ಆದಲ್ಲಾ ಇನ್ನು ಎಡೂರಪ್ಪ ಕುಮಾರಣ್ಣ ಯಂಗೆ ...ರೂ"ಎಂದಳು ಜುಮ್ಮಿ.

"...ಕುಮಾರಣ್ಣಂದೇನು ಸಮಸ್ಯೆಯಿಲ್ಲ ಕಣೆ. ಅವುನು ...ದ್ರೂ ಸೀರಿಯಸ್ಸಾಗಿ ತಗಂಡಿಲ್ಲ. ಬಳ್ಳಾರಿ ...ರಣನೇ ಬೇಕಾಗಿಲ್ಲ ಅವುನಿಗೆ."

"ಅದ್ಯಾಕ್ ಬೇಕಾಗಿಲ್ಲ?"

"ಯಾವಾಗ ಅಂದ್ರಾವಾಗ ಅಸೆಂಬ್ಲಿ ಯಲಕ್ಷನ್ ಬರಬವುದು. ಈಗ್ಲು ಸೋತು ತಿರಗ ಆಗ್ಲು ಸೋಲದ್ಯಾಕೆ ಅಂತ ಯಲಕ್ಷನ್‌ಗೆ ಕ್ಯಾಂಡೇಟ್‌ನೆ ಹಾಕಲಿಲವಂತೆ."

"ಅಂಗರೆ ವಳ್ಳೆ ದುಡ್ಡುಳಿಸ್ತ" ಎಂದ ಸೀರ.

"ವಳ್ಳೆ ಐಡಿಯಾ ಮಾಡಿದ. ಎಲ್ಲೆಲ್ಲಿ ಸೋಲ್ತಿವೊ ಅಲ್ಲಿ ಕ್ಯಾಂಡೇಟ್ ಹಾಕದೆ ನಮಿಗೆ ಬೇಕಾದೋನಿಗೆ ಸಪೋರ್ಟು ಮಾಡಿದ್ರೆ ಮುಂದೆ ಅವುನೂ ಬೇಕಾಯ್ತನೆ ಅಂತ ರಾಮುಲುಗೆ ಸಪೋಟು ಮಾಡ್ತಯಿದ್ದನಂತೆ."

"ಇದ್ಯಾವ ಸೀಮೆ ರಾಜಕಾರಣನ್ಲ?" ಎಂದ ಕಾಳಮಾವ.

"ಇದು ಬಳ್ಳಾರಿ ಸೀಮೆ ರಾಜಕಾರಣ ಕಣಮಾವ. ಅಲ್ಲಿ ಜೆಡಿಎಸ್‌ನೋರ ಆಟ ನ್ಯಡಿಯದಿಲ್ಲ, ಅದ್ಕೆ ಕುಮಾರಣ್ಣ ವಳ್ಳೆ ತೀರಮಾನ ತಗಂಡ."

"ವಳ್ಳೆ ತೀರಮಾನನೆ ಕ್ಯಟ್ಟ ತೀರಮಾನ ಆಯ್ತಾ ಅದೆಲ್ಲೊ ಉಗ್ರಿ?" ಎಂದ ವಾಟಿಸ್ಸೆ.

"ಅದ್ಯಂಗಪ್ಪ?"

"ರೆಡ್ಡಿ-ರಾಮುಲು ಯರಡದೇಹ ಒಂದೇ ಜೀವ ಅನ್ನದ ಒಪ್ಪಿಗತಿಯಾ?"

"ಅದರಲ್ಯರಡು ಮಾತೇಯಿಲ್ಲ ಬುಡು. ರಾಮುಲು ಬಿಜೆಪಿಗೆ ರಾಜಿನಾಮೆ ಬರದು ತಿರಗ ಯಲಕ್ಷನ್ನಿಗೆ ನಿಲ್ಲಬೇಕಾದ್ರೆ ಜೈಲಲ್ಲಿರೊ ರೆಡ್ಡಿ ಮಾತು ಕೇಳೇ ಅಲವೇನೊ. ಅಲ್ಲಿಗೆ ಅವುರು ಒಂದೆಯಾ."

"ರಾಮುಲುಗೆ ಕುಮಾರಣ್ಣ ಸಪೋಟು ಮಾಡಿದ್ರೆ ರೆಡ್ಡಿಗೆ ಮಾಡಿದಂಗೇ ಅಲವೆ. ಅಲ್ಲಿಗೆ ಕುಮಾರಸ್ವಾಮಿ ರಾಜಕಾರಣ ಏನೂ ಅನ್ನದೆ ಜೆಡಿಎಸ್‌ನೋರಿಗೆ ತಲೆ ನವ್ವಾಗ್ಯದಂತೆ. ಇದು ವಂಡ್ರುಪುಲ್ ಸಿಚುಯೇಶನ್ನು."

"ಅದ್ಯಾಕ್ ವಂಡ್ರುಪುಲ್ಲೊ?"

"ನಮ್ಮ ಅಪರೂಪದ ರಾಜಕಾರಣಿ ಎಡೂರಪ್ಪನವರು ಬಳ್ಳಾರಿ ಯಲಕ್ಷನ್‌ಗೆ ಪ್ರಚಾರಕ್ಕೆ ಬರದಿಲವಂತೆ. ಕುಮಾರಣ್ಣಾರು ಕ್ಯಾಂಡೇಟನೆ ಹಾಕಿಲ್ಲ. ಅಂತೂ ಇಬ್ರೂ ರಾಮುಲು ಪರ ಅವುರೆ ಅಂದಂಗಾಯ್ತು. ಇನ್ನೊಂದು ಮ್ಯಾಟ್ರೇನಪ್ಪ ಅಂದ್ರೆ ಇಬ್ರು ಒಂದೇ ದನಿಲಿ ಸಂತೋಷ್ ಹೆಗಡೆನ ಟೀಕೆ ಮಾಡ್ತ ಅವುರೆ. ಇದನ್ಯಲ್ಲ ನೊಡಿದ್ರೆ ಅಂಗನ್ನುಸ್ತದೆ ಉಗ್ರಿ."

"ಕ್ಯಟ್ಟ ಜನ್ಯಲ್ಲ ಒಂದಾಯ್ತ ಅವುರೆ ಅನ್ನು."

"ನೋ ಡವುಟ್. ಅವುರ್‍ಯಾವ ಪಾರ್ಟಿಲಿದ್ರೂ ಯಾವತ್ತೂ ಒಂದೆಯಾ."

"ಬಳ್ಳಾರಿಲಿ ರಾಮುಲು ಗೆಲ್ತನೇನ್ಲ?" ಎಂದಳು ಜುಮ್ಮಿ.

"ರಿಜಲ್ಟೇಳಕ್ಕೆ ಇನ್ನೂ ಟೈಮದೆ ಕಣಕ್ಕ. ಅಂತೂ ಅಲ್ಲಿ ಬಿಜೆಪಿ ಹೋರಾಡ್ತಯಿರದು ರಾಮುಲು ವಿರುದ್ಧ. ಕಾಂಗ್ರೆಸ್ ಹೋರಾಡ್ತಯಿರದು ಇವರಿಬ್ರ ವಿರುದ್ಧ. ಕುಮಾರಣ್ಣ ಯಾರು ವಿರುದ್ಧನೂ ಹೋರಾಡದೆ ತಪ್ಪಿಸಿಗಂಡ. ಯಾಕೆ ಅಂದ್ರೆ ಅದಕೆ ಒಂದು ಸರಿಯಾದ ಕಾರಣ ಅದೆ."

"ಅದ್ಯಾವ ಕಾರಣನಪ್ಪ?"

"ಅವುನ ಪಾರ್ಟಿಗಲ್ಲಿ ರೇವಣಿ ಬತ್ತಿರಲಿಲ್ಲ. ಅದನ್ನ ಅವುರಪ್ಪನಿಂದ ತಿಳಕಂಡು ಸುಮ್ಮನಾದ."

"ಅದಕ್ಕಿಂತ್ಲುವೆ ಮನೆಲಿರೋರ ಮ್ಯಾಲ್ಯಲ್ಲ ಕೇಸದಲ್ಲೊ. ಅಂತದ್ರಲ್ಲಿ ಬಳ್ಳಾರಿಲಿ ತಿರುಗಿ ಓಟು ಕೇಳದ್ಯಂಗೆ ಅಂತ್ಲೂ ಯೋಚನೆ ಮಾಡಿರಬವುದು."

"ಏನೋ ಉಗ್ರಿ ಹಿಂಗಂತಿ? ದ್ಯಾವೇಗೌಡ್ರು ಯಾವತ್ತಾರ ಕೇಸ್‌ಗಳಿಗೆ ಹೆದರಿದ್ದರೇನೊ? ಪೊಲೀಸ್‌ನೋರಿಗೆ ಪೋನ್ ಮಾಡಿ ಯಾಕಪ್ಪಾ ಮೈ ಕಡಿತದ ಅಂತ ಕೇಳ್ತಾರೆ ಗೊತ್ತೆ?"



"ಅವುನ್ಯಾಕಂಗೆ ಕೇಳ್ತನ್ಲ, ಇಲ್ಲದ್ನೆ ಹೇಳಬ್ಯಾಡ" ಎಂದ ಕಾಳಮಾವ.

"ದ್ವಡಪ್ಪ, ಗಾಡ್‌ಪ್ರಾಮಿಸ್. ನಾನು ಸುಳ್ಳೇಳತಾಯಿಲ್ಲ. ಲಾಸ್ಟ್‌ವೀಕು ಲೋಕಾಯುಕ್ತ ಪೊಲೀಸರಿಗೆ ಪೋನ್ ಮಾಡಿ 'ಯಾರಯ್ಯ ನೀನು? ಮಾಜಿ ಪ್ರಧಾನಮಂತ್ರಿಗಳ ಮಗನ ಮನೆಗೆ ಜಪ್ತಿ ಮಾಡೋವಷ್ಟು ಧೈರ್ಯ ಬಂತೆ ನಿನಿಗೆ? ಮುಂದೆ ನನ್ನ ಮಗ ಕುಮಾರಸ್ವಾಮಿ ಮುಖ್ಯಮಂತ್ರಿಯಾಗ್ತನೆ. ಆಗ ನಿನ್ನನ್ನ ಏನು ಮಾಡ್ತಿವಿ ಗೊತ್ತಾ' ಅಂದರಂತೆ."

"ದ್ಯಾವೇಗೌಡ ಅಂಗಂದಿರತನೆ ಬುಡು. ಚುನಾವಣೆ ಮಾಡೋರ್ನೆ ಬುಟ್ಟಿಲ್ಲ ಅವುನು" ಎಂದ ಸೀರ.

"ರೇವಣ್ಣನೂ ಅಂಗೆ ಅಲವೇನೋ ಮಾವ. ಹಾಸನ ಜಿಲ್ಲೆ ಅಧಿಕಾರಿಗಳು ಅವುನೇಳಿದಂಗೆ ಕೇಳಿದ್ರೆ ಸರಿ, ಇಲ್ಲ ಅಂದ್ರೆ ನಮ್ಮಪ್ಪನಿಗೇಳ್ತಿನಿ ಅಂದನಂತೆ."

"ಥೂ, ಥೂ, ಅಂಗನ್ನದಿಲ್ಲ ಕಣೊ ಅವುನು. ವಳೆನರಸಿಪುರದ ಭಾಷೆಲೆ ಬೋದು, 'ನಿನಿಗೇನು ಮಾಡ್ತಿನಿ ನೋಡು' ಅಂತ ಧಮಕಿ ಹಾಕ್ತನಂತೆ ಕಣೊ ಉಗ್ರಿ. ಅಂಗಂದ್ರೆ ಅಧಿಕಾರಿಗಳು ಹೆದರದಿಲವೆ" ಎಂದ ವಾಟಿಸ್ಸೆ.

"ಹೆದರದೇನು, ಈಗಾಗ್ಲೆ ಶಂಕರ ಬಿದರಿ ದ್ಯಾವೇಗೌಡ್ರ ತುಂಡು ಗುತ್ತಿಗೆ ತನಿಖೆ ಸವಾಸನೆ ಬ್ಯಾಡ ಅಂತ ಪೈಲಿಸ್ತು ಸುಮ್ಮನಾದ ಅಂದ್ರೆ ಕುಮಾರಸ್ವಾಮಿ ಇನ್ನ್ಯಂಗೆ ಹೆದರಿಸಿರಬವುದು."

"ಕುಮಾರಸ್ವಾಮಿ ಹೆದರಸೀದ್ರೆ ಪೋನ್‌ಗೀನ್ ಮಾಡದಿಲ್ಲ ಕಣೊ ಉಗ್ರಿ. ಡೈರೆಕ್ಟಾಗಿ ಹೋಗಿ ಧಮಕಿ ಹಾಕ್ತನೆ. ಆಗೊಂದು ಸತಿ ಮೈಸೂರು ಯೂನಿವರ್ಸಿಟಿ ಮೇಡಮ್ಮನಿಗೆ ಸಾರ್ವಜನಿಕವಾಗಿ ಅದೂ ಪಬ್ಲಿಕ್ಕಲ್ಲಿ ಬೋದಿದ್ದ ಗೊತ್ತೇ?"

"ಅಪ್ಪನಂಗೆ ಮಕ್ಕಳು ಅದರಲ್ಲೇನ್ಲ ಇಸೇಸ?" ಎಂದ ಸೀರ.

"ಅಂಗಾದ್ರಿದು ಗೂಂಡಾಗಿರಿ ರಾಜಕಾರಣ ಆಯ್ತಲ್ಲ ಚಿಗಪ್ಪ"

"ಯಾರೇ ಆಗ್ಲಿ ಅಂಥಾ ರಾಜಕಾರಣ ಮಾಡಿದೋರು ಅನುಭವುಸ್ತರೆ ಬುಡ್ಲೆ" ಎಂದು ಕಾಳಮಾವ ಅವನ ಮನಸ್ಸಿಗಾಗದ ವಿಷಯವನ್ನು ತಳ್ಳಿಹಾಕಿದ.

"ಈ ಎಡೂರಪ್ಪನಿಗೆ ಜಾಮೀನು ಸಿಕ್ತಂತಲ್ಲಾ, ತಿರುಗ ಮುಖ್ಯಮಂತ್ರಿ ಮಾಡ್ತರೇನ್ಲ?" ಎಂದ ಸೀರ.

"ಬೇಲು ಸಿಕ್ಯದೆ ಅಂದ್ರೆ ಅಂತಿಂಥ ಬೇಲಲ್ಲ ಚಿಗಪ್ಪ, ಲಕ್ಷಾಂತ್ಯಪಾಯಿ ಬಾಂಡ್ ಮ್ಯಾಲೆ ಸಯಿನು ಮಾಡಿಸಿಗಂಡು, ಊರುಬುಟ್ಟೋಗದಂಗೆ ಮುಚ್ಚಳಿಕೆ ಬರಿಸಿಗಂಡು, ಸರಿಯಾದ ಸಾಕ್ಷಿ ತಗಂಡು, ಬೇಲ್‌ಕೊಟ್ಟವುರೆ ಅಂದ್ರೆ ಅದಕ್ಕಿಂತ ಅವುಮಾನಬೇಕೆ?"

"ನಾನು ಕೇಳಿದ್ದು ಮುಖ್ಯಮಂತ್ರಿಯಾದನೆ ಅಂತ ಕಂಡ್ಯ."

"ಅದ್ಯಂಗಾಯ್ತನೆ ಚಿಗಪ್ಪ. ಅವುನಿನ್ನ ಮುಖ್ಯಮಂತ್ರಿಯಾಗೋದ್ಯಲ್ಲ ಮುಗಿತು. ಸದಾನಂದ ಗೌಡಾಗ್ಲೆ ಹೊಂದಿಕಂಡು ಬುಟ್ಟವುನೆ. ಮುಖ್ಯಮಂತ್ರಿಯಾಗುವಾಗ ಎಡೂರಪ್ಪನ ಜ್ವತೆ ಇದ್ದೋನು ಈಗಾಗ್ಲೆ ಈಶ್ವರಪ್ಪನ ಕಡಿಕೋಗ್ಯವುನೆ. ಅಂದ್ರೆ ಸದಾನಂದ ಪಾರ್ಟಿ ಹೇಳಿದಂಗೆ ನಗತನೆ ವರತೂ ಎಡೂರಪ್ಪನ್ನ ನೋಡಿ ನಗಾಡದಿಲ್ಲ."

"ಅಂಗರೆ ಎಡೂರನ ಕತೆ ಇಷ್ಟೆ ಅನ್ನು."

"ಎಸ್. ಚಾಪ್ಟರ್ ಕ್ಲೋಸಾಗ್ಯದೆ. ಆದ್ರು ಹಾರಾಟ ಜೋರಾಗಿರತದೆ. ಯಾಕಂದ್ರೆ ಜಾತಿವಾದಿಗಳು ಮಠಾಧೀಶರು ಮತ್ತು ದುಡ್ಡಿರಗಂಟ ಎಡೂರಪ್ಪ ಮಾಜಿ ಅನ್ನಕಳದ್ನೆ ಮ್ಯರಿತನೆ."

...ೂರಾರು ಮುಖಗಳ ಹಿಂದೆ

...ಸ್ತೆಯಲ್ಲಿ ನನ್ನ ವಾಹನದಲ್ಲಿ ಕೂತು ಹೊರಕ್ಕೆ ನೋಡಿದಾಗ ಇದ್ದಕ್ಕಿದ್ದಂತೆ ದಿಗಿಲಾಯಿತು; ನೂರಾರು ಜನ ಟ್ರಾಫಿಕ್ ಹತ್ತಿರ ತಮ್ಮ ತಮ್ಮ ಕಾರು, ಸ್ಕೂಟರ್, ಲಾರಿ, ಸೈಕಲ್ ಮುಂತಾದ್ದರಲ್ಲಿ ಹಸಿರು ಸೂಚನೆಗಾಗಿ ಕಾಯುತ್ತಿದ್ದರು. ಪ್ರತಿಯೊಬ್ಬ ಸೇರಬೇಕಾದ ಜಾಗ, ನಿರೀಕ್ಷೆ, ನೆನಪು, ಕಾತರ ಎಲ್ಲವೂ ನನಗೆ ಒಮ್ಮೆಗೇ ಅರ್ಥವಾಗುವುದಾದರೆ ...ಳ್ಳಲು ಸಾಧ್ಯವೇ ಎಂದು ನೋಡಿದೆ. ಹುಡುಗರು, ಮುದುಕರು, ಹೆಂಗಸರು, ನಿವೃತ್ತರು–ಎಲ್ಲರೂ ಇದ್ದರು. ಅವರನ್ನೆಲ್ಲ ...ಗರ ಒಂದು ಕನಿಷ್ಠ ಶಿಸ್ತಿಗೆ ಒಳಪಡಿಸಿದೆ. ಹಳದಿ ಬಣ್ಣದ ಸಿಗ್ನಲ್ ಎಚ್ಚರಿಕೆ ನೀಡಿ, ಕೆಂಪು ಬಣ್ಣ ಕಾಣಿಸಿಕೊಂಡು ...ಹಸಿರು ಮಾರ್ಗದರ್ಶನಕ್ಕಾಗಿ ಕಾಯುತ್ತಾ ನಿಂತಿದ್ದಾರೆ; ಅವರಲ್ಲಿ ಬುದ್ಧಿವಂತರು, ಮೂರ್ಖರು, ನಿಧಾನಸ್ಥರು, ...ಸದವರು, ದಕ್ಷರು–ಎಲ್ಲ ಬಗೆಯ ಜನರಿದ್ದಾರೆ; ಮೂರ್ಖನಿಗೆ ತಾನು ಮೂರ್ಖ ಎಂದು ಗೊತ್ತಿಲ್ಲದಿರಬಹುದು, ...ವಂತರಿಗೆ ತಮ್ಮ ಪ್ರತಿಭೆಯ ಅರಿವಿಲ್ಲದಿರಬಹುದು. ಒಬ್ಬ ಕೆಟ್ಟ ವ್ಯಕ್ತಿಗೆ ತನ್ನನ್ನು ಎಲ್ಲರೂ ದೂರವಿಡಲು ಯತ್ನಿಸುತ್ತಿದ್ದಾರೆ ...ದು ಗೊತ್ತಿಲ್ಲದಿರಬಹುದು; ಮನಸ್ಸು ಎಲ್ಲವನ್ನೂ ಕಲಸಿಹಾಕುತ್ತದೆ.

...ಬ್ಬ ವ್ಯಕ್ತಿಗೆ ತಾನು ಗೊರಕೆ ಹೊಡೆಯುವವನು ಎಂದು ಗೊತ್ತಾದಾಗ ಅಚ್ಚರಿ ಮತ್ತು ಭಯ ಆಗುತ್ತದೆ. ತನ್ನ ...ಟಿಯಲ್ಲಿಲ್ಲದ ಗೊರಕೆಯಂತೆಯೇ ಕನವರಿಕೆ, ಮಾತುಕತೆ ಇರಬಹುದು ಎಂದು ತಿಳಿದು ಕಸಿವಿಸಿಯಾಗುತ್ತದೆ. ...ಯೇ ತನ್ನ ವರ್ತನೆ. ಪ್ರತಿಯೊಬ್ಬ ಮನುಷ್ಯನೂ ತನ್ನ ವೈಯಕ್ತಿಕ, ಸಾರ್ವಜನಿಕ ವರ್ತನೆಗಳಲ್ಲಿ ಅಂಥ ...ವೇನೂ ಇಲ್ಲ, ತಾನೊಬ್ಬ ಸಹಜವಾದ ಮನುಷ್ಯ ಎಂದು ತಿಳಿದಿರುತ್ತಾನೆ. ಆದರೆ ಆತನನ್ನು ನೋಡುವವರಲ್ಲಿ ...ಲಕ್ಷಣ ಚಿತ್ರಗಳನ್ನು ಬಿಟ್ಟಿರುತ್ತಾನೆ. ಇದು ನಿಮ್ಮ ಬಗ್ಗೆ ಗೊತ್ತಾಗುವುದು ಹತ್ತಾರು ವರ್ಷದ ಹಿಂದೆ ನೀವು ...ದ್ದು ಮತ್ತು ಹೇಳಿದ್ದನ್ನು ಇವತ್ತು ಬೇರೆಯವರು ನೆನೆಸಿಕೊಂಡು ನಿಮಗೆ ಹೇಳಿದಾಗ. ನಾನು ಹಾಗೆಂದೆನೆ? ...ವರ್ತಿಸಿದೆನೆ? ಎಂದು ಚಕಿತರಾಗುತ್ತೀರಿ. ನಿಮಗೆ ನಿಮ್ಮ ಬಗ್ಗೆ ಹೇಳಿದವರ ಬಗ್ಗೆಯೇ ನೀವು ಹೇಳುವುದು ...ದಿಸ್ಸಿರುತ್ತದೆ. ಆದರೆ ಅವುಗಳಲ್ಲಿ ಯಾವುದೂ ನಿಮಗೆ ನೆನಪಿರುವುದಿಲ್ಲ, ಇದಕ್ಕೆ ಮುಖ್ಯ ಕಾರಣ–ನಿಮ್ಮ ...ಂದು ದೌರ್ಬಲ್ಯ, ಅದು ನಿಮ್ಮಲ್ಲಿ ನೀವು ಪೂರ್ತಿ ಮುಳುಗಿರುವುದು.

...ಸಮಾಜ ರೂಪಿಸಿದ ಕೆಲವು ಕಟ್ಟುಪಾಡು, ಶಿಕ್ಷಣ, ಆಕರ್ಷಣೆ ಮುಂತಾದವು ನಿಮ್ಮನ್ನು ತಿದ್ದುತ್ತಾ ಹೋಗುತ್ತದೆ. ...ನ್ನತಿಕೆಯನ್ನು, refinement, ಸಂಸ್ಕೃತಿ ಎಂದು ಕರೆಯುತ್ತೇವೆ. ಸಂಸ್ಕೃತಿ ಮುಖ್ಯವಾಗಿ ನಾವು ...ಕೊಂಡದ್ದು; ಒಂದು ಪ್ರಾಣಿಯನ್ನು ತರಬೇತಿ ಮೂಲಕ ಎಷ್ಟೇ ತಿದ್ದಿದರೂ ಅದನ್ನು ಸುಸಂಸ್ಕೃತ ...ಗುವುದಿಲ್ಲ.

ಇದನ್ನೆಲ್ಲ ನಾನು ಯಾಕೆ ಹೇಳುತ್ತಿದ್ದೇನೆಂದರೆ, ಮನುಷ್ಯನ ವರ್ತನೆಯಲ್ಲಿ ಕೆಲವು ತರಬೇತಿಯಿಂದ ಬದಲಾಗುತ್ತವೆ, ಇನ್ನು ಕೆಲವು ಬದಲಾಗುವುದೇ ಇಲ್ಲ. ಆತ ಓದುವ, ಬರೆಯುವ, ಪರೀಕ್ಷೆಗಳನ್ನು ಪಾಸ್ ಮಾಡುವ, ಬಡ್ತಿ ಪಡೆಯುವ, ಕೆಲಸ ಮಾಡುವ ರೀತಿ ಸ್ವಲ್ಪ ಮಾರ್ಪಾಡಾಗಬಹುದು. ಆದರೆ ಆತ ಇನ್ನೊಬ್ಬರನ್ನು ನೋಡುವ, ಪ್ರೀತಿಸುವ, ಕಾಳಜಿ ತೋರುವ ಶೈಲಿ ಪೂರ್ತಿ ಬದಲಾಗುವುದಿಲ್ಲ. ಒಂದು ಉದಾಹರಣೆ ತೆಗೆದುಕೊಳ್ಳಿ. ಮಹಾ ಕೊರಕನಾದ ಒಬ್ಬ ಭಾಷಣಕಾರ ತನ್ನ ಭಾಷಣದಿಂದ ಜನಕ್ಕೆ ಬೇಸರವಾಗುತ್ತದೆ ಎಂದು ಸಂಕ್ಷಿಪ್ತಗೊಳಿಸುವುದು ಅಥವಾ ಭಾಷಣಕ್ಕೆ ಒಪ್ಪದಿರುವುದು ಅಪರೂಪ; ಭಾಷಣಗಳ ಬಗ್ಗೆ ಅಸಹ್ಯಪಡುವುದೂ ವಿರಳ. ಆದರೆ ಆತ ತನಗಿಂತಲೂ ಭೀಕರ ಕೊರಕನಾದವನ ಭಾಷಣ ಕೇಳಿ ಬೆಚ್ಚಬಹುದು, ಭಾಷಣಗಳನ್ನು ಕೇಳುವುದನ್ನೇ ನಿಲ್ಲಿಸಿಬಿಟ್ಟು ತಾನೂ ಭಾಷಣ ಮಾಡುವುದಕ್ಕೆ ಒಪ್ಪದಿರಬಹುದು. ನಾನು ಬಲ್ಲ ಒಬ್ಬ ಎಂದೂ ವೇದಿಕೆಗೆ ಹೋಗಿ ಮಾತನ್ನೇ ಆಡಿರಲಿಲ್ಲ. ಆತ ಮಹಾ ಸಂಕೋಚದವನು ಎಂದು ತಿಳಿದಿದ್ದೆವು. ಭಾಷಣಕಾರರಲ್ಲಿ ಇಲ್ಲದಿರುವ ಒಳ್ಳೆಯತನ, ಮಾನವೀಯತೆ ಇದೆಯೆಂದುಕೊಂಡಿದ್ದೆವು. ಆತ ಮುಪ್ಪಿನಲ್ಲಿ ಮಹಾ ಕೊರಕನಾಗಿಬಿಟ್ಟ! ಭಾಷಣ ಮಾಡದಿದ್ದರೆ ಅವನಿಗೆ ಊಟವೇ ಸೇರುತ್ತಿರಲಿಲ್ಲ!


ಇಂಥದನ್ನೆಲ್ಲ ನೀವು ಕಲ್ಪಿಸಿಕೊಳ್ಳಬಲ್ಲಿರಿ. ಆದರೆ ವ್ಯಕ್ತಿತ್ವದ ಬಗ್ಗೆ ಕೆಲವು ಸೂಕ್ಷ್ಮಗಳನ್ನು ಗ್ರಹಿಸುವುದು ಕಷ್ಟ. ನನ್ನ ಸರದಿ ಮುಗಿಯಿತು, ಬೇರೆಯವರು ತಮ್ಮ ಅವಕಾಶಕ್ಕಾಗಿ ಕಾಯುತ್ತಿದ್ದಾರೆ, ತಾನು ತೆರವು ಮಾಡದಿದ್ದರೆ ಇಡೀ 'ಏರ್ಪಾಡು' ಅಸ್ತವ್ಯಸ್ತವಾಗುತ್ತದೆ–ಎಂದು ತಿಳಿದುಕೊಳ್ಳುವುದು ಕಷ್ಟ; ಇದು ಸಮಯಪ್ರಜ್ಞೆಯಷ್ಟೇ ಅಮೂರ್ತವೂ ಕೋಮಲವೂ ಆದದ್ದು, ಮಾತಿನ ಅರ್ಥವನ್ನು ಮೀರಿದ ನಾದದಂತೆ, ಅವೆರಡನ್ನೂ ಮೀರಿದ ರೂಢಿಜನ್ಯ ಚೆಂದದಂತೆ. ಇಸ್ಪೀಟ್‌ನಲ್ಲಿ ಒಬ್ಬರು ತಮ್ಮ ಸರದಿ ಬಂದಾಗ ಯೋಚಿಸುತ್ತಾ ಕೂತುಬಿಡುತ್ತಾರೆ; ಆತನಿಗೆ ತಾನು ಎಲ್ಲರನ್ನೂ ಕಾಯಿಸುವುದು ತಿಳಿದಿರುವುದಿಲ್ಲ. ಒಬ್ಬ ಪಂಡಿತರು 'ಸೇವೆ' ಎಂಬ ಮಾತನ್ನು ಬಳಸುವಾಗ ಅದಕ್ಕಿರುವ ಭಕ್ತಿ ಆರೈಕೆ, ಗೌರವ ಎಂಬುದನ್ನೇ ನೆನೆಯುತ್ತಾ 'ಸೇವಿಸು' ಎಂದು ಬರೆಯುತ್ತಾರೆ; ಅದಕ್ಕೆ ಬೇರೆ ಅರ್ಥ ಬಂದದ್ದು ಅವರಿಗೆ ಹೊಳೆಯುವುದೇ ಇಲ್ಲ. 'ಬಡವನಾದ ನಾನು ನಿನ್ನ ಸೇವೆಯಲ್ಲಿದ್ದು ಹೊಟ್ಟೆಗಿಲ್ಲದೆ ಸಾಯಲಾಗುವುದಿಲ್ಲ' 'ನಿನ್ನನ್ನು ಸೇವಿಸುವುದು ಹೇಗೆ?' 'ನಿನ್ನ ಸೇವಾವಧಿ ಮುಗಿಯಿತು' 'ಕೊಟ್ಟಿದ್ದನ್ನು ಸೇವಿಸಿ ನೀರು ಕುಡಿ'– ಇವೆಲ್ಲವುಗಳಲ್ಲಿ ಬೇರೆಬೇರೆ ಅರ್ಥ ಇರುವುದು ಆತನಿಗೆ ಬೇಗ ತಿಳಿಯುವುದಿಲ್ಲ. ಹಾಗೆಯೇ ಆತ 'ಕನಸುಕಾಣು', 'ಕನಸಿದನು', 'ಕನಸಾಯಿತು' ಎಂಬವುಗಳಲ್ಲಿನ ಸೂಕ್ಷ್ಮ ವ್ಯತ್ಯಾಸ ಗುರುತಿಸುವುದಿಲ್ಲ. 'ಪ್ರತಿಕ್ರಿಯೆ' ಎಂಬುದನ್ನು ಕ್ರಿಯಾಪದವಾಗಿಸಿ 'ಪ್ರತಿಕ್ರಿಯಿಸಿದ' ಎಂದು ಹೇಳಿದಾಗ ಅದರ ಅರ್ಥ ಗೊತ್ತಾದರೂ ಕೇಳುವವನಿಗೆ ಎಷ್ಟು ಅಸಹ್ಯವಾಗುತ್ತದೆ ಎಂಬುದು ಅವನಿಗೆ ತಿಳಿಯುವುದಿಲ್ಲ.



ಮನುಷ್ಯನ ದುರಂತವೇ ನೆನಪು, ಕನಸು, ಭ್ರಮೆ, ಆತ್ಮವಂಚನೆ..... ಅದಕ್ಕೆ ತಕ್ಕಂತೆ ಭಾಷೆ ಕುಣಿಯುತ್ತದೆ. ಅದು ಬರೀ ಭಾಷೆಯಲ್ಲೋ ಅಗ್ಗ್ಯಾ....

–ಜನವರಿ 10, 1996

ಗೌಡರ ಗ್ರಹಗತೀನೆ ನೆಟ್ಟಗಿಲ್ಲ



ಎಚ್.ಎಲ್. ಕೇಶವಮೂರ್ತಿ


ಅಣಕ

ಇತ್ತೀಚೆಗೆ ಹರದನಹಳ್ಳಿ ದೇವೇಗೌಡರ ಗ್ರಹಗತಿಗಳು ನೆಟ್ಟಗಿರುವಂತಿಲ್ಲ. ಹಿಂದೆಲ್ಲ 'ಗೌಡರು' ಎಂದು ಪತ್ರಿಕೆಗಳಲ್ಲಿ ಬಂದರೆ ಸಾಕಾಗಿತ್ತು. ಕುರ್ತೇಟು ಹರದನಹಳ್ಳಿ ದೇವೇಗೌಡರೇ ಎಂದು ತಿಳಿಯುತ್ತಿತ್ತು. ಹಾಳಾದ ಇನ್ನೊಬ್ಬ 'ಗೌಡ' ಹೆಸರಿನೋನು ಮುಖ್ಯಮಂತ್ರಿ ಆದ ನೋಡಿ. 'ಗೌಡ' ಅಂದರೆ ಸದಾನಂದ ಗೌಡ ಅಂದ್ಕೊಳ್ಳುತ್ತಾರೆ ಓದುಗರು! ಅದಕ್ಕೆ ವಿಶೇಷಣ ಸೇರಿಸಿ 'ಗೌಡರ' ಹೆಸರನ್ನು ಹೇಳಬೇಕಾದ ದುರಂತ ಬಂದಿದೆ.

ಇದು ಒಂದು ಆಯಿತಾ. ಕಾಲಿಗೆ ಎಟಗದೋವು, ಕೈಗೆ ಎಟಕುದೋವು ಎಲ್ಲ ಗೌಡರ ಮಕ್ಕಳ ಮೇಲೆ ಕೇಸ ಜಾಡಿಸುತ್ತಾ ಕುಂತವೆ. ಹಿರಿಮಗ ಅಂದರೆ ಸಾಮಾನ್ಯವಾ. ಅಪ್ಪ ಸತ್ತ ಮೇಲೆ ತಲೆ ಬೋಳಿಸಿಕೊಂಡು, ಅವನನ್ನು ಸ್ವರ್ಗಕ್ಕೆ ಕಳುಹಿಸುವ ಹಕ್ಕು ಪಡೆದಿರುವವನು. ಅಂದಮೇಲೆ ತಂದೆ ಆದವನಿಗೆ ಅವನ ಮೇಲೆ ಪ್ರೀತಿ ಒಂದು ಇಂಕರ ಹೆಚ್ಚಿಗೇನೆ ಇರುತ್ತೆ. ದೇವೇಗೌಡರ ಪ್ರೀತಿಗೆ ಪಾತ್ರನಾದ ಅಂತಹ ಮಗನ ಮೇಲೇ ಯಾವೋ ಭ್ರಷ್ಟಾಚಾರದ ಆರೋಪ ಹೊರೆಸಿವೆ. ನ್ಯಾಯಾಲಯ ಅನ್ನೋದು ದೂರು ನೀಡಿರೋನು ಯಾರು? ಯಾರ ಮೇಲೆ ನೀಡಿದ್ದಾನೆ? ಎಂಬುದನ್ನು ಕೂಲಂಕಷವಾಗಿ ವಿಚಾರಿಸಬೇಕು. ಅವರವರ ಏಜನ್ನು ನೋಡಿ ತನಿಖೆಗೆ ಆದೇಶಿಸಬೇಕಾದ್ದು ನ್ಯಾಯ. ಇಲ್ಲಿ ಹಂಗಾಗಿಲ್ಲ. ಲೋಕಾಯುಕ್ತ ಪೊಲೀಸರಿಗೆ ತನಿಖೆ ಮಾಡಿ ಅಂದುಬುಟ್ಟದೆ! ಅಲ್ಲ ಮಾಡಿಕೊಳ್ಳಲಿ. ಗೌಡರೇನು ಅಡ್ಡಕಸುಬಿ ಅಲ್ಲ. ರಾಜಕೀಯದಲ್ಲೇ ಜೀವನಾವ ಸವೆಸಿರೋರು. ಯಡ್ಯೂರಪ್ಪನೋ ರಂಗೆ ಎಡ್ಡ ಅಲ್ಲ. ಅವರಾದ್ರೆ ಲಂಚ ತಗತೀನಿ, ಅದಕ್ಕೆ ಯಾಕೆ ಅಂಜಿಕೋಬೇಕು, ಯಾವನಿಗಾದರೂ ಯಾಕೆ ಹೆದರಿಕೋಬೇಕು ಅಂತಾನೋ ಏನೋ 'ಚೆಕ್' ಮೂಲಕವೇ ಲಂಚ ಪಡೆದಿದ್ದಾರಂತೆ. ಗೌಡರು ಹಾಗಲ್ಲ. ತಗಂಡದ್ದಕ್ಕೆ ಬುಟ್ಟದ್ದಕ್ಕೆ ದಾಖಲೆ ಸಿಗಬಾರದು ಹಂಗೆ ನೋಡಿಕೊಂಡಿದ್ದಾರಂತೆ. ಅಂತಹದ್ದರಲ್ಲಿ ಅವರಿಗೇನು ಫಿಕೀರಿಲ್ಲ ಅನ್ನಿ.

ಇಂತಹ ಗೌಡರ ಮಗನ ಮನೆಗೇ ಅದ್ಯಾವುದೋ ಎಡಿಜಿಪಿ ಆಗಿದ್ದೋನು ದಾಳಿ ಮಾಡ್ಸವ್ನಂತೆ. ಗೌಡರಿಗೂ ರೇಗೋಗದೆ. ನಾನು ಅಂದರೆ ಏನು? ನನ್ನ ಘನತೆ ಎಂತಹದ್ದು? ನನ್ನ ಮಗನ ಮನೆ ಮೇಲೇನೆ ಹಿಂಗೆಲ್ಲ ಮಾಡುಸವ್ನಲ್ಲ-ಅಂತ ಫೋನ ಎತ್ಕಂಡವ್ರೆ. 'ಹಿಂಗೆಲ್ಲ ಮಾಡಬಾರದು ಕಣ್ರಿ. ಯಡ್ಯೂರಪ್ಪನ ಮನೇಲಿ ಮಾಡಿದಂಗೆ ನಮ್ಮ ಮನೇಲೂ ಮಾಡಿ. ನೂರಾರು ಕೋಟಿ ಲೂಟಿ ಹೊಡೆದಿರೋನ ಮನೆಯ ಎರಡು ಗಂಟೆ ಒಳಗೇ ತನಿಖೆ ಮಾಡಿ ಮುಗಿಸ್ತೀರಿ. ಜುಜುಬಿ ಐವತ್ತೊ ಅರವತ್ತೊ ಕೋಟಿ ಆರೋಪ ಬಂದಿರೋನ ಮನೆಯ ಏಳೆಂಟು ಗಂಟೆ ತಡಕಾಡಿದೀರಿ. ಇದು ನ್ಯಾಯ ಅಲ್ಲ ಅಂತ ಬುದ್ಧಿ ಮಾತು ಹೇಳವ್ರೆ ಎಷ್ಟೇ ಆಗಲಿ ಹಿರೀಕರು. ಎಷ್ಟು ಕೋಟಿ ಆರೋಪಕ್ಕೆ ಎಷ್ಟು ಗಂಟೆ ತನಿಖೆ ನಡೆಸಬೇಕು ಅನ್ನುವ ಸೂಚನೆಯನ್ನೂ ಕೊಟ್ಟಿರಬಹುದು!

ಇಷ್ಟು ಆಯಿತಲ್ಲ, ಏನೋ ತಪ್ಪು ನಡೆದುಹೋಗದೆ. ಕ್ಷಮಿಸಬಡಿ ಅನ್ನಬಹುದಾಗಿತ್ತು, ಇಲ್ಲ ತೆಪ್ಪಗಿದ್ದರೂ ಆಗುತ್ತಿತ್ತು. ಆ ಎಡಿಜಿಪಿ ಅನ್ನೋನು.... ಅವನೇನು ಮಾಡವ್ನೆ? 'ನನ್ನ ಗುಲಾಮ ಅಂದರು, ನಿನಗೇನು ಮಾಡ್ತೀನಿ ನೋಡ್ತಿರು ಅಂತೆಲ್ಲ ಬೆದರಿಸಿದರು ಅಂತಾವ ಉಪಲೋಕಾಯುಕ್ತರಿಗೆ ದೂರು ಕೊಟ್ಟವ್ನೆ. ಇವರಿಬ್ಬರ ನಡುವೆ ನಡೆದಿರೋ ವಿಷಯ ಅದೆಂಗೋ ಪೇಪರಿನೋರ ತನಕ ಬಂದೋಗದೆ. ಯಾವ ಪತ್ರಿಕೆ ತೆಗೆದರೂ 'ಗುಲಾಮ' 'ಬೆದರಿಕೆ' ಸುದ್ದೀನೆ! ಇದ್ಕೆ ಗ್ರಹಚಾರ ಅನ್ನೋದು.



ಏನೋ ಮಾಡುವುದಕ್ಕೆ ಹೋಗಿ, ಏನೋ ಆಗಿ ಹೋಯ್ತಲ್ಲಾ ಅಂತ ಗೌಡರು ಹರಿಬರೀಲಿ ಮಾಧ್ಯಮಗೋಷ್ಠಿ ಕರೆದು ಹಿಂಗಿಂಗಲ್ಲ ಹಿಂಗಿಂಗೆ ನಡೆದದ್ದು ಅಂತ ಸ್ಪಷ್ಟೀಕರಣ ನೀಡಬೇಕಾಯ್ತು!

ಗೌಡರಿಗೆ ದಾಖಲೆಗಳ ಶಕ್ತಿ ಪರಿಚಯ ಇದೆ. ಅದ್ಕೆ ಏನು ಹೇಳಿದ್ರು ಅದನ್ನ ಪುರಾವೆ ಜೊತೇನೆ ಹೇಳ್ತಾರೆ. ಇಲ್ಲೇನಾಗದೆ ಅಂದ್ರೆ ಇವರ ಮುದ್ದಿನ ಮೊಮ್ಮಗ ಅದು ಯಾವುದೋ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಅರ್ಚನೆ ಮಾಡಿಸಿತ್ತಂತೆ. ಅದ್ಕೆ ಐವತ್ತು ರೂಪಾಯಿನೂ ಕೊಟ್ಟಿತ್ತಂತೆ. ಅದರ ರಸೀದಿ ಅದರ ಅಂಗಿ ಜೇಬಲ್ಲಿ ಸಿಕ್ಕಿರಬೇಕು. ಅಷ್ಟಕ್ಕೆ ತನಿಖಾಧಿಕಾರಿ ಅದ್ಕೂ ದೇವಸ್ಥಾನಕ್ಕೂ ಇರುವ ಸಂಬಂಧ ಕೇಳಿ ಪತ್ರ ಬರೆದಿದ್ದನಂತೆ! ಆ ಪತ್ರಾನೂ ಎಲ್ಲರಿಗೂ ತೋರಿಸವ್ರೆ. ಇದು ತನಿಖೆ ಮಾಡುವ ವಿಧಾನ ಅಲ್ಲ ಅನ್ನೋ ಬೇಸರ ಗೌಡರಿಗೆ. ಇದಕ್ಕಿಂತಲೂ ನೋವಿನ ಸಂಗತಿ ಇನ್ನೂ ಒಂದು ಅದೆ. ಹಿಂಗೆಲ್ಲ ನನ್ನ ಮೊಮ್ಮಗನ ವಿಚಾರವ ಕೇಳವ್ರಲ್ಲ ಯಡ್ಯೂರಪ್ಪನವರನ್ನೂ ಕೇಳಲಿ. ಅವರು ಶೋಭಾ ಕರಂದ್ಲಾಜೆ ಜೊತೆ ಯಾವಯಾವ ದೇವಸ್ಥಾನ ಸುತ್ತವ್ರೆ, ಏನೇನು ಮಾಡವ್ರೆ, ಎಷ್ಟೆಷ್ಟು ಕೊಟ್ಟವ್ರೆ ಅಂತೆಲ್ಲ ಕೇಳಲಿ ಅನ್ನೋದು ಗೌಡರ ಅಹವಾಲು. ಯಡ್ಡಿ ಜೊತೆಗೆ ಸೋಮಣ್ಣ ಪಾಮಣ್ಣ ನಿರಾಣಿ ಪರಾಣಿ, ರೇಣುಕಾಚಾರ್ಯ ವಾಣಿಕಾಚಾರ್ಯ ಇಂತಹವರನ್ನ ಹೆಸರಿಸಬಹುದಿತ್ತು. ಆದರೆ ಗೌಡರು ಯಾಕೆ ಶೋಭಕ್ಕನ ಹೆಸರ ಎಳೆದು ತಂದವ್ರೆ ಅನ್ನೋದು ತಿಳೀದಿಲ್ಲ. ಅದ್ಕೂ ಯಾವುದೋ ಮಹತ್ತರವಾದ ಕಾರಣವೇ ಇರಬಹುದು!

ಇಷ್ಟೆಲ್ಲ ಆಯಿತಲ್ಲ, ನಮ್ಮ ಇನ್ನೊಬ್ಬ ಗೌಡರು ಅಂದ್ರೆ ಸದಾನಂದ ಗೌಡರು ಎಡಿಜಿಪಿ ಸಾಹೇಬರನ್ನ ಲೋಕಾಯುಕ್ತದಿಂದ ತೆಗೆದು ವರ್ಗಾಯಿಸಿದರು. ಜನ ಎಲ್ಲ 'ಭ್ರಷ್ಟಾಚಾರಿಗಳನ್ನ ರಕ್ಷಿಸಲು ಹೀಗೆ ಮಾಡಲಾಗಿದೆ' ಎಂದು ಬೊಂಬ್ಡ ಬಜಾಯಿಸುತ್ತಿದ್ದಾರೆ. ಹಂಗಲ್ರಪ್ಪ ಅಂತ ಸಾಕ್ಷಾತ್ ಮುಖ್ಯಮಂತ್ರಿ ಹೇಳಿದರೂ ನಂಬ್ತಾ ಇರ್ಲಿಲ್ಲ. ಅದ್ಕೇ 'ಮಾಜಿ ಪ್ರಧಾನಿ ಫೋನ್ ಮಾಡಿದ ನಂತರವೂ ಅವರ ಮಗನ ಮೇಲಿನ ಆರೋಪ ಕುರಿತಂತೆ ತನಿಖಿಸಲು ಮುಜುಗರ ಆಗುತ್ತದೆ' ಅಂದವ್ರೆ ಅಂದುಬುಟ್ರು! ಅಲ್ಲಿಗೇನಾಯ್ತು ಎಡಿಜಿಪಿ ವರ್ಗಾವಣೆಗೆ ದೇವೇಗೌಡರೇ ಕಾರಣ ಅಂದಂಗಾಯ್ತು! ಅದೇನೋ ಸಾಬರು ಹೇಳ್ತಾರಲ್ಲ.... 'ಗಾಚಾರ ಗಾಂಡ್ ಮಾರ್‍ತಾತೊ ಖುದಾ ಕ್ಯಾ ಕರ್‍ತಾಹೈ' ಹಂಗಾಗದೆ.....

ಇಪ್ಪತ್ತೆರಡು ರಾತ್ರಿ ಇಪ್ಪತ್ತಮೂರು ಹಗಲು

'ಒಂದು ಸಿಹಿ ಸುದ್ದಿ' ಅಂದರು ರಾಯರು ಬೆಳಗಿನ ವಾಕಿಂಗಿನಲ್ಲಿ. ಪತ್ರಿಕೆಗಳ ತುಂಬ ಜೈಲು, ಬೇಲು ಅನ್ನೋ ಸುದ್ದೀನೆ ತುಂಬಿರುವಾಗ ಇದೆಲ್ಲಿಂದ ಬಂತು ಅನ್ನುವ ಕುತೂಹಲದಿಂದ 'ಏನದು ರಾಯರೆ' ಅಂದೆ. 'ಯಡ್ಡಿ ಡೈರಿ ಬರ್‍ತವ್ರಂತೆ' ಅಂದರು ಅವರು. 'ಅದಕ್ಕೆಲ್ಲಿತ್ತು ರಾಯರೆ ಟೈಮು ಅವ್ರುಗೆ' ಅಂದೆ. ಮೂರು ಹೊತ್ತೂ ರಾಜಕೀಯಾನೆ ಹಾಸಿಹೊದಿಯೋ ಜಾಯಮಾನದವರಲ್ಲವಾ ಅದ್ಕೇ ಈ ಅನುಮಾನ ಬಂದಿತ್ತು. 'ಜೈಲಿನಲ್ಲಿದ್ರಲ್ರೀ ಆವಾಗ ಬರ್‍ತವ್ರಂತೆ' ಅಂದರು ರಾಯರು!

ಜೈಲು ಅತ್ತೆಮನೆ ಆದವರಿಗೆ ಅಲ್ಲಿದ್ದರೂ ಪುರಸೊತ್ತು ಇರಲ್ಲ. ಸಹ ಜೈಲುವಾಸಿಗಳ ಸಂಗಡ ಸಾಹಸ ಕ್ರಿಯೆಗಳನ್ನ ಹೇಳುವುದಕ್ಕೆ ಕೇಳುವುದಕ್ಕೆ ಸಮಯವೇ ಸಾಕಾಗುವುದಿಲ್ಲ. ಅಪರೂಪಕ್ಕೆ ಹೋದವರಿಗೆ ಆಗುವ ಅನುಭವವೇ ಬೇರೆ ರೀತಿಯದ್ದು. ಮೊದಲ ಒಂದೆರೆಡು ದಿವಸ ಖಿನ್ನತೆ ಆವರಿಸುತ್ತೆ. ನಂತರ ಅಲ್ಲಿಯ ಜೀವನಕ್ಕೆ ಒಗ್ಗಿಕೊಳ್ಳುತ್ತಾರೆ. ಇಂದಿರಾ ಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದಾಗ ಸ್ನೇಹಲತಾ ರೆಡ್ಡಿ 'ಜೈಲಿನ ದಿನಚರಿ' ಬರೆದರು. ಚಂಪಾ '26 ದಿ[...] ರಾತ್ರಿ' ಬರೆದರು. ಲಿಂಗತಾರತಮ್ಯದ ವಿರುದ್ಧ ಸಿಡಿದೇ[...] ಸ್ನೇಹ ಜೈಲಿನಲ್ಲೂ ಇಂತಹದ್ದೇ ಪರಿಸ್ಥಿತಿ ಇರುವುದನ್ನು ಪ್ರತಿಭಟಿಸಿದ್ದಲ್ಲದೆ ಅದಕ್ಕೆ ಅಕ್ಷರ ರೂಪ ಕೊಟ್ಟರು. ಎಂದಿನ ವ್ಯಂಗ್ಯದ ಮಾತುಗಳಿಂದ ಜೈಲು ಹೊರಗಿನ ಒಳಗಿನ ಹಲವರ ಇಬ್ಬಂದಿತನ, ಧೀಮಂತಿ[...] ಚಿತ್ರಬಿಡಿಸಿದರು ಚಂಪಾ.

ಈಗ ಬಿಎಸ್‌ವೈ ಸರದಿ. ಶ್ರೀಯುತರು ಇಪ್ಪತ್ತ[...] ದಿವಸ ಸೆರೆಮನೆ ವಾಸದಲ್ಲಿದ್ದರಂತೆ. ಆ ಅವಧಿಯಲ್ಲಿ[...] ಬೆಳವಣಿಗೆಗಳ ಬಗ್ಗೆ ದಿನಚರಿ ಬರೆದಿದ್ದಾರಂತೆ.

ಆ ದಿನಚರಿಯಲ್ಲಿ ಏನಿರಬಹುದು ಎನ್ನುವ[...] ತಿಳಿಯುವ ಕುತೂಹಲ ಸಹಜ. ಸ್ನೇಹಲತಾ ರೆಡ್ಡಿ ಆಸ್ತ[...] ನರಳುತ್ತಿದ್ದರು. ಜೈಲಿನ ಅಧಿಕಾರಿಗಳು ಸೂಕ್ತ [...] ಅವಕಾಶ ಕೊಡಲಿಲ್ಲ, ಅವರ ಬೇಡಿಕೆ[...] ತಿರಸ್ಕರಿಸಲಾಯಿತು. ರಾಜಕೀಯ ಕೈದಿಗೆ ಸಿಗಬೇಕಾದ [...] ಸೌಲಭ್ಯವೂ ದೊರಕಲಿಲ್ಲ. ರೋಗ ಉಲ್ಬಣಿಸಿ ಸಾಯು[...] ಮಾಡಿದರು ಜೈಲು ಸುಧಾರಕರು! ಯಡ್ಯೂರಪ್ಪನವ[...] ಯಾವುಯಾವುದೋ ರೋಗಬಂದಿತ್ತಂತೆ. ಅವರನ್ನು [...] ಸೇರಿದ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರಂತೆ. ಇದು[...] ಸಾಧ್ಯ ಆಯಿತು? ಆಸ್ಪತ್ರೆ ಯಾತ್ರೆ ಅಲ್ಲಿಂದ ಜೈಲು[...] ನಿಜವಾದ ಕಾರಣವೇನು? ಜೈಲಿಗೆ ಬಂದನಂತರ [...] ನಡೆಯಿತು? ಜೈಲಿನ ನಿಯಮಗಳನ್ನೆಲ್ಲ ಹೇಗೆ ಮುರಿ[...] ಸಾಧ್ಯ ಆಯಿತು? ಶೋಭಾ ಕರಂದ್ಲಾಜೆ ತಮ್ಮ ಸೆಲ್ಲಿಗೆ ವ[...] ಬಾರಿ ಬಂದದ್ದಾದರೂ ಏಕೆ? ತಮ್ಮಿಬ್ಬರ ನಡುವೆ[...] ನಡೆಯಿತು? ಈಶ್ವರಪ್ಪನವರೂ ತಾವೂ ಸೆಲ್ಲಿನಲ್ಲಿ[...] ಮಿಲಾಯಿಸುವ ಹಂತ ತಲುಪಿದ್ದು ಯಾಕಾಗಿ? ಇದೆ[...] ಮಿಗಿಲಾಗಿ ತಮ್ಮ ದೇಹವನ್ನು ಆಕ್ರಮಿಸಿಕೊಂಡಿದ್ದ[...] ಕಾಯಿಲೆಗಳ ಕೀಟಾಣುಗಳನ್ನೂ ಹೊಡೆದೋ[...] ಮಹಾಶಯರು ಯಾರು? ತಾವು ನಿರೀಕ್ಷಣಾ ಜಾ[...] ಮೇಲೆ ಬರುವಿರೆಂದು ತಿಳಿದ ತಕ್ಷಣ ಪಟಾಕಿ [...] ಸಂಭ್ರಮಿಸುವಂತೆ, ತಮ್ಮ ದರ್ಶನದಿಂದ ಪುನೀತರ[...] ಗುಂಪು ನೆರೆಯುವಂತೆ ಏರ್ಪಡಿಸಲು ಯಾವ [...] ಬಳಸಿದಿರಿ? ಇವುಗಳನ್ನೆಲ್ಲ ಬಹಿರಂಗಪಡಿಸುವಿರಾ? ಏ[...] ಡೈರಿ ಅಥವಾ ದಿನಚರಿ ಅಂದರೆ ನಮ್ಮ ಪಂಚೇಂದ್ರಿಯ[...] ಅನುಭವ ಆಗುವ, ಅಂತರಾತ್ಮಕ್ಕೆ ಸರಿ ಎನಿಸಿದ್ದನ್ನು ದ[...] ಸುವ ಪುಸ್ತಕ ಎಂದೇ ಜನರು ಭಾವಿಸಿದ್ದಾರೆ. ಹಾ[...] ನಿಮ್ಮಿಂದ '22 ರಾತ್ರಿ 23 ಹಗಲು' ಕೃತಿ ಹೊರಬ[...] ಮುಂದಿನ ಪೀಳಿಗೆಗೆ ಮಹದುಪಕಾರ ಮಾಡಿ[...]ಗುತ್ತದೆ!

ಭಂಡ ಧೈರ್ಯದ ದಂಡನಾಯಕ!!

ಮೂರೂ ಬಿಟ್ಟವರು ಊರಿಗೆ ದೊಡ್ಡವರು ಎನ್ನುವ ಹಾಗೆ ಆಡುತ್ತಿರುವ ನಾಯಕರು ಕಳೆದ ಮೂರು ವರ್ಷಗಳಲ್ಲಿ ನೂರು ವರ್ಷದಷ್ಟು ಗಳಿಕೆ ಮಾಡಿಕೊಂಡು ಸುಖವಾಗಿ ಇರುವ ಕನಸು ಕಾಣುತ್ತಿರಬೇಕಾದರೆ ನ್ಯಾಯಾಂಗ ತನ್ನ ಹಿಡಿತ ಬಿಗಿಗೊಳಿಸಿ ಅವರಿಗೆಲ್ಲ ಬೆವರಿಳಿಸುತ್ತಿದೆಯಲ್ಲಾ!! ಬರುವ ದಿನಗಳಲ್ಲಿ ಇನ್ನೂ ಎಷ್ಟು ಜನ ಸಚಿವರು ಸಾಲಾಗಿ ಸೆರೆಮನೆವಾಸ ಕಾಣಬೇಕಾಗುತ್ತೋ ಏನೋ? ಎಲ್ಲಾ ಭ್ರಷ್ಟರ ಭಂಡ ದಂಡನಾಯಕನಂತಿರುವ ಯಡಿಯೂರಪ್ಪ 24 ದಿವಸಗಳನ್ನು ಜೈಲಿನಲ್ಲಿ ಕಳೆದರೂ ಆತ್ಮಾವಲೋಕನ ಮಾಡಿಕೊಂಡಿರುವಂತಿಲ್ಲ. ಈಗ ಯಡ್ಡಿ ಜಾಮೀನು ಪಡೆದು ಹೊರಬಂದು ತಾನು ರಾಜ್ಯ ಸುತ್ತಿ ಪಕ್ಷ ಕಟ್ಟುವುದಕ್ಕೋ, ಪಕ್ಷ ಕಟ್ಟಿ ರಾಜ್ಯ ಸುತ್ತುವುದಕ್ಕೋ ತಯಾರಿ ಮಾಡಿಕೊಂಡಿರುವಂತಿದೆ.

ಈ ಮಧ್ಯೆ ಆ ಶ್ರೀರಾಮುಲು ಬಿಜೆಪಿಯಿಂದ ಬೇರೆಯಾಗಿ ಕಮಲಕ್ಕೆ ಕಿರಿಕ್ ಕೊಡುತ್ತಿರುವುದನ್ನು ನೋಡಿದರೆ ಬಿಜೆಪಿಯ ವರಿಷ್ಠರು ಮುಂದೆ ಏನು ಮಾಡುತ್ತಾರೆ ಎಂಬ ಕುತೂಹಲ ಕಾಡುತ್ತಿದೆ. ಅವರು ಇದಕ್ಕೆಲ್ಲ ಕುರುಡರಾಗಿ ಜನ ಚೇತನಾ ಎಂಬ ರಾಜಕೀಯ ಯಾತ್ರೆಯನ್ನು ಮುಂದುವರೆಸುತ್ತಾರೆಯೋ ಅಥವಾ ಅವರು ಕೂಡ ಸಧ್ಯದಲ್ಲೇ ಮುಜುಗರ ಪಟ್ಟು ಬೆಡ್ ಶೀಟಿನ ಮೊರೆ ಹೋಗ್ತಾರೆಯೋ? ಕಾದು ನೋಡೋಣ!!

- ಡಾ.ಅಮೀರುದ್ದೀನ್ ಖಾಜಿ, ಬಿಜಾಪುರ


ಕುದ್ರೋಳಿ ಗೋಕರ್ಣನಾಥೇಶ್ವರ ದೇವಾಲಯದಲ್ಲಿ ಜನಾರ್ದನ ಪೂಜಾರಿಯವರು 'ವಿಧವೆ'ಯರಿಗೆ ಅರಿಶಿನ-ಕುಂಕುಮ- ಹೂ-ಸೀರೆ ಕೊಟ್ಟು ಗೌರವಿಸುವ, ಸಾಮಾಜಿಕ ಶಾಪದಿಂದ ಮುಕ್ತವಾಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಶ್ಲಾಘನೀಯ ವಿಚಾರವೇ ಸರಿ.

ಗಂಡನನ್ನು ಕಳೆದುಕೊಂಡಿರುವ ಮಹಿಳೆಯರಿಗೆ ಮುತ್ತೈದೆಯ ವಸ್ತುಗಳನ್ನು ಮರಳಿ ಕೊಟ್ಟರೆ ಅವರಲ್ಲಿ ಒಂದು ರೀತಿಯ ಮಾನಸಿಕ ಸ್ಥೈರ್ಯವನ್ನು ಮೂಡಿಸಬಹುದು. ಆದರೆ ಅವರು ಅನುಭವಿಸುವ ನೈಜ ಸಮಸ್ಯೆಗಳನ್ನು ಪರಿಹರಿಸಿದಂತಾಗುವುದಿಲ್ಲ. ಆದ್ದರಿಂದ ಇದಕ್ಕಿಂತ ಸ್ವಲ್ಪ ಮುಂದೆ ಹೋಗಿ ವಿಧವಾ ವಿವಾಹವನ್ನು ಪ್ರೋತ್ಸಾಹಿಸಬೇಕು. ಪತಿಯನ್ನು ಕಳೆದುಕೊಂಡು ಅಬಲೆ ಆಗಿರುವ ಮಹಿಳೆಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕೊಟ್ಟು ಆಕೆ ಸಮಾಜದಲ್ಲಿ ತಲೆ ಎತ್ತಿ ನಡೆಯುವಂತೆ ಮಾಡಬೇಕು. ಸಂಪ್ರದಾಯದ ಹೆಸರಲ್ಲಿ ಹೆಣ್ಣಿನ ಮೇಲೆ ದೌರ್ಜನ್ಯ ನಡೆಸುವುದನ್ನು ತಡೆಯಬೇಕು.

ಆದರೆ ಗರ್ಭಿಣಿ ಮಡದಿಯನ್ನು ಕಾಡಿಗೆ ಕಳುಹಿಸಿದ ಶ್ರೀ ರಾಮನನ್ನು ಆದರ್ಶ ಪುರುಷನೆಂದು ತಲೆಯಮೇಲೆ ಹೊತ್ತು ತಿರುಗುವ, ಮಹಾಭಾರತದಲ್ಲಿ ಐದು ಜನರು ಒಬ್ಬ ಹೆಣ್ಣು ಮಗಳೊಂದಿಗೆ ಸಂಸಾರ ಮಾಡಿರುವುದನ್ನು ವೀರಾವೇಶದ ಕಥೆಯಂತೆ ಬಿಂಬಿಸುವ, ಇಂದ್ರನಿಂದ ಅತ್ಯಾಚಾರಕ್ಕೆ ಒಳಗಾದ ಅಹಲ್ಯೆಯನ್ನು ಬಾಯಿ ಬಿಡದಂತೆ ಕಲ್ಲಾಗಿಸುವ, ದುಷ್ಯಂತ ಮಹಾರಾಜನ ತೀಟೆಗೆ ಬಲಿಯಾದ ಶಕುಂತಲೆ ತನ್ನ ಸಾಚಾತನವನ್ನು ಸಾಬೀತುಪಡಿಸಲು ಪರದಾಡುವಂತೆ ಮಾಡುವ... ಇವನ್ನೆಲ್ಲ ಕತೆಯಾಗಿ ನೋಡುವ ನಮ್ಮ ಸಮಾಜದಿಂದ ನಿಜಕ್ಕೂ 'ವಿಧವೆ'ಯರಿಗೆ ಸರಿಯಾದ ಸ್ಥಾನ ಮಾನ ಸಿಗುವುದು ಸಾಧ್ಯವೇ?

- ಮಂಜಣ್ಣ, ಸೊರಬ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.





ಸಮುದಾಯದತ್ತ ಶಾಲೆ, ಶಾಲೆಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಜಾಥಾ... ಇಂತಹ ನಾಟಕಗಳನ್ನು ಆಡುತ್ತಲೇ 3000ಕ್ಕೂ ಹೆಚ್ಚು ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇದೆ ಎಂಬ ಕುಂಟು ನೆಪವೊಡ್ಡಿ ರಾಜ್ಯ ಸರ[...] ಖಾಯಂ ಆಗಿ ಸಾವಿರಾರು ಶಾಲೆಗಳಿಗೆ ಬೀಗ ಜಡಿಯಲು ತುದಿಗಾಲಲ್ಲಿ ನಿಂ[...] ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಗಳು ಇದರ ಬಗ್ಗೆ ಆಗಲೇ ಹೇ[...]ಗಳನ್ನು ನೀಡಿದ್ದಾರೆ. ಹಾಗೊಮ್ಮೆ ಇಂತಹ ಶಾಲೆಗಳಿಗೆ ಬೀಗ ಜಡಿದರೆ, [...] ಮುಂದೆ ದಲಿತರಿಗೆ, ಶೋಷಿತರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವ[...] ಇಷ್ಟು ದಿನ ದಕ್ಕುತ್ತಿದ್ದ ಅಷ್ಟಿಷ್ಟು ಶಿಕ್ಷಣವೂ ಇಲ್ಲದಂತಾಗಲಿದೆ.

ಯಾಕೆಂದರೆ ಇವತ್ತು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವವರು ಕುಬೇ[...] ಮಕ್ಕಳಲ್ಲ ಬದಲಾಗಿ ಗುಡಿಸಲುಗಾರರ, ದಲಿತರ, ಬಡ[...] ಮಕ್ಕಳು. ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚ[...] ಬಗ್ಗೆ ಶಿಕ್ಷಣ ಮಂತ್ರಿ ಮತ್ತು ಮುಖ್ಯಮಂತ್ರಿಗಳ ಹೇಳ[...] ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ ಅವರಿಬ್ಬರು [...] ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುತ್ತೇವೆಯೇ [...] ಮುಚ್ಚುವುದಿಲ್ಲ ಎಂದು ಪ್ಲೇಟು ಬದಲಾಯಿಸಿದ[...] ಇದರರ್ಥ ನಾಳೆ ಈ ಶಾಲೆಗಳಿಗೆ ನೇಣು ಗ್ಯಾರ[...] ಎಂಬುದು.

ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾರೆ ಎ[...] ಕಾರಣಕ್ಕೆ ಸಧ್ಯದಲ್ಲೇ ಮುಚ್ಚಲ್ಪಡುತ್ತಿರುವ ಶಾಲೆ[...] ಈಗಾಗಲೇ ಹಲವು ದಿನಗಳಿಂದ ಶಿಕ್ಷಣ ಇಲಾಖೆಯಿಂದ ಬೇಕಂ[...] ಅನಾದಾರಕ್ಕೊಳಪಟ್ಟಿವೆ. ಕೆಲ ಶಾಲೆಗಳಲ್ಲಿ ಕನಿಷ್ಠ ಮೂಲ ಸೌಕರ್ಯಗಳು [...] ಕೆಲವು ಶಾಲೆಗಳಂತೂ ಗುಡಿಸಲಿನಲ್ಲಿ ನಡೆಯುತ್ತಿರುವ ಉದಾಹರಣೆಗ[...] ಇಂತಹ ಶಾಲೆಗಳು ಏಕೋಪಾಧ್ಯಾಯರನ್ನು ಹೊಂದಿವೆ. ಪಾಲಕರಲ್ಲಿ[...] ಶಾಲೆಗಳ ಬಗ್ಗೆ ಅಸಹನೆ ಮೂಡಿಸಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕ[...] ಮಾಡಿರುವ ಹುನ್ನಾರಗಳು ನಡೆದಿವೆ. ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಯ[...] ಯೋಜನೆಗಳ ಮೂಲಕ ಸಾಕಾರಗೊಳಿಸಬೇಕಾದ ಸರ್ಕಾರ ರಾಜ್ಯೋತ್[...]

ಜೋಗಯ್ಯ ತೋಪಾಗಿದ್ದು ನಿಜವಯ್ಯ!





ಶಿವರಾಜ್‌ಕುಮಾರ್ ನಟಿಸಿದ ನೂರನೇ ಚಿತ್ರ 'ಜೋಗಯ್ಯ' ಹಿಟ್ಟೋ ಫ್ಲಾಪೋ ಎಂಬ ವಿಷಯಕ್ಕೆ ಸ್ವತಃ ಶಿವಣ್ಣ ತೆರೆ ಎಳೆದಿದ್ದಾರೆ. "'ಜೋಗಯ್ಯ' ಚಿತ್ರದ ಸೋಲನ್ನು ಅಳಿಸಿ ಹಾಕುವಂತಿದೆ 'ಶಿವ' ಚಿತ್ರ" ಎಂದು ಮೊನ್ನೆ ಪತ್ರಕರ್ತರೊಂದಿಗೆ ಮಾತನಾಡುತ್ತಾ ಶಿವರಾಜ್‌ಕುಮಾರ್ ಹೇಳಿದರು. ಅಂದರೆ 'ಜೋಗಯ್ಯ' ಬಾಕ್ಸ್ ಆಫೀಸ್‌ನಲ್ಲಿ ಹಣ ಮಾಡುವುದರಲ್ಲಿ ಸೋತಿದೆ ಎಂಬುದು ದೃಢವಾಯಿತು.

'ಜೋಗಯ್ಯ' ಕೆಲವು ಚಿತ್ರಮಂದಿರಗಳಲ್ಲಿ 50 ದಿನ ಪೂರೈಸಿದ ಸಂದರ್ಭದಲ್ಲಿ ಅದರ ನಿರ್ಮಾಪಕ ಮತ್ತು ನಿರ್ದೇಶಕ ಪ್ರೇಮ್ ಬೆಂಗಳೂರಿನ ಪಂಚತಾರಾ ಹೋಟೆಲ್‌ನಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಆ ಸಂತೋಷ ಕೂಟದಲ್ಲಿ ಭಾಗವಹಿಸಿದ್ದ ಶಿವರಾಜ್‌ಕುಮಾರ್ ಅವತ್ತು ಅಷ್ಟೇನೂ ಸಂತುಷ್ಟರಾಗಿರಲಿಲ್ಲ, ಅಷ್ಟೇ ಅಲ್ಲ, ಸ್ವತಃ ನಿರ್ಮಾಪಕಿ ರಕ್ಷಿತಾ ಪ್ರೇಮ್ ಅವರ ಮುಖದಲ್ಲೂ ಗೆಲುವಿನ ಮಂದಹಾಸವೇನೂ ಇರಲಿಲ್ಲ. ಈ ಬಗ್ಗೆ ಅಂದು ಪತ್ರಕರ್ತರು ಕೇಳಿದಾಗ "ಇಲ್ಲ, ನಮ್ಮ ಚಿತ್ರ ಆರಂಭದಲ್ಲಿ ...ಳ್ಳೆಯ ಓಪನಿಂಗ್ ಪಡೆದಿತ್ತು. ಆನಂತರ ಸ್ವಲ್ಪ ಕುಂಟುತ್ತ ಸಾಗಿದರೂ ಮತ್ತೆ ಬಾಕ್ಸ್ ಆಫೀಸ್‌ನಲ್ಲಿ ಚೇತರಿಸಿಕೊಂಡಿದೆ" ಎಂದು ಹಾರಿಕೆಯ ಉತ್ತರವನ್ನು ಪ್ರೇಮ್ ನೀಡಿದ್ದರು. ಇದೀಗ ಶಿವರಾಜ್‌ಕುಮಾರ್ ಪತ್ರಕರ್ತರ ಸಂಶಯವನ್ನು ಹೋಗಲಾಡಿಸಿ ಪ್ರೇಮ್ ಅವರ ಗಿಮಿಕ್‌ಗಳು 'ಜೋಗಯ್ಯ'ನನ್ನು ಗೆಲ್ಲಿಸುವಲ್ಲಿ ...ಫಲವಾಗಿದ್ದವು ಎಂಬ ಸತ್ಯವನ್ನು ಹೇಳಿದ್ದಾರೆ.

ಅಲ್ಲಿಗೆ ಪ್ರೇಮ್ ನಿರ್ದೇಶನದ ನಾಲ್ಕು ಚಿತ್ರಗಳು ಒಂದರ ಹಿಂದೆ ಒಂದರಂತೆ ಬಾಕ್ಸ್ ಆಫೀಸ್‌ನಲ್ಲಿ ನೆಲ ಕಚ್ಚಿವೆ ಎಂದಾಯಿತು. ಈ ಮೂಲಕ ...ರೇಮ್ ಈಗ ಸೋಲಿನ ಸರದಾರ ಎಂಬ ಕುಖ್ಯಾತಿಗೂ ಒಳಗಾಗಿದ್ದಾರೆ. ಇಷ್ಟೆಲ್ಲಾ ಫ್ಲಾಪ್ ಚಿತ್ರಗಳನ್ನು ನೀಡಿದ್ದರೂ ಗಾಂಧಿನಗರದ ನಿರ್ಮಾಪಕರಲ್ಲಿ ...ರೇಮ್ ಕ್ರೇಜ್ ಇನ್ನೂ ಕಡಿಮೆಯಾಗಿಲ್ಲ. ಇವತ್ತಿಗೂ ಪ್ರೇಮ್ ನಿರ್ದೇಶನದಲ್ಲಿ ಚಿತ್ರ ಮಾಡಲು ಕೆಲವು ನಿರ್ಮಾಪಕರು ತುದಿಗಾಲಲ್ಲಿ ನಿಂತಿರುವುದು ...ಂಧಿನಗರದ ವೈರುಧ್ಯಗಳಲ್ಲಿ ಒಂದು.

...ರಿಮೇಕ್ ಟ್ರಾಫಿಕ್‌ನಲ್ಲಿ ಕನ್ನಡ ಜಾಮ್

ಇತ್ತೀಚೆಗೆ ಕನ್ನಡ ಸಿನಿಮಾ ನಿರ್ಮಾಪಕರು ಫ್ಲೈಟ್ ಹತ್ತಿ ಚೆನ್ನೈ ಅಥವಾ ಹೈದರಾಬಾದ್‌ಗೆ ಹೋಗುವ ಬದಲು ತಿರುವನಂತಪುರಕ್ಕೆ ಹೋಗುವ ...ಭ್ಯಾಸ ಶುರು ಮಾಡಿದ್ದಾರೆ. ಅಂದರೆ ಇವರಿಗೆ ಮಲಯಾಳಂ ಚಿತ್ರಗಳ ಮೋಹ ಆರಂಭವಾಗಿದೆ.


ಪ್ರಕಾಶ್

ಮಲಯಾಳಂನಲ್ಲಿ ಸುಮಾರು 500 ದಿನಗಳ ಕಾಲ ಯಶಸ್ವೀ ಪ್ರದರ್ಶನವನ್ನು ಕಂಡಿರುವ ...ಟ್ರಾಫಿಕ್" ಎಂಬ ಚಿತ್ರವನ್ನು ಪ್ರಕಾಶ್ ನಿರ್ದೇಶಿಸಲಿದ್ದಾರೆ ಎಂಬ ಸುದ್ದಿ ಕೇಳಿಬಂದಿದೆ. ಈ ...ದೆ ಪ್ರಕಾಶ್ 'ಮಿಲನ' ಎಂಬ ಚಿತ್ರವನ್ನು ನಿರ್ದೇಶಿಸುವ ಮೂಲಕ ತಾನೋರ್ವ ಸೃಜನಶೀಲ ...ರ್ದೇಶಕ ಎಂದು ತೋರಿಸಿಕೊಟ್ಟಿದ್ದರು. ಅವರೀಗ ಯಾಕೆ ರಿಮೇಕ್ ಚಿತ್ರವನ್ನು ನಿರ್ದೇಶಿಸಲು ...ರಟಿದ್ದಾರೋ ಗೊತ್ತಿಲ್ಲ. ಈ ಚಿತ್ರವನ್ನು ರಾಜ್‌ಕುಮಾರ್ ಸಂಸ್ಥೆಯ ಕುಮಾರ್ ಮತ್ತು ವಿಷ್ಣು ...ವಾ ಖ್ಯಾತಿಯ ಗೋವಿಂದು ಅವರು ಜಂಟಿಯಾಗಿ ನಿರ್ಮಿಸಲಿದ್ದಾರೆ.

ಅಂದಹಾಗೆ, ಈ ಚಿತ್ರದ ರಿಮೇಕ್ ಹಕ್ಕಿಗಾಗಿ ನಿರ್ಮಾಪಕರು ಸುಮಾರು 12 ಲಕ್ಷ ...ರೂಪಾಯಿಗಳನ್ನು ನೀಡಿದ್ದಾರಂತೆ. ಮಲಯಾಳಂ ಚಿತ್ರವೊಂದರ ರಿಮೇಕ್ ಹಕ್ಕಿಗಾಗಿ ಇಷ್ಟೊಂದು ...ದೊಡ್ಡ ಮೊತ್ತವನ್ನು ನೀಡುತ್ತಿರುವುದು ಇದೇ ಮೊದಲ ಬಾರಿ.

'ಟ್ರಾಫಿಕ್' ಚಿತ್ರದಲ್ಲಿ ತಾರಾ ಜಾತ್ರೆಯೇ ನಡೆಯಲಿದೆ. ರವಿಚಂದ್ರನ್, ನಿಖಿತಾ, ದಿಗಂತ್, ರಾಗಿಣಿ, ರಂಗಾಯಣ ರಘು, ಪಾರ್ವತಿ ಮೆನನ್ ಹೀಗೆ ...ದೊಡ್ಡ ತಾರಾಗಣವೇ ಈ ಚಿತ್ರದಲ್ಲಿ ಮೇಳೈಸಲಿದೆ. ಕೇರಳದಲ್ಲಿ ಜನರನ್ನು ರಂಜಿಸಿದಂತೆ ಈ ಚಿತ್ರ ಕನ್ನಡ ಪ್ರೇಕ್ಷಕರನ್ನೂ ನಗುವಿನ ಕಡಲಲ್ಲಿ ಮುಳುಗಿಸುತ್ತದೆ ...ಎಂಬುದು ನಿರ್ಮಾಪಕರ ಆತ್ಮವಿಶ್ವಾಸದ ಮಾತು.

...ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚುವ ಮಾತನಾಡಿದ್ದು ಕನ್ನಡದ ಬಗ್ಗೆ ಸರ್ಕಾರ ...ಹೊಂದಿರುವ ಮಲತಾಯಿ ಧೋರಣೆಯನ್ನು ಬಟಾಬಯಲುಗೊಳಿಸಿದೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಲ್ಲಾ ಕ್ಷೇತ್ರಗಳಲ್ಲಿ ತಾರಾತಿಗಡಿ ...ಬಿದಿದೆ. ಈಗ ಶಿಕ್ಷಣ ಕ್ಷೇತ್ರಕ್ಕೂ ಅದರ ವ್ಯಾಪ್ತಿ ಹರಡಿದೆ. ಇತ್ತ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹೇಳಿಕೆ ನೀಡುತ್ತಲೇ ಅತ್ತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ಗೆ ಶಿಕ್ಷಣದ ...ಗುತ್ತಿಗೆಯನ್ನು ಕೊಡಲು ಸರ್ಕಾರ ಹೊರಟಿದೆ. ಕನ್ನಡ ಶಾಲೆಗಳನ್ನು ಮುಚ್ಚಲು ...ಸರ್ಕಾರ ಮುಂದಾಗಿರುವುದನ್ನು ಖಾರವಾಗಿ ಖಂಡಿಸಿರುವ ಶಿವಸುಂದರ್ ಸರ್‌ಗೆ ...ಕೃತಜ್ಞತೆಗಳು.

- ಹಳ್ಳಿ ಬಸವರಾಜ, ಹಸಮಕಲ್ (ಸಿಂಧನೂರು)

ನವೆಂಬರ್ 23ರ ಸಂಚಿಕೆಯಲ್ಲಿ 'ಚರ್ಚ್ ದಾಳಿ ಹಿಂದೆ ಕಲ್ಲಡ್ಕ?' ಎಂಬ ...ನುಶ ಅವರ ವರದಿ ದಿಗಿಲು ಹುಟ್ಟಿಸುವಂತಿತ್ತು.

ರಾಜ್ಯದ ಹಲವು ಭಾಗಗಳಲ್ಲಿ 2008ರಲ್ಲಿ ನಡೆದ ಚರ್ಚ್ ದಾಳಿಗಳೂ ಇಡೀ ...ದೇಶವೇ ತಲೆ ತಗ್ಗಿಸುವಂತಿದ್ದವು. ಹಿಂದೂ ವೀರರ ಪಡೆಗಳಾದ ವಿಶ್ವ ಹಿಂದೂ ...ಪರಿಷತ್, ಭಜರಂಗ ದಳ, ಶ್ರೀರಾ(ಮಾ)ಮ ಸೇನೆ.. ಇಂತಹ ಸಂಘಟನೆಗಳು ...ಸಂಘ ಪರಿವಾರದ ಅಂಗ ಸಂಸ್ಥೆಗಳು ಎಂಬ ಬಗ್ಗೆ ಯಾವ ಅನುಮಾನಗಳೂ ಇಲ್ಲ.

ಕರಾವಳಿಯಲ್ಲಿ ನಡೆದ ಚರ್ಚ್ ದಾಳಿಗಳ ಹಿಂದಿದ್ದ ಖತರ್‌ನಾಕ್ ಜನರನ್ನು ...ಉಗ್ರ ಶಿಕ್ಷೆಗೆ ಒಳಪಡಿಸಬೇಕಾದ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಕೈ ಕಟ್ಟಿ ...ಕುಳಿತಿರುವುದು ನಮ್ಮ ರಾಜ್ಯದ ದುರಂತ.

- ರಮಜಾನ್ ಕೆ.ಕೊರ್ತಿ, ಬಾಗಲಕೋಟೆ

'ಮಂಪರು ಕಳೆದ ದೇವನೂರು' ಎಂಬ ಪತ್ರದಲ್ಲಿ 'ಕತ್ತಲೆ ಬೋರ್ಡಿನ ಮೇಲೆ ...ಬರೆತ ಅ ಆ ಅಕ್ಷರಗಳ ನಡುವೆ ಅವ್ವ ಅಪ್ಪನ ಆಸೆಗಳು ಸಿಕ್ಕಿದ್ದವು, ನಮ್ಮೂರು ...ಗರಿ ಸಮಾಧಿಗಳು ಸಿಕ್ಕಿದ್ದವು, ಅಸ್ಥಿ ಪಂಜರಗಳ ಪಾತಾಳದಲ್ಲಿ ಒಂದಿಷ್ಟು ಮಾತು ...ಗಳು ಸಿಕ್ಕಿದ್ದವು...' ಈ ಸಾಲುಗಳನ್ನು ಬರೆದದ್ದು ಕವಿ ಗೋವಿಂದಯ್ಯನವರು.

ಹಾಗೆಯೇ 'ಅಲ್ಲಿ ಕುಂತವರೆ ಅವರು ಅಲ್ಲೇ ಕುಂತವರೆ, ಸೈಜುಗಲ್ಲು ...ಹೊಡುಸೋರು, ಹುಣಸೆ ಮರಕೆ ಕಟ್ಟೋರು, ಬಸುರಿ ಕೈಯ್ಯ ಮಡಗುವರೆ, ಮೂಳೇ ...ಕೋಳಿಗೆ ಹಾಕವರೆ, ಮೀಸೆಯ ಮರೆಯಲಿ ನಗುತಾರೆ...' ಈ ಸಾಲುಗಳನ್ನು ...ಬರೆದದ್ದು ಕವಿ ಸಿದ್ದಲಿಂಗಯ್ಯನವರು.


ಆದರೆ ನನ್ನ ಪತ್ರದಲ್ಲಿ ಇವೆರಡನ್ನೂ ಸಿದ್ದಲಿಂಗಯ್ಯ ಅವರು ಬರೆದದ್ದು ಎಂದು ...ತಪ್ಪಾಗಿ ಅಚ್ಚಾಗಿತ್ತು.

- ಬಿ.ಶ್ರೀಪಾದ ಭಟ್, ಬೆಂಗಳೂರು

ಐಡಿಯಾ ಮುನಿ!


ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನ ನಾಯ್ಡು ಸದಾ ಒಂದಲ್ಲ ಒಂದು ಸುದ್ದಿಯಲ್ಲಿ ಇದ್ದೇ ಇರುತ್ತಾರೆ. ಇಂತಹ ಮುನಿರತ್ನಂ ಮೊನ್ನೆ ಹೊಸ ಚಿತ್ರವೊಂದನ್ನು ಯಾವುದೇ ಸದ್ದುಗದ್ದಲವಿಲ್ಲದೆ ಹೈದರಾಬಾದ್‌ನಲ್ಲಿರುವ ರಾಮೋಜಿರಾವ್ ಸ್ಟುಡಿಯೋದಲ್ಲಿ ಆರಂಭಿಸಿದ್ದಾರೆ. ಉಪೇಂದ್ರ ಮತ್ತು ರಮ್ಯ ನಾಯಕ-ನಾಯಕಿಯಾಗಿ ನಟಿಸುತ್ತಿರುವ ಈ ಚಿತ್ರವನ್ನು ತೆಲುಗಿನ ಸುರೇಶ್ ಕೃಷ್ಣ ನಿರ್ದೇಶಿಸುತ್ತಿದ್ದಾರೆ.

ಯಾವಾಗಲೂ ಸುದ್ದಿ ಮಾಡುವ ತವಕದಲ್ಲಿರುವ ಮುನಿರತ್ನಂ ತನ್ನ ನಿರ್ಮಾಣದ ಚಿತ್ರವನ್ನು ಯಾಕೆ ಅತ್ಯಂತ ಗೌಪ್ಯವಾಗಿ ಮಾಡುತ್ತಿದ್ದಾರೆ ಎಂಬುದೇ ಈಗ ಗಾಂಧಿನಗರದಲ್ಲಿ ಎಲ್ಲರ ಕುತೂಹಲಕ್ಕೆ ಕಾರಣವಾಗಿದೆ.



ಬಹುಶಃ ಈ ಚಿತ್ರ ಬಹುತಾರಾಗಣದಲ್ಲಿ ನಿರ್ಮಾಣವಾಗಲಿದ್ದು, ಎರಡು-ಮೂರು ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗುತ್ತದೆ ಎಂಬುದು ಕೆಲವರ ಲೆಕ್ಕಾಚಾರ. ಇನ್ನೂ ಕೆಲವರ ಪ್ರಕಾರ ಈ ಚಿತ್ರದ ಬಹುತೇಕ ಭಾಗ ರಾಮೋಜಿರಾವ್ ಸ್ಟುಡಿಯೋದಲ್ಲೇ ಚಿತ್ರೀಕರಣಗೊಳ್ಳುತ್ತಿರುವುದರಿಂದ ನಾಳೆ ಮನರಂಜನಾ ತೆರಿಗೆ ಮತ್ತು ಇನ್ನಿತರ ಸೌಲಭ್ಯಗಳಿಗೆ ತೊಂದರೆಯಾಗಬಾರದು ಎಂಬ ಕಾರಣವೂ ಇರಬಹುದು. ಆದರೆ ಇನ್ನೂ ಹಲವರ ಪ್ರಕಾರ ಈ ಚಿತ್ರ ಸಂಪೂರ್ಣಗೊಂಡ ನಂತರ ಒಮ್ಮೆಲೆ ದೊಡ್ಡ ಮಟ್ಟದಲ್ಲಿ ಪ್ರಚಾರವನ್ನು ಆರಂಭಿಸುವ ಯೋಜನೆಯನ್ನು ಉಪ್ಪಿ ಮತ್ತು ಮುನಿರತ್ನಂ ಹಾಕಿಕೊಂಡಿದ್ದಾರೆ.

ಇವರಲ್ಲಿ ಯಾವುದು ಸತ್ಯ, ಯಾವುದು ಸುಳ್ಳು ಎಂಬುದು ಮುನಿರತ್ನಂ ಅವರಿಗೇ ಗೊತ್ತು!




ಬಂಡಲ್‌ರಾಜ ಹೇಮಂತನ ಕದ್ದ ಮಾಲು!

ಬಂಡಲ್ ರಾಜ ಹೇಮಂತ್ ಹೆಗ್ಡೆ ನಿರ್ದೇಶನದ ನಾಲ್ಕನೇ ಚಿತ್ರ 'ನಿಂಬೆ ಹುಳಿ' ಈಗಾಗಲೇ ಅನೇಕ ಕಾರಣಗಳಿಂದ ಕುತೂಹಲ ಕೆರಳಿಸಿದೆ. ಮೊದಲನೆಯದಾಗಿ ಈ ಚಿತ್ರವನ್ನು ಬಾಲಿವುಡ್‌ನ 'ಷೋ ಮ್ಯಾನ್' ಸುಭಾಷ್ ಘಾಯ್ ಅವರ ಮುಕ್ತಾ ಆರ್ಟ್ಸ್ ಲಾಂಛನದಡಿ ಹೇಮಂತ್ ಹೆಗ್ಡೆ ನಿರ್ಮಿಸುತ್ತಿದ್ದಾರೆ. ಆದರೆ ಈತನಕ ಸುಭಾಷ್ ಘಾಯ್ ಈ ಚಿತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ಪತ್ರಿಕಾಗೋಷ್ಠಿಗೆ ಖುದ್ದಾಗಿ ಹಾಜರಾಗಿಲ್ಲ. ಅಂದಹಾಗೆ, ಬಾಲಿವುಡ್ ನಟ ಅನುಪಮ್ ಖೇರ್ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿರುವುದು ಗ್ಯಾರಂಟಿಯಾಗಿದೆ.

ವಿಚಿತ್ರವೆಂದರೆ 'ನಿಂಬೆ ಹುಳಿ' ಹೆಸರಿಗೆ ತಕ್ಕಂತೆ ಈ ಚಿತ್ರದ ಸೆಟ್ಟಿನಿಂದ ಸಿಹಿ ಸುದ್ದಿಗಳ ಬದಲಾಗಿ ಸಾಲುಸಾಲು ಹುಳಿ ಸುದ್ದಿಗಳೇ ಬರುತ್ತಿವೆ.

ಮೊನ್ನೆ ಹೇಮಂತ್ ಹೆಗ್ಡೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ನಾಯಕಿ ಕೋಮಲ್ ಝಾ ಮಾತನಾಡುತ್ತ "ಇದು ಹಿಂದಿಯ 'ವೆಲ್‌ಕಮ್' ಚಿತ್ರದ ರೀಮೇಕ್" ಎಂದು ಹೇಳಿದಳು.



ಆಗ ಆಕೆಯ ಮಾತನ್ನು ಅರ್ಧಕ್ಕೆ ಕಟ್ ಮಾಡಿದ ಹೇಮಂತ್ ಹೆಗ್ಡೆ ಆಕೆಯಿಂದ ಮೈಕನ್ನು ಕಸಿದುಕೊಂಡು "ನಿಮಗೆ ಇದು ಯಾರು ಹೇಳಿದರು? ಪತ್ರಕರ್ತರೆ, ಯಾವುದೇ ಕಾರಣಕ್ಕೂ ಇದು 'ವೆಲ್‌ಕಮ್' ಚಿತ್ರದ ರೀಮೇಕ್ ಅಲ್ಲ ಎಂದು ಸ್ಪಷ್ಟಪಡಿಸುತ್ತೇನೆ" ಎಂದ. ಇದನ್ನು ಕೇಳಿ ಮುಂಬೈ ಬೆಡಗಿ ಕೋಮಲ್ ತನ್ನ ಮಾತನ್ನು ಹಿಂದಕ್ಕೆ ಪಡೆದಳು. ಆದರೂ 'ನಿಂಬೆ ಹುಳಿ' ಚಿತ್ರದ ಕಥಾವಸ್ತುವಿನ ಬಗ್ಗೆ ಎಲ್ಲರಲ್ಲಿ ಸಂಶಯದ ಬೀಜವನ್ನು ಆಕೆ ಬಿತ್ತಿದಳು.

ಹಾಗೆಯೇ ಈ ಚಿತ್ರದ ಮತ್ತೊಬ್ಬ ನಾಯಕಿಗೆ ನಿರ್ದೇಶಕ ಲಂಗ-ದಾವಣಿ ತೊಡಬೇಕೆಂದು ಹೇಳಿದ್ದನಂತೆ. ಆ ಮುಂಬೈ ಹುಡುಗಿಗೆ ಲಂಗ-ದಾವಣಿ ಅಂದರೆ ಏನೆಂಬುದು ಗೊತ್ತಿರಲಿಲ್ಲ. ಕೊನೆಗೆ ಅವಳು ಇಂಟರ್‌ನೆಟ್‌ನಲ್ಲಿ ಹುಡುಕುತ್ತ ಕರ್ನಾಟಕದ ಗೆಳತಿಯರೊಂದಿಗೆ ಹರಟುತ್ತಾ ವಿಷಯ ತಿಳಿದುಕೊಂಡಳು. ಚಿತ್ರೀಕರಣಕ್ಕೆ ಆಕೆ ಬಂದಾಗ ಅಲ್ಲಿ ಅವಳಿಗೆ ದೊಡ್ಡ ಅಚ್ಚರಿ ಕಾದಿತ್ತು. ಸುಮಾರು ಹತ್ತು ವರ್ಷಗಳಷ್ಟು ಹಳೆಯ ಲಂಗ-ದಾವಣಿಯನ್ನು ನಿರ್ದೇಶಕ ಆಕೆಗೆ ನೀಡಿದನಂತೆ. ಸೆಟ್ ಹುಡುಗರ ಪ್ರಕಾರ ಆ ಲಂಗ-ದಾವಣಿ ನಿರ್ದೇಶಕರ ಅಥವಾ ಕಾಸ್ಟ್ಯೂಮ್ ಡಿಸೈನ್ ಮನೆಯದ್ದೇ ಆಗಿರಬೇಕು. ಅದನ್ನು ನೋಡಿದ ನಾಯಕಿ "ಇಂತಹ ಹಳೆಯ ತಿರುಪೆ ಬಟ್ಟೆಯನ್ನು ನಾನು ಧರಿಸಬೇಕೇ?" ಎಂದು ಬಂಡಾಯವೆದ್ದಳಂತೆ. ಆಗ ನಾಲ್ಕು ಫ್ಲಾಪ್ ಚಿತ್ರಗಳ ಸರದಾರ ಹೇಮಂತ್ ಹೆಗ್ಡೆ "ನನ್ನ ಚಿತ್ರದಲ್ಲಿ ನೀನು ನಟಿಸಿದರೆ ನೀನು ಕರ್ನಾಟಕದಲ್ಲಿ ನಂಬರ್ ಒನ್ ನಾಯಕಿಯಾಗುವುದು ಗ್ಯಾರಂಟಿ" ಎಂದನಂತೆ.

ಆದರೆ ಆ ಹುಡುಗಿ "ನನಗೆ ಗೊತ್ತಿಲ್ಲೇನಯ್ಯ ನಿನ್ನ ಬಂಡವಾಳ. ಇಲ್ಲಿಯತನಕ ನಿನ್ನ ಯಾವ ಚಿತ್ರ ಹಿಟ್ ಆಗಿದೆ?" ಎಂದು ಹೇಳಿ ಲಂಗ-ದಾವಣಿಯನ್ನು ಬಿಸಾಕಿ ಬಾಂಬೆಗೆ ಹಿಂತಿರುಗಿದಳಂತೆ. ಇದಾದ ನಂತರವೇ ಈ ಪಾತ್ರ ಕನ್ನಡದ ಹುಡುಗಿ ಸ್ಮಿತಾ ಯಾನೆ ನಿವೇದಿತಾ ಪಾಲಿಗೆ ದೊರೆತಿದೆ. ಮುಂಬೈ ಹುಡುಗಿಗೆ ಸಿಟ್ಟು ಬಂದಿದ್ದರಿಂದ ಕನ್ನಡದ ಹುಡುಗಿಗೆ ಅವಕಾಶ ಸಿಕ್ಕಿತು ಎಂದಷ್ಟೇ ನಾವು ಸಮಾಧಾನ ಪಡಬಹುದು.


ಈ ಚಿತ್ರದಲ್ಲಿರುವ ಮತ್ತೊಬ್ಬ ನಾಯಕಿಯೂ ಮುಂಬೈನವಳೇ. ಆಕೆಯ ಹೆಸರು ಮಧುರಿಮಾ. ಮೊನ್ನೆ ನಡೆದ ಪತ್ರಿಕಾಗೋಷ್ಠಿಗೆ ಈಕೆ ತನ್ನ ದೇಹಸಿರಿಯನ್ನು ಪ್ರದರ್ಶಿಸುವ ಅತ್ಯಂತ ಗ್ಲ್ಯಾಮರಸ್ ಬಟ್ಟೆಯನ್ನು ತೊಟ್ಟಿದ್ದಳಲ್ಲದೆ ನಮ್ಮ ಕರ್ನಾಟಕದ ಛಾಯಾಚಿತ್ರಗ್ರಾಹಕರು ಬೆಚ್ಚಿಬೀಳುವಂತೆ ಕಾಮಸೂತ್ರದ ಎಲ್ಲಾ ಭಂಗಿಗಳನ್ನು ನೀಡಿದಳು.

ಹೀಗೆ ತುಂಡು ಬಟ್ಟೆ ಧರಿಸುವ ಮಧುರಿಮಾಳೇ ಬೆಚ್ಚಿಬೀಳುವಂತಹ ಬಟ್ಟೆಯನ್ನು ಧರಿಸಲು ನಿರ್ದೇಶಕರು ಕೊಟ್ಟಿದ್ದರಂತೆ. ಅದನ್ನು ಧರಿಸಿದ ಆಕೆ ಅದರ ಚೋಟುದ್ದದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದಾಗ ಕಾಸ್ಟ್ಯೂಮ್ ಡಿಸೈನರ್ ಸೆಟ್ಟಿನಲ್ಲೇ ಸಮಸ್ತ ಜನರ ಸಮ್ಮುಖದಲ್ಲಿ ಅದನ್ನು ಸ್ವಲ್ಪ ಉದ್ದ ಮಾಡಿದರಂತೆ. ಆಕೆ ತೊಟ್ಟಿದ್ದ ಬಟ್ಟೆಯನ್ನು ತೆಗೆಸಿ ಅದನ್ನು ಉದ್ದ ಮಾಡಿ ಮತ್ತೆ ಆಕೆಗೆ ಕೊಡುವ ಬದಲು ಅದನ್ನು ಆಕೆ ಧರಿಸಿದ್ದಾಗಲೇ ಎಲ್ಲರ ಮುಂದೆ ಅದನ್ನು ಉದ್ದ ಮಾಡಿದ ಆ ಕಾಸ್ಟ್ಯೂಮ್ ಡಿಸೈನರ್‌ನ ಈ ಮಹಾಸಾಧನೆಗೆ ಏನೆನ್ನಬೇಕೋ ಗೊತ್ತಿಲ್ಲ.

ಹೀಗೆ 'ನಿಂಬೆ ಹುಳಿ' ಚಿತ್ರದ ಸೆಟ್‌ನಿಂದ ಇಂತಹ ಹುಳಿ ಸಂಗತಿಗಳು ಕೇಳಿಬರುತ್ತಲೇ ಇರುವುದು ಮಜಭೂತಾಗಿದೆ...

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 23-11-2011 RNI No. KARKAN200

ಶಂಕರ್ ನಾಗ್ ಹೆಸರು ದುರುಪಯೋಗ?



ಶಂಕರ್ ನಾಗ್ ಅವರು ನಿಧನ ಹೊಂದಿ ಎರಡು ದಶಕಗಳು ಕಳೆದಿದ್ದರೂ ಅವರ ಜನಪ್ರಿಯತೆಯನ್ನು ಎನ್‌ಕ್ಯಾಷ್ ಮಾಡಿಕೊಳ್ಳುವ ಜನರಿಗೆ ಗಾಂಧಿನಗರದಲ್ಲಿ ಬರವೇನೂ ಇಲ್ಲ. ಮೊನ್ನೆ ಉದಯ್‌ಪ್ರಕಾಶ್ ಎಂಬ ಯುವ ನಿರ್ದೇಶಕ 'ಆಟೋ ರಾಜ' ಎಂಬ ಚಿತ್ರದ ಜಾಹಿರಾತು ನೀಡಿದ್ದರು. ಅದರಲ್ಲಿ 'ಅಂದು ಶಂಕರ್ ನಾಗ್ ಈ ಪಾತ್ರವನ್ನು ನಿರ್ವಹಿಸಿದ್ದರೆ, ಈಗಿನ ಸಂದರ್ಭದಲ್ಲಿ ಆ ಪಾತ್ರವನ್ನು ನಿರ್ವಹಿಸಲು ಯಾರು ಯೋಗ್ಯ?' ಎಂಬ ಪ್ರಶ್ನೆಯನ್ನು ಕೇಳಿದ್ದರು.

ಆದರೆ ಈ ಚಿತ್ರಕ್ಕೆ ಸಂಬಂಧಪಟ್ಟ ಪತ್ರಿಕಾಗೋಷ್ಠಿಯಲ್ಲಿ ಉದಯಪ್ರಕಾಶ್ ಮಾತನಾಡಿದ್ದು ಬಾಲಿಷವಾಗಿತ್ತು. "ಈ ಚಿತ್ರಕ್ಕೂ ಶಂಕರ್ ನಾಗ್ ಅವರು ನಟಿಸಿದ್ದ 'ಆಟೋ ರಾಜ' ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ" ಎಂದು ಅವತ್ತು ಉದಯಪ್ರಕಾಶ್ ಹೇಳಿದರು. "ಹಾಗಾದರೆ ನೀವು ಶಂಕರ್ ನಾಗ್ ಅವರ ಹೆಸರು ಮತ್ತು ಭಾವಚಿತ್ರವನ್ನು ಜಾಹಿರಾತಿನಲ್ಲಿ ಯಾಕೆ ಬಳಸಿದ್ದೀರಿ? ಈ ರೀತಿ ಅವರ ಹೆಸರನ್ನು ಬಳಸಲು ನೀವು ಅವರ ಕುಟುಂಬದ ಸದಸ್ಯರ ಅನುಮತಿಯನ್ನು ಪಡೆದಿದ್ದೀರಾ?" ಎಂಬಿತ್ಯಾದಿ ಪ್ರಶ್ನೆಗಳಿಗೆ ಉದಯ್‌ಪ್ರಕಾಶ್ ಅವರಲ್ಲಿ ಯಾವುದೇ ಉತ್ತರವಿರಲಿಲ್ಲ.

ಇದಕ್ಕಿಂತ ಮುಖ್ಯವಾಗಿ ಆ ಜಾಹಿರಾತೇ ಒಂದು ಗಿಮಿಕ್. ಯಾಕೆಂದರೆ ಗಾಂಧಿನಗರದವರ ಪ್ರಕಾರ ಈಗಾಗಲೇ ಈ ಪಾತ್ರವನ್ನು ನಿರ್ವಹಿಸಲು ಉದಯ್‌ಪ್ರಕಾಶ್ ಯುವ ನಾಯಕ ನಟ ಯಶ್ ಅವರಿಗೆ ಅಡ್ವಾನ್ಸ್ ಸಂಭಾವನೆಯನ್ನೂ ನೀಡಿದ್ದಾರಂತೆ. "ಇದು ನಿಜವೇ?" ಎಂದು ಕೇಳಿದರೆ ಉದಯ್‌ಪ್ರಕಾಶ್ ಹೇಳುವುದೇ ಬೇರೆ. "ಈ ಚಿತ್ರದ ಕಥಾವಸ್ತುವನ್ನು ಈಗಾಗಲೇ ನಾನು ಎಂಟು ಜನ ಯುವ ನಾಯಕನಟರಿಗೆ ತಿಳಿಸಿದ್ದೇನೆ. ಪ್ರೇಕ್ಷಕರು ಯಾವ ಯುವ ನಾಯಕ ನಟನನ್ನು ಆಯ್ಕೆ ಮಾಡುತ್ತಾರೋ ಅವರನ್ನೇ ಹಾಕಿ ಚಿತ್ರ ಮಾಡುತ್ತೇನೆ" ಎನ್ನುತ್ತಾರೆ.





ಒಟ್ಟಾರೆಯಾಗಿ ಇತ್ತೀಚೆಗೆ ನಿರ್ದೇಶಕ ಪ್ರೇಮ್ ತರಹ ಎಲ್ಲಾ ಯುವ ನಿರ್ದೇಶಕರು ಚಿತ್ರ ಮಾಡುವ ಮೊದಲೇ ಭಾರೀ ಗಿಮಿಕ್ ಮಾಡುವುದನ್ನು ಕಲಿತಿದ್ದಾರೆ.

ಚಿತ್ರಕ್ಕೆ ಸರಿಯಾದ ನಾಯಕ ನಟನನ್ನು ಸೂಚಿಸಿದವರಿಗೆ ಚಿತ್ರದ ನಿರ್ಮಾಪಕರು ಮಡಿಕೇರಿ ಬಳಿಯಿರುವ ಬೈಲುಕೊಪ್ಪದಲ್ಲಿ ಒಂದು ನಿವೇಶನವನ್ನು ಉಡುಗೊರೆಯಾಗಿ ನೀಡುತ್ತಾರಂತೆ. ಅಂದರೆ ಶಂಕರ್ ನಾಗ್ ಅವರ ಹೆಸರು ಮತ್ತು ಜನಪ್ರಿಯತೆಯನ್ನು ಸಿನಿಮಾದವರು ತುಂಬಾ ಜಾಣತನದಿಂದ ರಿಯಲ್ ಎಸ್ಟೇಟ್ ವ್ಯಾಪಾರಕ್ಕೂ ಬಳಸಿಕೊಳ್ಳುತ್ತಿದ್ದಾರೆ ಎಂದಾಯಿತು. ತಾರೆಯರ ಹೆಸರನ್ನು ಈ ರೀತಿ ದುರ್ಬಳಕೆ ಮಾಡುವ ನಮ್ಮ ಸಿನಿಮಾ ಜನರ ದಂಧೆಗೆ ಛೇಂಬರ್‌ನವರು ತಡೆ ಹಾಕಬೇಕಾಗಿದೆ.

ಅಡ್ವಾನ್ಸ್ ಹಣಕ್ಕೆ ದೋಖಾ ಕೊಟ್ಟ ಲೂಸ್‌ಗಳು



ಸುಂದರ್ ಕೃಷ್ಣ ಅರಸ್ ಅವರ ಪುತ್ರ ನಾಗೇಂದ್ರ ಅರಸ್ ಈಗ ಪೆಕರನಾಗಿದ್ದಾರೆ!

ಅದೂ ಲೂಸ್ ಮಾದನಿಗೆ ದುಡ್ಡು ಕೊಟ್ಟ ಕಾರಣಕ್ಕೆ.

ನಾಗೇಂದ್ರ ಅರಸ್ ನಿರ್ದೇಶಿಸಲು ಉದ್ದೇಶಿಸಿದ್ದ 'ಪೆಕರ' ಚಿತ್ರಕ್ಕೆ ಲೂಸ್ ಮಾದ ಯೋಗೇಶನ್ನ ಕಾಲ್‌ಶೀಟ್ ಪಡೆದಿದ್ದರು. ನವೆಂಬರ್ 18ಕ್ಕೆ ಮುಹೂರ್ತ, ಡಿಸೆಂಬರ್ ಎರಡನೇ ವಾರದಿಂದ ಚಿತ್ರೀಕರಣ ಶುರು ಎಂದು ಮಾತಾಗಿತ್ತು. ಡೇಟ್ಸ್ ನೀಡಿದಾಗ ಲೂಸ್ ಮಾದನ ತಂದೆ ಸಿದ್ದರಾಜು ಐವತ್ತು ಲಕ್ಷ ರೂಪಾಯಿ ಸಂಭಾವನೆ ಫಿಕ್ಸ್ ಮಾಡಿದ್ದರು. ನಾಗೇಂದ್ರ ಅರಸ್ ಅದಕ್ಕೂ ಒಪ್ಪಿ ಐದು ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟಿದ್ದರು. ದೀಪಾವಳಿ ಸಂದರ್ಭದಲ್ಲಿ ಆ ಚಿತ್ರದ ಜಾಹಿರಾತು ಕೂಡಾ ಪ್ರಕಟವಾಗಿತ್ತು.

ಈಗ ಲೂಸ್ ಮಾದ ಮತ್ತು ಆತನ ತಂದೆ ಸಿದ್ದರಾಜು ಕೈ ಎತ್ತಿದ್ದಾರೆ. "ಡಿಸೆಂಬರ್‌ನಲ್ಲಿ ಡೇಟ್ಸ್ ಕೊಡಲು ಸಾಧ್ಯವಿಲ್ಲ, ಬೇಕಿದ್ದರೆ ಫೆಬ್ರವರಿ ನಂತರ ಕೊಡ್ತೀವಿ" ಎಂದಿದ್ದಾರೆ. ಅದಕ್ಕೆ ಒಪ್ಪದ ನಾಗೇಂದ್ರ ಅರಸ್ "ನಿಮ್ಮ ಸಹವಾಸವೇ ಬೇಡ. ನಾನು ಕೊಟ್ಟ ಅಡ್ವಾನ್ಸ್ ಹಣ ವಾಪಸ್ ಕೊಡಿ" ಎಂದಿದ್ದಾರೆ. ಅದಕ್ಕೆ ಒಪ್ಪದ 'ಲೂಸ್' ಫ್ಯಾಮಿಲಿ ಈಗ ನಾಗೇಂದ್ರ ಅರಸ್‌ರ ಫೋನ್ ರಿಸೀವ್ ಮಾಡೋದನ್ನೇ ಬಿಟ್ಟಿದೆ.

ಪಂಕ್ಚರ್ ಆದ ಟ್ಯೂಬ್‌ನಂತಿರುವ ಲೂಸ್ ಮಾದನ ಸಂಭಾವನೆ ಬರೋಬ್ಬರಿ ಐವತ್ತು ಲಕ್ಷಕ್ಕೇರಿರುವುದೇ ಹೆಚ್ಚಾಗಿರುವಾಗ ಕೊಟ್ಟ ಕಾಸಿಗೂ ನಾಮ ತಿಕ್ಕುವ ಲೂಸ್ ಫ್ಯಾಮಿಲಿಯ ಪ್ರವೃತ್ತಿಯಿಂದ ಗಾಂಧಿನಗರ ಬೆಚ್ಚಿಬಿದ್ದಿದೆ!

'ದುನಿಯಾ' ರಶ್ಮಿಯ ರಂಪಾಟ!

'ದುನಿಯಾ' ಚಿತ್ರದ ನಂತರ ಒಂದೆರಡು ಚಿತ್ರಗಳಲ್ಲಿ ನಟಿಸಿ ಸೈಲೆಂಟಾಗಿ ಸೈಡಿಗೆ ಸರಿದಿದ್ದ ನಟಿ ರಶ್ಮಿ ಈಗ ಮತ್ತೆ ಧಿಗ್ಗನೆ ಪ್ರತ್ಯಕ್ಷಳಾಗಿದ್ದಾಳೆ. ಆದೂ ಕಿರಿಕ್ಕಿನೊಂದಿಗೆ.

ಎಂ.ಎಸ್. ಶ್ರೀನಿವಾಸ್ ನಿರ್ದೇಶಿಸಿ, ನಿರ್ಮಿಸುತ್ತಿರುವ 'ಸ್ವರಾಂಜಲಿ' ಎಂಬ ಚಿತ್ರಕ್ಕೆ ರಶ್ಮಿಯನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಆಕೆಯ ಕಾಲ್‌ಶೀಟಿಗೆ ಬರೋಬ್ಬರಿ 3.75 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಶ್ರೀನಿವಾಸ್ ಒಪ್ಪಿಕೊಂಡಿದ್ದರು.



ಅಷ್ಟೇ ಅಲ್ಲ, ಮುಂಗಡವೆಂದು 75 ಸಾವಿರ ರೂಪಾಯಿಗಳನ್ನು ರಶ್ಮಿ ಕೈಗೆ ತಲುಪಿಸಿದ್ದರು. ಈಗ ಚಿತ್ರೀಕರಣಕ್ಕೆ ಬಾರಮ್ಮ ಅಂತ ಶ್ರೀನಿವಾಸ್ ಕರೆದರೆ, ರಶ್ಮಿಯ ವರಸೆಯೇ ಬದಲಾಗಿದೆ. "ನಾನು ತುಂಬಾ ಬ್ಯುಸಿಯಾಗಿದ್ದೇನೆ. ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರಗಳಲ್ಲಿ ನಟಿಸುತ್ತಿದ್ದೇನೆ" ಎಂದಿದ್ದಾಳೆ ರಶ್ಮಿ. ತೆಲುಗು-ತಮಿಳು ಬಿಡಿ, ವಾಸ್ತವದಲ್ಲಿ ಕನ್ನಡದಲ್ಲೂ ಬೆರಳೆಣಿಕೆಯ ಚಿತ್ರಗಳನ್ನು ಬಿಟ್ಟರೆ ರಶ್ಮಿ ಕೈ ಈಗ ಖಾಲಿ ಖಾಲಿ. ಈಕೆಗೆ ನಟನೆ ಬರಲ್ಲ ಎಂಬ ಕಾರಣಕ್ಕೆ ಸೀರಿಯಲ್ಲಿನವರೂ ಈಕೆಯನ್ನು ಕರೆದು ಅವಕಾಶ ನೀಡಲು ಹಿಂಜರಿಯುತ್ತಿದ್ದಾರೆ. ಹೀಗಿರುವಾಗ ರಶ್ಮಿ "ನಾನು ಬ್ಯುಸಿ ಇದ್ದೀನಿ" ಎಂದು ಹೇಳಿರುವುದು ಮಾತ್ರ ಪಕ್ಕಾ ಬಂಡಲ್. ಹಾಗೊಮ್ಮೆ ಆಕೆ ಬ್ಯುಸೀ ಇದ್ದರೂ ಅದು ಸಿನಿಮಾದಲ್ಲಂತೂ ಅಲ್ಲ!

ಸದ್ಯಕ್ಕೆ ಶ್ರೀನಿವಾಸ್ ಕೊಟ್ಟಿರುವ ಮುಂಗಡ ಹಣ ವಾಪಸ್ ಬರೋದಂತೂ ಕಷ್ಟಕಷ್ಟ. ಯಾಕೆಂದರೆ ರಶ್ಮಿ ಯಾವಾಗ ಯಾವ ಊರಿನಲ್ಲಿ ಬಿಡಾರ ಹಾಕುತ್ತಾಳೆ ಅನ್ನೋದು ಸ್ವತಃ ಆಕೆಗೇ ಗೊತ್ತಿರಲ್ಲ!



ಮಾಗಡಿ
ಶಿಷ್ಯ ದೀಪಕ್
ರಕ್ಷಿತಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -560
Phone : 080-26676427, Fax : 080-26604536, E-mail : lankesh70@rediffmail.com